Funding: Tattva Heritage Foundation,Kolkata. Digitization: eGangotri.

CC-0. Bhagavad Ramanuja National Research Institute, Melukote Collection.

ಶ್ರೀಃ

ಕುಮಾರಸಂಭವ ಕಾವ್ಯ

ಮಹಾಕವಿ ಕಾಳಿದಾಸನು ಈ ಗ್ರಂಥವನ್ನು ರಚಿಸಿರುತ್ತಾನೆ. ಇದಲ್ಲದೆ 'ರಘು ವಂಶ' 'ಮೇಘದೂತ' ಎಂಬ ಎರಡು ಕಾವ್ಯಗಳನ್ನೂ, 'ಶಾಕುಂತಲ' 'ಮಾಲ ವಿಕಾಗ್ನಿಮಿತ್ರ' 'ವಿಕ್ರಮೋರ್ವಶೀಯ' ಎಂಬ ಮೂರು ನಾಟಕಗಳನ್ನೂ ಇವನು ಬರೆದಿರುತ್ತಾನೆ. ಕಾಳಿದಾಸನ ದೇಶಕಾಲಾದಿಗಳನ್ನು ನಿರ್ಣಯಿಸುವುದು ತುಂಬಾ ಕಷ್ಟತರವಾಗಿದೆ. ಇವನು ಕಾವ್ಯಗಳಲ್ಲಾಗಲೀ ನಾಟಕಗಳಲ್ಲಾಗಲೀ ತನ್ನ ವಿಷಯವನ್ನು ಏನೂ ಹೇಳಿಕೊಳ್ಳಲಿಲ್ಲ. ಕಾವ್ಯನಾಟಕಗಳು ಜನಜೀವನದ ಪ್ರತಿಬಿಂಬವಾದುದರಿಂದ ಇವನ ಕಾವ್ಯವಿಷಯವನ್ನು ನೋಡಿ ದೇಶಕಾಲಾದಿಗಳನ್ನು ನಿರ್ಣಯಿಸಬೇಕು. ಇದರಿಂದ ವಿಮರ್ಶಕರಲ್ಲಿ ಮತಭೇದ ಬರುವುದು ಸಹಜವಾಗಿದೆ. 'ಸರ್ ವಿಲ್ಲಿಯಮ್ ಜೋನ್ಸ್' ಎಂಬ ಪಾಶ್ಚಾತ್ಯವಿಮರ್ಶಕನು ಕಾಳಿದಾಸನು ಕ್ರಿಸ್ತ ಪೂರ್ವ ಒಂದನೇಶತಮಾನದಲ್ಲಿದ್ದನು ಎಂದು ಅಭಿಪ್ರಾಯಪಡುತ್ತಾನೆ. ಕ್ರಿಸ್ತಪೂರ್ವ 150 ರಲ್ಲಿ ಪತಂಜಲಿಋಷಿಯು ಮಹಾಭಾಷ್ಯದಲ್ಲಿ 'ಪುಷ್ಯಮಿತ್ರಸಭಾ' ಇತ್ಯಾದಿ ವಾಕ್ಯಗಳನ್ನು ಉದಾಹರಿಸಿರುತ್ತಾನೆ. ಪುಷ್ಯಮಿತ್ರನ ಮಗನೇ ಅಗ್ನಿಮಿತ್ರ. ಮಾಲವಿಕಾಗ್ನಿಮಿತ್ರ ನಾಟಕದಲ್ಲಿ ನಾಯಕನಾದ ಅಗ್ನಿಮಿತ್ರನೇ ಈತನೆಂದು ಜೋನ್ಸರ ಮತ. ಈ ಅಗ್ನಿಮಿತ್ರನಕಾಲದಲ್ಲಿಯೇ ಪಾರಸೀಕಾದಿಗಳ ದಿಗ್ವಿಜಯವಾದದ್ದು. ಅದನ್ನೇ ರಘುವಂಶದಲ್ಲಿ ರಘುವಿನ ದ್ವಿಗ್ವಿಜಯ ನೆಪದಿಂದ ಕವಿಯು ವರ್ಣಿಸಿರುತ್ತಾನೆಂದು ಸರ್ ವಿಲ್ಲಿಯಮ್ ಜೋನ್ಸರು ಹೇಳುತ್ತಾರೆ. ಈಜಿಪ್ಟಿನ ವಿದ್ವಾಂಸರಿಂದ ಈತನು ಜ್ಯೋತಿಃಶಾಸ್ತ್ರವನ್ನು ಚನ್ನಾಗಿ ತಿಳಿದಿರುತ್ತಾನೆಂದು ಅವರಮತ.

ಮೇಕ್ಸ್‌ಮೂಲರ್ ಎಂಬ ಪಾಶ್ಚಾತ್ಯವಿದ್ವಾಂಸರು ಕಾಳಿದಾಸನು ಸುಮಾರು ಕ್ರಿಸ್ತಶಕ. ನಾಲ್ಕರಮೇಲೆ ಐದನೇ ಶತಮಾನದ ಆದಿಯಲ್ಲಿ ಇದ್ದನೆಂದು ಆಯಾಯ ಯುಕ್ತಿಯಿಂದ ಸಮರ್ಥನೆಮಾಡಿರುತ್ತಾರೆ. ಹೀಗೆ ಇವರಿಬ್ಬರು ಹೇಳಿರುವ ವಾದವನ್ನೇ ಪ್ರಮಾಣವನ್ನಾಗಿ ಇಟ್ಟುಕೊಂಡು ನಾನಾರೀತಿಯಾಗಿವಾದಿಸುವ ವಿಮರ್ಶಕರು ಇದುವರೆಗೂ ಯಾವನಿರ್ಧಾರಕ್ಕೂ ಬಂದಿಲ್ಲ. ಸುಮಾರು ಕ್ರಿ.ಶಕ ನಾಲ್ಕನೇ ಶತಮಾನದ ಹಿಂದೆ ಕಾಳಿದಾಸನ ಕಾಲವೆಂದು ನಾವು ತಿಳಿಯಬಹುದು. ಇವನಿಗೆ ಉಜ್ಜಯಿನಿಯಲ್ಲಿ ಅಪಾರ ಭಕ್ತಿ ಪ್ರೀತಿಗಳಿವೆ. ಅದನ್ನು ತನ್ನ ಕಾವ್ಯಗಳಲ್ಲಿ ವ್ಯಕ್ತಪಡಿಸಿಯಿರುತ್ತಾನೆ. ಆದುದರಿಂದ ಉಜ್ಜಯಿನಿಯಲ್ಲಿಯೇ ಈತನು ಇದ್ದನೆಂದು ವಿಮರ್ಶಕರ ಮತ. ಈ ವಿಷಯದಲ್ಲಿ ಪ್ರಬಲವಾದ ವಿವಾದಗಳು ತೋರುವುದಿಲ್ಲ.

: Tattva Heritage Foundation,Kolkata. Digitization: eGangotri.

ಭಾರತದ ಮಹಾಕವಿಗಳಲ್ಲಿ ಮಹಾಕವಿಯಾದ ಇವನು ನಿರಹಂಕಾರಿ, ಶಾಸ್ತ್ರಜ್ಞ, ದೈವಭಕ್ತ, ದೇಶಪ್ರೇಮಿಯಾಗಿರುತ್ತಾನೆ. ಭಾರತದೇಶದ ಉತ್ಕರ್ಷ ಸೌಂದರ್ಯ ಎಲ್ಲವನ್ನೂ ಇವನ ಕಾವ್ಯಗಳಲ್ಲಿ ನೋಡಬಹುದು. ಮೊದಲು ದಡ್ಡನಾಗಿದ್ದು ಕಾಳಿಯ ಕೃಪಾಕಟಾಕ್ಷದಿಂದ ಬುದ್ಧಿವಂತನಾದನೆಂದು ಇವನ ವಿಷಯದಲ್ಲಿ ನಾನಾ ರೀತಿಯ ದಂತಕಥೆಗಳು ಉಪಲಬ್ಧವಾಗುತ್ತವೆ. 'ಅಸ್ತಿ, ಕಶ್ಚಿತ್, ವಾಗ್ವಿಶೇಷಃ' ಎಂದು ಕಾಳಿಯು ಅನುಗ್ರಹಿಸಿರುವುದರಿಂದ ಆಯಾಯ ಪದಗಳನ್ನೇ ಮೊದಲನೆಯ ಮಂಗಳ ಶ್ಲೋಕದಲ್ಲಿ ಮೊದಲು ನಿರ್ದೇಶಿಸಿರುತ್ತಾನೆಂದು ಹೇಳುತ್ತಾರೆ. 'ಅಸ್ತ್ಯುತ್ತರಸ್ಯಾಂ—' ಎಂದು ಕುಮಾರ ಸಂಭವದಲ್ಲಿಯೂ, 'ಕಶ್ಚಿತ್ಕಾಂತಾವಿರಹ—' ಎಂದು ಮೇಘದೂತದಲ್ಲಿಯೂ, 'ವಾಗರ್ಥಾವಿವ—' ಎಂದು ರಘುವಂಶದಲ್ಲಿಯೂ ಮೊದಲು ಪ್ರಾರಂಭಿಸಿರುವುದರಿಂದ ಮೇಲೆ ಹೇಳಿದ ಮಾತು ಸಮಂಜಸವಾಗಿ ತೋರುತ್ತದೆ. ಇವನ ಮೂರು ನಾಟಕಗಳಲ್ಲಿ ಉತ್ತಮವಾದ ಶಾಕುಂತಲವು ನಾಟಕ ಪ್ರಪಂಚದಲ್ಲಿಯೇ ಅತ್ಯುತ್ತಮ ಸ್ಥಾನವನ್ನು ಗಳಿಸಿದೆ. ಕಾವ್ಯಗಳಲ್ಲಿ ಉತ್ತಮವೂ ಪರಿಪೂರ್ಣವೂ ಆದದ್ದು ರಘುವಂಶ. ಮೇಘದೂತವು ಒಂದು ಖಂಡಕಾವ್ಯವಾದರೂ ಇದರ ಸೌಂದರ್ಯ ಇನ್ನಾವ ಕಾವ್ಯಗಳಲ್ಲಿಯೂ ದೊರೆಯಲಾರದು.

ಕುಮಾರಸಂಭವ ಮೂರನೇ ಕಾವ್ಯ. ಇದರಲ್ಲಿ ಕೇವಲ ಮೊದಲನೆಯ 8 ಸರ್ಗಗಳು ಮಾತ್ರ ಕಾಳಿದಾಸನವ್ದೆಂದೂ ಉಳಿದವು ಇತರ ಕವಿರಚಿತವೆಂದೂ ವಿಮರ್ಶಕರ ಅಭಿಪ್ರಾಯ. ತಾರಕಾಸುರನಿಂದ ಪರಾಜಿತರಾದ ದೇವತೆಗಳು ಬ್ರಹ್ಮನನ್ನು ಪ್ರಾರ್ಥಿಸಿದಾಗ ಅವನು "ಶಿವನು ಪಾರ್ವತಿಯನ್ನು ಮದುವೆಯಾಗಿ ಅವರಲ್ಲಿ ಜನಿಸುವ ಕುಮಾರನೇ ಸೇನಾಪತಿಯಾಗಿ ಯುದ್ಧಮಾಡಿದರೆ ತಾರಕಾಸುರನನ್ನು ಕೊಲ್ಲಬಹುದೆಂದು" ಹೇಳುತ್ತಾನೆ. ಆದರಂತೆ ದೇವತೆಗಳು ವಿರಕ್ತನಾದ ಪರಶಿವನನ್ನು ಮನ್ಮಥನ ಮೂಲಕ ವ್ಯಾಮೋಹಗೊಳಿಸಿ ತಪಸ್ಸಿನಿಂದ ಪರಿಶುದ್ಧಳಾದ ಪಾರ್ವತಿಯೊಡನೆ ವಿವಾಹಮಾಡಿಸಿ ಕುಮಾರಜನನವನ್ನು ನಿರೀಕ್ಷಿಸುತ್ತಿರುತ್ತಾರೆ. ಇದನ್ನೇ ಕಥಾವಿಷಯವನ್ನಾಗಿ ಆರಿಸಿಕೊಂಡು ಕಾಳಿದಾಸನು ಸುಂದರವಾಗಿ ಕುಮಾರ ಸಂಭವಕಾವ್ಯವನ್ನು ರಚಿಸಿರುತ್ತಾನೆ. 'ಕುಮಾರವಿಜಯ' ಎಂದು ಹೆಸರನ್ನಿಡದೆ 'ಕುಮಾರಸಂಭವ' ಎಂದು ಕಾವ್ಯನಾಮವನ್ನಿಟ್ಟ ಕಾಳಿದಾಸನು ಎಂಟೇ ಸರ್ಗಗಳನ್ನು ರಚಿಸಿರುತ್ತಾನೆ ಎಂಬುದರಲ್ಲಿ ಸಂಶಯವಿಲ್ಲ. ಸಂಭವಪಡಕ್ಕೆ ನಿಷೇಕವೆಂಬರ್ಥವನ್ನು ವಿದ್ವಾಂಸರು ಅಂಗೀಕರಿಸಿರುತ್ತಾರೆ. ವೀರಪುತ್ರ ಕುಮಾರನಜನನಕೆ ಪರಿಪೋಷಕವನ್ನೊದಗಿಸುವ ಇತರವಿಷಯಗಳನ್ನೂ ಸೇರಿಸಿ ಕುಮಾರಸಂಭವವನ್ನು ಸುಂದರವಾಗಿ ವರ್ಣಿಸಿರುತ್ತಾನೆ.

'ಉಪಮಾ ಕಾಳಿದಾಸಸ್ಯ' ಎಂಬ ಪ್ರಸಿದ್ಧಿಯು ಇವನ ವಿಷಯದಲ್ಲಿ ಬಂದಿದೆ. ಇವನು ಕೊಡತಕ್ಕ ಉಪಮೆಗಳು (ಸಾದೃಶ್ಯ) ದೇಶಕಾಲಕ್ಕೆ ಹೊಂದಿಕೊಂಡಿರುವುದ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. DIgitization: eGangotri.

ರಿಂದ ಸುಂದರವಾಗಿ ಜನಸಾಮಾನ್ಯರಿಗೂ ಚನ್ನಾಗಿ ತಿಳಿಯುವುದರಿಂದ ಮನೋರಂಜಕಗಳಾಗಿರುತ್ತವೆ. ಸುಲಲಿತವಾದ ಉದಾಹರಣೆಗಳಿಂದ ಕಠಿಣವಾದ [illegible]

ಇವು ಕಾವ್ಯಗಳು ಮುಖ್ಯವಿಷಯಗಳಾಗಿರುವುದರಿಂದ [illegible]

ವೀರಸೇನಾನಿಯಾದ ಷಣ್ಮುಖನ ಜನನವನ್ನು ವರ್ಣಿಸುವುದರಿಂದ ಈ ಕಾವ್ಯಕ್ಕೆ 'ಕುಮಾರಸಂಭವ' ಎಂಬ ಹೆಸರು ಬಂದಿದೆ. ಕುಮಾರನತಾಯಿಯೇ ಪಾರ್ವತಿ. ಇವಳೇ ಸತೀ ಎಂಬ ಹೆಸರಿನಿಂದ ಲೋಕಮಾತೆಯಾದ ಶಿವನ ಪೂರ್ವಪತ್ನಿ. ಸತಿಯನ್ನು ದಕ್ಷಪ್ರಜಾಪತಿಯ ಮಗಳು. ಶಿವನು ಹೆಚ್ಚಾಗಿ ಮಾವನಿಗೆ ಮರ್ಯಾದೆ ಮಾಡದಿರುವುದರಿಂದಲೂ ಆಳಿಯನು ದರಿದ್ರನೂ ಮತ್ತು ಅಹಂಕಾರಿಯೆಂದು ದಕ್ಷನು ಅವನನ್ನು ದ್ವೇಷಿಸುವುದಲ್ಲದೆ ಮಗಳಾದ ಸತಿಯನ್ನೂ ಪ್ರೀತಿಸುತ್ತಿರಲಿಲ್ಲ. ಹೀಗೆ ತಂದೆಯಿಂದ ತಿರಸ್ಕರಿಸಲ್ಪಟ್ಟ ಸತಿಯು ಅವನ ಯಾಗಕುಂಡದಲ್ಲಿಯೇ ಹಾರಿ ಆಶರೀರವನು ಕಳೆದು ಕೊಂಡು ಎರಡನೇಯ ಜನ್ಮಕ್ಕಾಗಿ ಹಿಮವಂತನ ಮಡದಿಯಾದ ಮೇನಕೆಯನ್ನು ಹೊಂದಿದಳು.

ಕುಮಾರನ ಕುಲವು ಪವಿತ್ರವಾಗಿದೆಎಂದು ತಿಳಿಸಲು ಪಾರ್ವತಿಯ ತಂದೆಯಾದ ಹಿಮವಂತನ ವಿಷಯವನ್ನೇ ತನ್ನಕಾವ್ಯದಲ್ಲಿ ಮೊದಲು ಆರಿಸಿಕೊಂಡಿರತ್ತಾನೆ.

ಹಿಮವತ್ಪರ್ವತವು ಭಾರತದ ಉತ್ತರಗಡಿ. ಪ್ರಪಂಚದ ಪರ್ವತಗಳಲ್ಲೆಲ್ಲಾ ಉತ್ತಮವಾದುದಲ್ಲದೆ ಸರ್ವವಿಷಯಗಳಲ್ಲಿಯೂ ಸರ್ವೋನ್ನತಿಯನ್ನು ಹೊಂದಿದೆ. ಇದಕ್ಕೆ ಅಭಿಮಾನಿಯಾದ ಹಿಮಾಲಯನು ದೇವತಾಸ್ವರೂಪಿ, ಸರ್ವದೇವಪೂಜ್ಯನು. ಕವಿಯು ಹಿಮವಂತನನ್ನು ವರ್ಣಿಸುವಾಗ ಕೆಲವುಕಡೆ ಚೇತನಸ್ವರೂಪವನ್ನು ಇನ್ನು ಕೆಲವುಕಡೆ ಅಚೇತನಸ್ವರೂಪವನ್ನೂ ತೆಗೆದುಕೊಂಡಿರುತ್ತಾನೆ. ಆ ವರ್ಣನೆಯನ್ನು ಓದುವಾಗ ನಮ್ಮ ಎದುರಿಗೇ ಹಿಮಾಲಯವು ಸಿಂತಂತೆ ಭಾಸವಾಗುತ್ತದೆ.

— ಹಿಮವಂತನ ವರ್ಣನೆ —

ಭಾರತಭೂಮಿಯ ಆಳತೆಯಕೊಲಿನಂತೆ ಪೂರ್ವಪಶ್ಚಿಮಸಮುದ್ರದವರೆಗೆ ವ್ಯಾಪಿಸಿರುವ ಹಿಮಾಲಯವು ಅಭಿಮಾನಿದೇವತೆಯಿಂಜೊಡಗೊಂಡು ಉತ್ತರದಿಕ್ಕಿನಲ್ಲಿ ಉನ್ನತವಾಗಿದೆ. ಪ್ರಪಂಚದಲ್ಲಿ ದೊರೆಯುವ ಎಲ್ಲಾ ಮಹೌಷಧಿಗಳೂ, ಉತ್ಕೃಷ್ಟವಾದ ರತ್ನಗಳೂ ಈ ಪರ್ವತದಲ್ಲಿ ಪೇರಳವಾಗಿ ದೊರೆಯುತ್ತವೆ. ಲೋಕಕ್ಕೆ ಆನಂದವನ್ನುಂಟುಮಾಡುವ ಚಂದ್ರನಿಗೆ ಕಲಂಕವು ಸೌಂದರ್ಯನಾಶಕವಾಗುವುದಿಲ್ಲ. ಅದರಂತೆ ರತ್ನಾಕರನಾದ ಹಿಮವಂತನಿಗೆ ಹಿಮವು ಸೌಂದರ್ಯವಿಘಾತಕವಾಗಲಿಲ್ಲ. ಗುಣಸಮುದಾಯದಲ್ಲಿ ಒಂದು ಅಲ್ಪದೋಷವು ಮುಚ್ಚಿಹೋಗುವುದು ಸ್ವಾಭಾವಿಕ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಇವನು ಆಕಾಶವ್ಯಾಪಿಯಾಗಿ ಗೈರಿಕಾದಿಧಾತುಗಳಿಂದ ಅಲಂಕೃತನಾದುದರಿಂದ ದೂರದಿಂದ ನೋಡುವವರಿಗೆ ಅಕಾಲದಲ್ಲಿಆದ ಸಂಧ್ಯಾಕಾಲದ ಭ್ರಮೆಯನ್ನುಂಟುಮಾಡುತ್ತಾನೆ. ಆಗ ವಿದ್ಯಾಧರಸ್ತ್ರೀಯರೂ ಭ್ರಾಂತಿಯಿಂದ ಪ್ರಿಯನ ಅನುರಾಗಕ್ಕೋಸ್ಕರ ಅಲಂಕಾರಮಾಡಿಕೊಳ್ಳುವುದರಲ್ಲಿ ತ್ವರೆಮಾಡುತ್ತಾರೆ. ಸಿದ್ಧರೂ ತಪ್ಪಲುಭಾಗದಲ್ಲಿರುವಾಗ ಮಳೆಯಿಂದ ಪೀಡಿತರಾಗಿ ಬಿಸಿಲಿಗೋಸ್ಕರ ಈ ಪರ್ವತದ ಮೇಲ್ಭಾಗವನ್ನಾಶ್ರಯಿಸುತ್ತಾರೆ. ಶೂರರಾದ ಕಿರಾತರು ಸಿಂಹಗಳ ಹೆಜ್ಜೆಗಳ ಗುರುತಿನಿಂದ ಅವುಗಳ ಸ್ಥಾನವನ್ನು ಗುರುತಿಸಿ ಬೇಟೆಯಾಡುತ್ತಾರೆ. ಸಿಂಹಗಳು ಆಗತಾನೆ ಆನೆಗಳ ಕುಂಭಸ್ಥಳಗಳನ್ನು ಭೇದಿಸಿ ಹೋದುದರಿಂದ ಪಾದಗಳ ಸಂದಿಗಳಲ್ಲಿ ಕುಂಭಸ್ಥಳದ ಮುತ್ತುಗಳು ಆಂಟಿಕೊಂಡುದುದರಿಂದ ನಡೆಯುವಾಗ ಅಲ್ಲಲ್ಲಿ ಮುತ್ತು ಉದುರಿರುತ್ತವೆ. ಇದರಿಂದ ಸುಖವಾಗಿ ಕಿರಾತರು ಸಿಂಹಗಳನ್ನು ಹುಡುಕುತ್ತಿದ್ದರು. ಭೂರ್ಜಮರಗಳು ಹೇರಳವಾಗಿ ಇಲ್ಲಿ ಬೆಳೆಯುವುದರಿಂದ ಅದರ ತೊಗಟೆಗಳನ್ನೇ ಕಾಗದವನ್ನಾಗಿ ಮಾಡಿಕೊಂಡು ಧಾತುರಸದಿಂದ ವಿದ್ಯಾಧರಸ್ತ್ರೀಯರು ತಮ್ಮ ಪ್ರಿಯರಿಗೆ ಪ್ರೇಮಪತ್ರವನ್ನು ಬರೆಯುತ್ತಾರೆ. ಕಿನ್ನರರು ಗಾನಮಾಡುತ್ತಿರುವಾಗ ಇವನು ವೇಣುಗಾನವನ್ನು ಮಾಡಿ ಅವರ ಸಂಗೀತವನ್ನು ನುಡಿಸುತ್ತಾನೆ. ಇದಕ್ಕೆ ಕಾರಣ ಬೇರೇನೂ ಇಲ್ಲ. ಬಿದಿರು ಹೇರಳವಾಗಿ ಬೆಳೆದಿರುತ್ತದೆ. ದುಂಬಿಗಳು ಅಲ್ಲಲ್ಲಿ ತೂತು ಕೊರೆದಿರುವುದರಿಂದ ಗುಹಾಮುಖದಿಂದ ಬೀಸುವ ಗಾಳಿಯು ಆ ರಂಧ್ರದಲ್ಲಿ ತುಂಬುವುದರಿಂದ ಅನಾಯಾಸವಾಗಿ ಕೊಳಲೂದಿದಂತಾಗುತ್ತದೆ. ಮದದಿಂದ ಕೊಬ್ಬಿದ ಆನೆಗಳು ನವೆಹೋಗಲಾಡಿಸಿಕೊಳ್ಳಲು ಸರ್ಜವೃಕ್ಷಗಳನ್ನು ತಿಕ್ಕುವುದರಿಂದ ತೊಗಟೆ ಕಿತ್ತುಹೋಗಿ ಹಾಲುಸುರಿಯುವುದರಿಂದ ತಪ್ಪಲು ಪ್ರದೇಶಗಳೆಲ್ಲಾ ಅದರ ಗಂಧದಿಂದ ಪರಿಮಳೀಕರಿಸಲ್ಪಡುತ್ತವೆ. ಜ್ಯೋತಿರ್ಲತೆಗಳು ರಾತ್ರಿಯಲ್ಲಿ ಬೆಳಗುವುದರಿಂದ ಗುಹಾಮನೆಗಳಲ್ಲಿ ವಾಸಿಸುವ ಕಿರಾತರಿಗೆ ಸುರತಕ್ರೀಡೆಯಲ್ಲಿ ಎಣ್ಣೆ ಇಲ್ಲದ ದೀಪವಿದ್ದಂತಾಗುತ್ತದೆ. ಕಿನ್ನರಸ್ತ್ರೀಯರು ನಿತಂಬಭಾರದಿಂದ ಹಿಮಪ್ರದೇಶದಲ್ಲಿ ನಡೆಯುವಾಗ ಬೆರಳು ಸಂದಿಗಳಲ್ಲಿ ಹಿಮದ ಶೈತ್ಯದಿಂದ ವ್ಯಥೆಯಾಗುತ್ತಿದ್ದರೂ ತಮ್ಮ ಮಂದಗಮನವನ್ನು ಬಿಡುತ್ತಿರಲಿಲ್ಲ. ಸೂರ್ಯನು ಉದಯಿಸಿದಾಗ ಪ್ರಪಂಚದ ಕತ್ತಲೆಯೆಲ್ಲಾ ಈ ಹಿಮವಂತನ ಗುಹೆಗಳಲ್ಲೇ ಆಶ್ರಯ ಪಡೆಯುತ್ತಿದ್ದವು. ಶರಣಾಗತರಿಗೆ ಆಶ್ರಯವನ್ನು ಕೊಡುವುದು ಮಹಾತ್ಮರಲಕ್ಷಣವಾದುದರಿಂದ ಮಹಾತ್ಮನಾದ ಹಿಮವಂತನು ತನ್ನ ಕರ್ತವ್ಯವನ್ನು ಮಾಡುತ್ತಿದ್ದನು. ಚಮರೀಮೃಗಗಳು ಬಾಲವನ್ನಲ್ಲಾಡಿಸುತ್ತಾ ಸುಖವಾಗಿ ತಿರುಗುತ್ತಿರುವಾಗ ಗಿರಿರಾಜನಿಗೆ ಚಾಮರಸೇವೆ ಮಾಡುತ್ತವೆಯೋ ಎಂಬಂತೆ ತೋರುತ್ತಿತ್ತು. ರತಿಕಾಲದಲ್ಲಿ ಪ್ರಿಯರಿಂದ ಅಪಹರಿಸಲ್ಪಟ್ಟ ವಸ್ತ್ರವುಳ್ಳ ಕಿಂಪುರುಷರ ಸ್ತ್ರೀಯರು ಲಜ್ಜಿತರಾದಾಗ ಅಕಸ್ಮಾತ್ತಾಗಿ ಗುಹಾಮುಖಕ್ಕೆ ಬಂದ ಮೋಡಗಳು ಪರದೆಯಂತಾಗುತ್ತವೆ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಪಾರ್ವತಿಯ ವರ್ಣನೆ.

ದೇವತೆಗಳನ್ನು ಪಾದದಿಂದ ತಲೆಯವರೆಗೂ, ಮನುಷ್ಯರನ್ನು ತಲೆಯಿಂದ ಶಾಲಿನವರೆಗೂ ವರ್ಣಿಸುವುದು ಸಂಪ್ರದಾಯ. ಆದರಂತೆ ಪಾದದಿಂದ ತಲೆಯವರೆಗೆ ಪಾರ್ವತಿಯನ್ನು ವರ್ಣಿಸಿರುತ್ತಾನೆ. ಸ್ವಭಾವದಿಂದ ಅತಿ ಕೆಂಪಾದ ಪಾರ್ವತಿಯ ಪಾದಗಳು ಭೂಮಿಯಲ್ಲಿ ಇಡುವಾಗ ಒತ್ತಲ್ಪಟ್ಟು ಕೆಂಪುಬಣ್ಣವನ್ನು ಸೂಸುವುವೋ ಎಂಬಂತೆ ಕೆಂಪಾಗಿ ಬೆಟ್ಟದಾವರೆಯ ಶೋಭೆಯನ್ನು ಅಪಹರಿಸಿದವು. ತನ್ನ ಕಡಗದ ಧ್ವನಿಯನ್ನು ಉಪದೇಶಿಸುವೆನೆಂದು ಪಾರ್ವತಿಯು ಹಂಸಗಳ ಮುಂದ ಗಮನವನ್ನು ಅಭ್ಯಾಸಮಾಡಿದಳು. ದುಂಡಾಗಿಯೂ ಅದಕ್ಕೆ ತಕ್ಕಂತೆ ಉದ್ದವಾಗಿರುವ ಅವಳ ಮೊಳಕಾಲುಗಳು ಅತಿ ಸುಂದರವಾಗಿದ್ದುವು. ಇವುಗಳನ್ನು ನಿರ್ಮಿಸುವುದರಲ್ಲಿಯೇ ಬ್ರಹ್ಮನ ಸೊಬಗಿನ ಶೇಖರಣೆಯು ಮುಗಿದುಹೋಯಿತು. ಕ್ರಮದಿಂದ ದುಂಡಾಗಿ ಅತಿ ನುಣುಪಾಗಿ ಬಿಸಿಯಾಗಿರುವ ಅವಳ ತೊಡೆಗೆ ಯಾವ ಉಪಮೆ ಹೇಳಲೂ ಸಾಧ್ಯವಿಲ್ಲ. ಆನೆಯ ಸೊಂಡಿಲೆಂದರೆ ಅದು ಅತಿ ಒರಟಾಗಿ ಬಿರುಸಾಗಿದೆ. ಬಾಳೆಯದಿಂಡಿನ ಸಾದೃಶ್ಯ ಹೇಳಬಹುದೆಂದರೆ ನುಣುಪಾಗಿದ್ದರೂ ತುಂಬಾ ತಣ್ಣಗಾಗಿರುತ್ತದೆ. ಆದುದರಿಂದ ಪ್ರಪಂಚದಲ್ಲಿ ಇದಕ್ಕೆ ಸಮವಾದ ವಸ್ತು ಯಾವುದೂ ಇಲ್ಲ. ಅವಳ ನಿತಂಬದ ಸೌಂದರ್ಯವು ಅಸಾಧಾರಣವಾದದ್ದು. ಪರಮೇಶ್ವರನೇ ಮನಸೋತು ಅದನ್ನು ತನ್ನ ತೊಡೆಯಮೇಲೆ ಏರಿಸಿಕೊಂಡಿರುತ್ತಾನೆಂದ ಮೇಲೆ ಇನ್ನು ಬಣ್ಣಿಸಬೇಕಾಗಿಲ್ಲ. ನೀಲವಾದ ರೋಮಪಂಕ್ತಿಯು ಆಳವಾದ ಹೊಕ್ಕಳನ್ನು ಪ್ರವೇಶಿಸಿ ಡಾಬಿನ ನೀಲವಾದ ಮಧ್ಯಮಣಿಯ ಕಾಂತಿಯ ರೇಖೆಯಂತೆ ಶೋಭಿಸುತ್ತಿತ್ತು. ಸುಂದರವಾದ ತ್ರಿವಳಿಯನ್ನು ಹೊಂದಿದ ನಡುವು ಅತ್ಯಲ್ಪವಾಗಿತ್ತು. ಹೊಸದಾದ ಯೌವನವು ಕಾಮನ ಆಗಮನಕ್ಕೆ ರಚಿಸಿದ ಮೂರು ಸೋಪಾನಗಳೋ (ಮೆಟ್ಟಿಲು) ಎಂಬಂತೆ ತ್ರಿವಳಿಗಳು ಶೋಭಿಸುತ್ತಿದ್ದವು. ಕಪ್ಪಾದ ತುದಿಯುಳ್ಳ ಕುಚಗಳು ದುಂಡಾಗಿ ಬೆಳೆದುದರಿಂದ ಮಧ್ಯದಲ್ಲಿ ತಾವರೆದಂಟಿನ ನೂಲಿನ ಪ್ರವೇಶವೂ ದುಸ್ಸಾಧ್ಯವಾಗಿತ್ತು. ಇವಳ ಸುಂದರವಾದ ತೋಳುಗಳನ್ನು ಮುಂದೆ ಮದನನು ಶಿವನಕಂಠಪಾಶವನ್ನಾಗಿ ಕಲ್ಪಿಸಿದುದರಿಂದ ಶಿರೀಷಪುಷ್ಪಗಳಿಗಿಂತಲೂ ಅವು ಮೃದುವಾಗಿ ಇವೆಯೆಂದು ಊಹಿಸಬಹುದು. ಮುತ್ತಿನ ಹಾರದಿಂದ ಕಂಠವೂ, ಸುಂದರ ಕಂಠದಿಂದ ಮುತ್ತಿನ ಹಾರವೂ ಬೆಳಗುತ್ತಿದ್ದುವು. ಚಂದ್ರ ಮತ್ತು ಕಮಲಗಳ ಸೌಂದರ್ಯಕ್ಕಿಂತಲೂ ಮಿಗಿಲಾದ ಸೌಂದರ್ಯವನ್ನು ಹೊಂದಿರುವ ಇವಳ ಮುಖದಲ್ಲಿ ಕಾಂತಿಲಕ್ಷ್ಮಿಯು ನಿತ್ಯವಾಸವನ್ನು ಕಲ್ಪಿಸಿ ಕೊಂಡಳು. ಬೆಳ್ಳಗಾದ ಮುಗಳ್ನಗೆಯಿಂದ ಕೂಡಿದ ಕೆಂಪಾದ ಇವಳ ತುಟಿಗೆ ಸಾಮ್ಯವನ್ನು ಹೇಳುವುದಾದಕೆ ವಸ್ತುವನ್ನು ಕಲ್ಪಿಸಬೇಕು. ಚಿಗುರಿನಿಂದ ಕೂಡಿದ ಬೆಳ್ಳಗಾದ ಹೂವು, ಹವಳದ ಮೇಲಿರುವ ಶುದ್ಧವಾದ ಮುತ್ತು ಇವುಗಳನ್ನು ಕಲ್ಪಿಸಿದರೆ ಆಗ ಸಮಾಗ ಬಹುದು. ಮಧುರ ಧ್ವನಿಯಿಂದ ಇವಳು ಮಾತನಾಡುವಾಗ ಕೋಗಿಲೆಯ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಸ್ವರವೂ ಕೆಟ್ಟುಹೋದ ತಂತಿಯುಳ್ಳ ವೀಣೆಯ ಸ್ವರದಂತೆ ಕೇಳುವವರಿಗೆ ವಿರಸವನ್ನುಂಟುಮಾಡುತ್ತಿತ್ತು. ಗಾಳಿಯಿಂದ ಮೆಲ್ಲನೆ ಅಲ್ಲಾಡುತ್ತಿರುವ ಕನ್ನೈದಿಲೆಯಂತಿರುವ ಇವಳ ಕಣ್ಣಿನ ನೋಟವು ಜಿಂಕೆಗಳಿಂದ ಅಭ್ಯಾಸಿಸಲ್ಪಟ್ಟಿತೆನಿಸಿತು. ಅಥವಾ ಜಿಂಕೆಗಳೇ ಇವಳಿಂದ ಕಲಿತವಯೋ ಎಂದು ನಿರ್ಣಯಿಸಲಸಾಧ್ಯವಾಗಿತ್ತು. ಕಾಡಿಗೆಯಿಂದ ಬರೆದಿಟ್ಟಂತಿರುವ ಇವಳ ಹುಬ್ಬಿನ ಸುಂದರವಾದ ಕಾಂತಿಯನ್ನು ನೋಡಿ ಮನ್ಮಥನು ತನ್ನ ಬಿಲ್ಲಿನ ಸೌಂದರ್ಯಮದವನ್ನು ಬಿಟ್ಟುಬಿಟ್ಟನು. ಚಮರೀ ಮೃಗಗಳ ಬಾಲಕ್ಕಿಂತಲೂ ಇವಳ ಕೂದಲು ಮನೋಹರವಾಗಿತ್ತು. ಇವಳ ಕೂದಲನ್ನು ನೋಡಿ ನಿಜವಾಗಿಯೂ ಆ ಮೃಗಗಳು ತಮ್ಮ ಬಾಲದ ವಿಷಯದಲ್ಲಿ ನಾಚಿಕೊಂಡು ಬಾಲಪಲ್ಲಿರುವ ಮಮತೆಯನ್ನು ಬಿಡಬೇಕಾಗಿತ್ತು. ಆದರೆ ಅವು ಬುದ್ಧಿಶೂನ್ಯಗಳಾದುದರಿಂದ ಇನ್ನೂ ಬಾಲದ ವ್ಯಾಮೋಹವನ್ನು ಹೊಂದಿರುತ್ತವೆ-ಹೆಚ್ಚಿಗೆ ಹೇಳುವುದೇನಿದೆ? ಲೋಕದಲ್ಲಿ ಉಪಮಾ ಕೊಡಲು ಯೋಗ್ಯವಾದ ಯಾವ ಉತ್ಕೃಷ್ಟಪದಾರ್ಥಗಳಿವೆಯೋ ಅವುಗಳನ್ನೆಲ್ಲಾ ಒಂದೇಕಡೆ ಸೇರಿಸಿ ಅದನ್ನು ನೋಡಿ ಆನಂದಪಡಬೇಕೆಂದೇ ಬ್ರಹ್ಮನು ಅವಳನ್ನು ನಿರ್ಮಿಸಿರುತ್ತಾನೆ.

ಬ್ರಹ್ಮನ ವರ್ಣನೆ.

ಸೃಷ್ಟಿಯ ಮೊದಲು ಒಬ್ಬನೇ ಆಗಿದ್ದು, ಸೃಷ್ಟಿಯ ಕಾಲದಲ್ಲಿ ಸತ್ವ, ರಜಸ್ಸು, ತಮಸ್ಸು ಈ ಮೂರು ಗುಣಗಳಿಂದ ಬ್ರಹ್ಮವಿಷ್ಣುರುದ್ರರೂಪಿಯಾಗಿ ಮೂರು ರೂಪವನ್ನು ಹೊಂದಿರುವ ನಿನಗೆ ನಮಸ್ಕಾರ. ಮೊದಲು ನೀರನ್ನು ಸೃಷ್ಟಿಮಾಡಿ ಅದರಲ್ಲಿ ಅಮೋಘವಾದ ನಿನ್ನ ರೇತಸ್ಸನ್ನು ಇಟ್ಟಿರುವಿ. ಅದರಿಂದಲೇ ಈ ಚರಾಚರ ಜಗತ್ತು ಉಂಟಾಗಿದೆ. ಒಬ್ಬನೇ ಆದರೂ ಹಿಂದೆ ಹೇಳಿದಂತೆ ಮೂರು ಗುಣಗಳಿಂದ ಹರಿಹರ ಬ್ರಹ್ಮಸ್ವರೂಪವನ್ನು ತಾಳಿ ನಿನ್ನ ಶಕ್ತಿಯಿಂದಲೇ ಉತ್ಪತ್ತಿ ಸ್ಥಿತಿ ಲಯಗಳಿಗೆ ಕಾರಣಭಾವವನ್ನು ಹೊಂದಿರುವಿ ಪ್ರಪಂಚವನ್ನು ಸೃಷ್ಟಿಸುವ ಉದ್ದೇಶದಿಂದ ನಿನ್ನ ದೇಹವನ್ನೇ ಎರಡು ಭಾಗಗಳನ್ನಾಗಿ ಕಲ್ಪಿಸಿಕೊಂಡು ಸ್ತ್ರೀ ಪುರುಷರೂಪವನ್ನು ಹೊಂದಿರುವಿ. ಅವುಗಳೇ ಪ್ರಪಂಚಕ್ಕೆ ತಾಯಿತಂದೆಗಳಾಗಿರುತ್ತವೆ. ನಿನ್ನ ರಾತ್ರಿ ಹಗಲುಗಳು ಈ ಪ್ರಪಂಚಕ್ಕೆ ಪ್ರಲಯ ಮತ್ತು ಉದಯಗಳಾಗುತ್ತವೆ. ನೀನು ಜಗತ್ತಿಗೆ ಕಾರಣನಾದರೂ ನಿನಗೆ ಯಾರು ಕಾರಣರಿಲ್ಲ. ನೀನು ಜಗತ್ತಿಗೆ ನಾಶಕನಾದರೂ ನಿನ್ನನು ನಾಶ ಮಾಡುವವರು ಇಲ್ಲ. ಹಾಗೆಯೇ ಜಗತ್ತಿಗೆ ನೀನು ಆದಿಪುರುಷನಾದರೂ ನೀನು ಅನಾದಿಯಾಗಿರುವಿ. ಜಗತ್ತಿಗೆ ಒಡೆಯನಾಗಿದ್ದರೂ ನೀನು ಯಾರ ಅಧೀನನೂ ಅಲ್ಲ. ನಿನ್ನನ್ನು ತಿಳಿದವನು ನೀನೇ. ಯಾವ ಕಾರಣ ಸಾಮಗ್ರಿ ಇಲ್ಲದೆ ಸೃಷ್ಟಿಮಾಡುವಿ. ನಿನ್ನಲ್ಲಿಯೇ ನೀನು ಅಂತರ್ಧಾನ ಹೊಂದುವಿ. ಪ್ರಪಂಚಕ್ಕೆ ಇದ್ದಂತೆ ಜ್ಞಾನ, ಉತ್ಪತ್ತಿ, ಲಯದಲ್ಲಿ ನಿನಗೆ ಪರಾಪೇಕ್ಷೆ ಇಲ್ಲ. ಅಣಿಮಾದಿ ಅಷ್ಟೈಶ್ವರ್ಯ ಸಂಪನ್ನನಾದುದರಿಂದ ನದೀ ಸಮುದ್ರಗಳಂತೆ ದ್ರವಪದಾರ್ಥದಂತಿದ್ದರೂ ಪಾಷಾಣಾದಿಗಳಂತೆ ಕಠಿಣ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ನಾಗಿರುವಿ. ಚಕ್ಷುರಾದಿಗಳಿಂದ ನೋಡುವಂತೆ ಸ್ಥೂಲರೂಪನಾಗಿದ್ದರೂ ಅಣುವಿನಂತೆ ಸೂಕ್ಷ್ಮನೂ ಆಗಿರುವಿ. ಹತ್ತಿಯಂತೆ ಲಘುವಾಗಿಯೂ ; ಹಿಮಾಲಯದಂತೆ ಗುರುವೂ ಆಗಿರುವಿ. ಕಾರ್ಯನೂ ನೀನು ಕಾರಣನೂ ನೀನು. ಹೀಗೆ ಅಷ್ಟೈಶ್ವರ್ಯಗಳಿಂದ ಕಾಮ ರೂಪಿಯಾಗಿರುವಿ. ವೇದಾರಂಭದಲ್ಲಿ ಹೇಳುವ ಓಂಕಾರವೇ ನೀನು. ಸ್ವರ್ಗಾದಿಫಲಗಳನ್ನು ಹೇಳುವ ವೇದವೂ ನಿನ್ನಿಂದಲೇ ಉದ್ಭವವಾಗಿದೆ. ಸಾಂಖ್ಯರು ಹೇಳುವ ಮೂಲಪ್ರಕೃತಿಯೂ ನೀನು. ಅಪವರ್ಗವನ್ನು ಹೊಂದುವ ಪುರುಷನೂ ನೀನೇ ಆಗಿರುವಿ. ಪಿತೃಗಳಿಗೆ ಆದಿಪಿತೃವು ನೀನೇ. ದೇವತೆಗಳಲ್ಲೆಲ್ಲಾ ಮೊದಲನೆಯ ದೇವತೆ ನೀನು. ಎಲ್ಲಾಪದಾರ್ಥಗಳಿಗಿಂತ ಪರವಾದ ಉತ್ಕೃಷ್ಟವಾದ ಪದಾರ್ಥ ನೀನೇ ಆಗಿರುವಿ. ದಕ್ಷಾದಿಬ್ರಹ್ಮರಿಗೂ ನೀನು ಮೊದಲನೆಯ ಬ್ರಹ್ಮನಾಗಿರುವಿ. ಹವಿಸ್ಸೂ, ಹೋಮಮಾಡುವವನೂ, ತಿನ್ನುವವಸ್ತುವೂ ತಿನ್ನುವವನೂ, ತಿಳಿಯಲ್ಪಡುವ ವಸ್ತುವೂ ತಿಳಿಯುವವನೂ, ಧ್ಯಾನಿಸುವವನೂ, ಧ್ಯೇಯವಸ್ತುವೂ ಎಲ್ಲವೂ ನೀನೇ ಆಗಿರುವಿ.

ಬ್ರಹ್ಮನು ದೇವತೆಗಳ ಕುಶಲವಾರ್ತೆ ಕೇಳಿದ ರೀತಿ

ದೇವತೆಗಳೇ—ಹಿಮಕಾಲದಲ್ಲಿ ಮೊಬ್ಬಾದ ಚಂದ್ರಿಕೆಯಂತೆ ನಿಮ್ಮ ಮುಖಗಳು ಕಳೆಗುಂದಿರಲು ಕಾರಣವೇನು ? ಹಿಂದೆ ವಿಜಯವನ್ನು ಗಳಿಸಿರುವ ಈ ಇಂದ್ರನ ವಜ್ರಾಯುಧವು ಈಗ ನಿಷ್ಫಲವಾದಂತೆ ತೋರಲು ಕಾರಣವೇನು ? ವರುಣನ ಪಾಶಾಯುಧಕ್ಕೆ ಹಿಂದೆಂದೂ ತಡೆ ಇರಲಿಲ್ಲ. ಈಗ ಗರುಡ ಮಂತ್ರದಿಂದ ಶಕ್ತಿಗುಂದಿದ ಹಾವಿನಂತೆ ವೀರ್ಯಶೂನ್ಯವಾಗಲು ಕಾರಣವೇನು ? ಕುಬೇರನ ಮುಖನೋಡಿದೊಡನೆಯೇ ಸೋಲಿನವಿಷಯ ತಿಳಿಯುತ್ತದೆ. ಮುರಿದ ಕೊಂಬೆಯುಳ್ಳ ಮರದಂತೆ ಗಧಾಯುಧವಿಲ್ಲದ ಇವನತೋಳು ವ್ಯರ್ಥವಾದಂತಿದೆ. ಯಮನೂಕೂಡಾ ವಿಫಲವಾದ ದಂಡಾಯುಧದಿಂದ ಭೂಮಿಯನ್ನು ಗೀರುತ್ತಿರುವುದನ್ನು ನೋಡಿದರೆ ಬೆಂಕಿ ಆರಿದ ಕೊಳ್ಳಿಯಂತೆ ಇವನ ಆಯಧ ಸಾಮರ್ಥ್ಯವೇನೂ ಇಲ್ಲವೆಂದು ತಿಳಿಯುತ್ತಿದೆ. ಈ ಹನ್ನೆರಡು ಜನ ಆದಿತ್ಯರೂ ತೇಜೋವಿಹೀನರಾಗಿ ಚಿತ್ರದಲ್ಲಿ ಬರೆದವರಂತೆ ಎಲ್ಲರಿಂದಲೂ ಸುಖವಾಗಿನೋಡುವಂತೆ ಕಳೆಗುಂದಿರುತ್ತಾರೆ. ಮಧ್ಯದಲ್ಲಿ ಬಂಡೆಬಂದಾಗ ನೀರಿನಓಟವು ತಡೆಯುವಂತೆ ಈ ವಾಯುದೇವತೆಗಳ ಗಮನವೂ ತಡೆದಂತಿದೆ. ಹನ್ನೊಂದು ಜನ ರುದ್ರರಸ್ಥಿತಿಯೂ ಚಿಂತಾಜನಕವಾಗಿದೆ. ಹುಂಕಾರದಿಂದಲೇ ಶತ್ರುಗಳನ್ನು ನಾಶಪಡಿಸುತ್ತಿರುವ ಈ ರುದ್ರರ ಶಕ್ತಿಯು ಕುಂದಿತವಾಗಿದೆಯೆಂದು ಈಗ ತಲೆಕೆಳಗೆ ಹಾಕಿರುವುದರಿಂದ ತಿಳಿದು ಬರುತ್ತದೆ. ಮಕ್ಕಳೇ ಮೊದಲು ಉತ್ಕೃಷ್ಟಸ್ಥಾನವನ್ನು ಹೊಂದಿ ವಿರಾಜಿಸುತ್ತಿದ್ದು ಈಗ ಬಲವತ್ತರಶತ್ರುವಿನಿಂದ ನೀವು ಪರಾಜಿತರಾಗಿ ಸ್ಥಾನಭ್ರಷ್ಟರಾಗಿರುವಿರೆಂದು ನಿಮ್ಮಸ್ಥಿತಿಯಿಂದಲೇ ತಿಳಿದು ಬರುತ್ತದೆ. ಆ ಶತ್ರು ಯಾರು ? ನಿಮಗೆ ಉಂಟಾದ ದುಃಖಾವಸ್ಥೆ ಯಾವುದು ? ನನ್ನಲ್ಲಿ ಏನನ್ನು ಪ್ರಾರ್ಥಿ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಸಲು ಬಂದಿರುವಿರಿ ? ನಾನು ಕೇವಲ ಸೃಷ್ಟಿಕರ್ತನೆಂದು ತಿಳಿದಿರುವಿರಷ್ಟೆ. ರಕ್ಷಣಾ ಭಾರ ನಿಮ್ಮಮೇಲೆಯೇ ಇದೆ. ಏನು ಬಂದದ್ದು ಹೇಳಿರಿ.

ತಾರಕಾಸುರನ ಪೀಡೆಯನ್ನು ಬ್ರಹ್ಮನೊಡನೆ ದೇವತೆಗಳು ಹೇಳಿಕೊಂಡ ರೀತಿ

ಬ್ರಹ್ಮನೇ ನೀನು ಸರ್ವಾಂತರ್ಯಾಮಿಯಾಗಿರುವುದರಿಂದ ಎಲ್ಲವನ್ನೂ ತಿಳಿದಿರುವಿ ಆದರೂ ದುಃಖದಿಂದ ನಿವೇದಿಸುತ್ತೇವೆ. ತಾರಕನೆಂಬ ಬಲಶಾಲಿಯಾದ ರಾಕ್ಷಸನು ತಮ್ಮಿಂದಲೇ ವರವನ್ನು ಪಡೆದು ಧೂಮಕೇತುವಿನಂತೆ ಈಗ ಲೋಕಕಂಟಕನಾಗಿರುತ್ತಾನೆ. ಇವನ ಭಯದಿಂದ ಸೂರ್ಯನು ತನ್ನ ಬಿಸಿಲನ್ನೂ ಭೂಮಿಗೆ ಸಂಪೂರ್ಣ ಬಿಡದೆ ಇವನ ಪಟ್ಟಣದ ಸರೋವರಗಳಲ್ಲಿ ಕಮಲಗಳು ಅರಳುವಷ್ಟುಮಾತ್ರ ತೇಜಸ್ಸನ್ನು ಕೊಡುತ್ತಾನೆ. ಚಂದ್ರನು ತನ್ನ ಸಂಪೂರ್ಣಕಲೆಯಿಂದ ಕೂಡಿದವನಾಗಿ ಯಾವಾಗಲೂ ಬೆಳದಿಂಗಳನ್ನು ಪ್ರಸರಿಸುತ್ತಾ ಇವನನ್ನು ಸೇವಿಸುತ್ತಾನೆ. ವಾಯುವು ಹೆಚ್ಚಾಗಿ ಬೀಸಿದರೆ ಅವನ ಉದ್ಯಾನದ ಹೂವುಗಳು ಉದುರಿಹೋಗುತ್ತವೆಂಬ ಭಯದಿಂದ ಬೀಸಣಿಗೆಯ ಗಾಳಿಯವೇಗಕ್ಕೆಂತ ಹೆಚ್ಚಾಗಿ ಬೀಸುವುದಿಲ್ಲ. ಆರು ಋತುಗಳೂ ತಮ್ಮ ನಿಯತಕಾಲವನ್ನು ಬಿಟ್ಟು ನಿತ್ಯವೂ ಉದ್ಯಾನಪಾಲಕರಂತೆ ಅವನ ಉದ್ಯಾನಗಳಲ್ಲಿ ಪುಷ್ಪಸಮೃದ್ಧಿಯುಂಟಾಗುವಂತೆ ಮಾಡುತ್ತಿವೆ. ಸಮುದ್ರರಾಜನೂಕೂಡಾ ತನ್ನಲ್ಲಿರುವ ಉತ್ತಮರತ್ನಗಳನ್ನೆಲ್ಲಾ ಇವನಿಗೆ ಕಾಣಿಕೆಯಾಗಿ ಸಮರ್ಪಿಸಿ ಇವನ ಪ್ರಸಾದವನ್ನು ಅಪೇಕ್ಷಿಸುತ್ತಿರುತ್ತಾನೆ. ವಾಸುಕೀ ಮುತಾದ ಸರ್ಪಗಳೂಕೂಡಾ ತಮ್ಮ ಹೆಡೆಯಿಂದ ಪ್ರಕಾಶಿಸುವಮಣಿಗಳಿಂದ ಇವನಸಮೀಪದಲ್ಲಿದ್ದು ಸ್ಥಿರವಾದ, ಆರದ ದೀಪಸ್ತಂಭದಭಾವವನ್ನು ಹೊಂದಿವೆ. ಹೇಗಾದರೂ ಇವನ ಪ್ರಸಾದಗಳಿಸಬೇಕೆಂದು ಇಂದ್ರನು ಕಲ್ಪವೃಕ್ಷಗಳ ಹೂಮುಂತಾದವುಗಳನ್ನು ಆಗಾಗ ದೂತರಮೂಲಕ ಕಳುಹಿಸುತ್ತಿರುತ್ತಾನೆ. ದುರ್ಜನರಿಗೆ ಉಪಕಾರಮಾಡಿದರೆ ಅದರಿಂದ ಅವರು ಎಂದೂ ತೃಪ್ತರಾಗುವುದಿಲ್ಲ. ಅವರಿಗೆ ಅಪಕಾರಮಾಡಿಯೇ ನಾಶಪಡಿಸಬೇಕು. ಹೀಗೆ ಉಪಚರಿಸಿದರೂ ಅವನು ಸಂತೋಷಗೊಳ್ಳದೆ ಯಾವಾಗಲೂ ಮೂರುಲೋಕಗಳನ್ನು ಪೀಡಿಸುತ್ತಾನೆ. ನಂದನವನದಲ್ಲಿ ಅಮರಸ್ತ್ರೀಯರು ಇಷ್ಟವಾದರೂ ದಯೆಯಿಂದ ಬಿಗುರುಮುಂತಾದವುಗಳನ್ನು ಕತ್ತರಿಸುತ್ತಿರಲಿಲ್ಲ. ಆದರೆ ಈಗ ಆ ರಾಕ್ಷಸನು ಸ್ವಲ್ಪವೂ ಕರುಣೆ ಇಲ್ಲದೆ ನಂದನವನ್ನು ಧ್ವಂಸಮಾಡುತ್ತಿದ್ದಾನೆ. ದೇವತಾಸ್ತ್ರೀಯರೆಲ್ಲರನ್ನೂ ಸೆರೆಹಿಡಿದಿರುತ್ತಾನೆ. ಅವರು ಅಳುತ್ತಾ ಅವನ ಆಜ್ಞೆಯಿಂದ ಬೀಸಣಿಗೆಯಿಂದ ಗಾಳಿ ಬೀಸುತ್ತಾ ಇದ್ದಾರೆ. ಮೇರುಪರ್ವತದ ಶಿಖರಗಳನ್ನು ತುಂಡುಮಾಡಿ ತನ್ನ ಉದ್ಯಾನಗಳಲ್ಲಿ ಕ್ರೀಡಾಪರ್ವತಗಳನ್ನಾಗಿ ಕಲ್ಪಿಸಿಕೊಂಡಿರುತ್ತಾನೆ. ಸುರಗಂಗೆಯ ಪವಿತ್ರವಾದ ನೀರು ಅವನ ಮದಗಜಗಳ ಮದೋದಕದಿಂದ ಕಲುಷಿತವಾದುದಲ್ಲದೆ ಅಲ್ಲಿರುವ ಚಿನ್ನದಕಮಲಗಳೆಲ್ಲವೂ ಈಗ ಅವನ ಕಲ್ಯಾಣಿಗಳಲ್ಲಿ ಸೇರಿಸಲ್ಪಟ್ಟವೆ. ಅವನು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಎಲ್ಲಿಯಾದರೂ ಆಕ್ರಮಿಸಬಹುದೆಂಬ ಭಯದಿಂದ ದೇವತೆಗಳು ವಿಮಾನಗಳಿಂದ ವಿಹರಿಸುವುದನ್ನು ಬಿಟ್ಟೇಬಿಟ್ಟಿರುತ್ತಾರೆ. ಯಾಗದಲ್ಲಿ ದೇವತೆಗಳಿಗೆ ಯಾಜಕರು ಹವಿಸ್ಸನ್ನು ಕೊಟ್ಟರೆ ಆಗ ಮಾಯಾವಿಯಾದ ಆ ರಾಕ್ಷಸನು ಹೇಗೋ ಅಗ್ನಿಯಿಂದ ಅದನ್ನು ಅಪಹರಿಸುತ್ತಾನೆ. ಇಂದ್ರನ ಉತ್ಕೃಷ್ಟವಾದ ಅಶ್ವಮುಂತಾದವುಗಳನ್ನು ಅವನು ಅಪಹರಿಸಿರುವುದರಿಂದ ಬಹುಕಾಲದಿಂದ ಗಳಿಸಿದ ಇಂದ್ರನ ಕೀರ್ತಿಯೆಲ್ಲವೂ ನಷ್ಟವಾದುವು.

ನಾವು ಇದುವರೆಗೆ ಅವನನ್ನು ಪರಾಜಯಗೊಳಿಸಲು ಮಾಡಿದ ಉಪಾಯಗಳೆಲ್ಲವೂ ಮಹಾಸನ್ನಿಪಾತದಲ್ಲಿ ಔಷಧವು ವಿಫಲವಾಗುವಂತೆ ವ್ಯರ್ಥವಾದವು. ಇದುವರೆಗೆ ಜಯಸಂಪಾದಕವಾದ ವಿಷ್ಣುಚಕ್ರದಲ್ಲಿ ನಮಗೆ ನಂಬಿಕೆ ಇದ್ದರೂ ಈಗ ಅವನ ಮೇಲೆ ಪ್ರಯೋಗಿಸಲ್ಪಟ್ಟಾಗ ಕಿಡಿ ಉಗುಳಿ ಅವನ ಕತ್ತಿನಲ್ಲಿರುವ ಹಾರದ ಮಣಿಯಂತೆ ಎದೆಯಲ್ಲಿ ವ್ಯರ್ಥವಾಗಿ ನಿಂತುದರಿಂದ ಅದೂ ವಿಫಲವಾಯಿತು. ಐರಾವತಾದಿ ದಿಗ್ಗಜಗಳನ್ನು ಗೆದ್ದಿರುವ ಅವನ ಆನೆಗಳೂ ಈಗ ಪುಷ್ಕರ, ಆವರ್ತಕ ಮುಂತಾದ ಮಹಾಮೇಘಗಳಲ್ಲಿ ವಪ್ರಕ್ರೀಡೆಯನ್ನು ಮಾಡುತ್ತಿರುತ್ತವೆ. ಆದುದರಿಂದ ಅವನನ್ನು ಜಯಿಸುವಸಾಮರ್ಥ್ಯವುಳ್ಳ ನಮ್ಮ ಸೇನೆಯನ್ನು ಉತ್ಸಾಹದಿಂದ ನಡೆಸಬಲ್ಲ ಒಬ್ಬ ಹೊಸ ಸೇನಾಪತಿಯನ್ನು ಸೃಷ್ಟಿಮಾಡಬೇಕೆಂದು ನಾವು ಬಯಸುತ್ತೇವೆ.

ಕುಮಾರಸಂಭವದ ಎರಡು ಸರ್ಗಗಳಲ್ಲಿರುವ ಸೂಕ್ತಿಗಳು.

1) ಏಕೋ ಹಿ ದೋಷೋ ಗುಣಸನ್ನಿಪಾತೇ ನಿಮಜ್ಜತೀಂದೋಃ
ಕಿರಣೇಷ್ವಿವಾಂಕಃ ॥ ೧–೩ ॥

ಅನೇಕಗುಣಸಮುದಾಯದಲ್ಲಿ ಒಂದು ದೋಷವಿದ್ದರೆ ಅದು ಮುಚ್ಚಿಹೋಗುತ್ತದೆ. ಚಂದ್ರನು ಅನೇಕಗುಣಸಂಪನ್ನನಾದುದರಿಂದ ಅವನಲ್ಲಿ ಒಂದು ಕಪ್ಪುಮಚ್ಚೆ ಇದ್ದರೂ ಅದನ್ನು ಯಾರೂ ದೋಷವೆಂದು ಪರಿಗಣಿಸುವುದಿಲ್ಲ,

2) ಕ್ಷುದ್ರೋಽಪಿ ನೂನಂ ಶರಣಂ ಪ್ರಪನ್ನೇ ಮಮತ್ವಮುಚ್ಚೈಃ ಶಿರಸಾಂ
ಸತೀವ ॥ ೧–೧೨ ॥

ಮಹಾತ್ಮರು ಶರಣಾಗತರ ವಿಷಯದಲ್ಲಿ ಇವನು ದೊಡ್ಡವನು, ಇವನು ನೀಚನು, ಎಂಬ ಭೇದಭಾವನೆಯನ್ನಿಡದೆ ಎಲ್ಲರಿಗೂ ಒಂದೇರೀತಿಯಾದ ಆಶ್ರಯವನ್ನು ಕೊಡುತ್ತಾರೆ. ಎಲ್ಲರೂ ತಮ್ಮವರೇ ಎಂದು ತಿಳಿಯುತ್ತಾರೆ.

3) ಸಮ್ಯಕ್ಪ್ರಯೋಗಾದಪರಿಕ್ಷತಾಯಾಂ ನೀತಾವಿವೋತ್ಸಾಹಗುಣೇನ
ಸಂಪತ್ ॥ ೧–೨೨ ॥

ನೀತಿಯನ್ನು ಸಮಯವರಿತು ಚನ್ನಾಗಿ ಪ್ರಯೋಗಿಸಿದರೆ ಆಗ ಆದು ಕೆಡುವುದಿಲ್ಲ. ಉತ್ಸಾಹದಿಂದ ಕೂಡಿ ನೀತಿಯನ್ನು ಚನ್ನಾಗಿ ಪ್ರಯೋಗಿಸಿದರೆ ಆಗ ಅದರಿಂದ ಉತ್ತಮವಾದ ಸಂಪತ್ತು ಲಭಿಸುತ್ತದೆ.

4) ಋತೇ ಕೃಶಾನೋರ್ನಹಿ ಮಂತ್ರಪೂತಮರ್ಹಂತಿ ತೇಜಾಂಸ್ಯ
ಪರಾಣಿ ಹವ್ಯಮ್ ॥ ೧–೫೧ ॥

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಮಂತ್ರದಿಂದ ಪರಿಶುದ್ಧವಾದ ಹವಿಸ್ಸು ಅಗ್ನಿಯನ್ನಲ್ಲದೆ ಇತರ ತೇಜಸ್ಸನ್ನು ಹೊಂದುವುದಿಲ್ಲ.

5) ಅಭ್ಯರ್ಥನಾಭಂಗಭಯೇನ ಸಾಧುರ್ಮಧ್ಯಸ್ಥಮಿಷ್ಟೇಷ್ಯವಲಂಬತೇರ್ಥೇ ॥ ೧–೫೨ ॥

ಸಜ್ಜನರು ಯಾವಾಗಲೂ ಇತರರನ್ನು ಯಾಚಿಸಿದರೆ ಎಲ್ಲಿಯಾದರೂ ಅಲ್ಲೆಗಳದಾರು (ವಿರುದ್ಧವನ್ನು ಹೇಳಿಯಾರು) ಎಂದು ಭಾವಿಸಿಕೊಂಡು ಕೇಳಬೇಕಾದ ಪ್ರಸಂಗದಲ್ಲಿಯೂ ಮನಸ್ಸನ್ನು ಬಿಗಿಹಿಡಿದು ಏನನ್ನೂ ಕೇಳದೆ ಸುಮ್ಮನಿರುತ್ತಾರೆ.

6) ವಿಕಾರಹೇತೌ ಸತಿ ವಿಕ್ರಿಯಂತೇ ಯೇಷಾಂ ನ ಚೇತಾಂಸಿ ತ ಏವ ಧೀರಾಃ ॥ ೧–೫೯ ॥

ಏನೂ ಹತ್ತಿರೆ ಇಲ್ಲದಿರುವಾಗ 'ಮನೋವಿಕಾರವಾಗಲಿಲ್ಲವೆಂಬುದು ದೊಡ್ಡದಲ್ಲ. ಮನೋವಿಕಾರವನ್ನು ಹುಟ್ಟಿಸುವ ಸಾಮಗ್ರಿ ಎದುರಿಗಿರುವಾಗ ಯಾರಿಗೆ ಏನೂ ಮನೋವಿಕಾರವಾಗುವುದಿಲ್ಲವೋ ಅವರೇ ಧೀರರು. ॥

7) ಶಾಮ್ಯೇತ್ ಪ್ರತ್ಯುಪಕಾರೇಣ ನೋಪಕಾರೇಣ ದುರ್ಜನಃ॥೩-೪೦॥

ದುರ್ಜನರನ್ನು ಉಪಕಾರದಿಂದ ಸ್ವಾಧೀನಪಡಿಸಿಕೊಳ್ಳಲು ಸಾಧ್ಯವಿಲ್ಲ. ಯಾವಾಗಲೂ ಪ್ರತೀಕಾರದಿಂದಲೇ (ವಿರುದ್ಧವಾದ ಆಚರಣೆಯಿಂದಲೇ) ಅವರನ್ನು ನಾಶಪಡಿಸಬೇಕು.

8) ವಿಷವೃಕ್ಷೋಪಿ ಸಂವರ್ಧ್ಯ ಸ್ವಯಂ ಛೇತ್ತುಮಸಾಂಪ್ರತಮ್ ॥ ೨–೫೫ ॥

ವಿಷದಮರವನ್ನಾದರೂ ತಾನಾಗಿ ನಟ್ಟುಬೆಳೆಸಿದಮೇಲೆ ತಾನಾಗಿ ಕತ್ತರಿಸಿ ನಾಶಮಾಡುವುದು ಯುಕ್ತವಲ್ಲ.

ಸಂಸ್ಕೃತಕಾವ್ಯಗಳಿಗೆ ಸಂಸ್ಕೃತವ್ಯಾಖ್ಯಾನಗಳು ಹೇರಳವಾಗಿವೆ. ಈಗ ಸಂಸ್ಕೃತವಿದ್ವಾಧುರ್ಯವನ್ನು ಜನಸಾಮಾನ್ಯರೂ ತಿಳಿಯಲು ಆಯಾಯ ದೇಶಭಾಷೆಗಳಲ್ಲಿ ಎಲ್ಲಾ ಸಂಸ್ಕೃತಗ್ರಂಥಗಳ ಅನುವಾದ ಬರುತ್ತಿದೆ. ಪ್ರಕೃತ ಕನ್ನಡಬಂಧುಗಳೂ ಸಂಸ್ಕೃತಕಾವ್ಯದ ಸೊಬಗನ್ನು ತಿಳಿಯಲು, ನಾನು ಕನ್ನಡದಲ್ಲಿ ವ್ಯಾಖ್ಯಾನವನ್ನೂ ಬರೆದಿರುತ್ತೇನೆ. ಸಂಸ್ಕೃತಾಭ್ಯಾಸಕ್ಕೆ ಅನುಕೂಲವಾಗಿ ವಿಗ್ರಹವಾಕ್ಯಗಳನ್ನು ಧಾತುಪ್ರಕ್ರಿಯೆಯನ್ನೂ ತೋರಿಸಿರುತ್ತೇನೆ.

ಇವನ್ನು ಸುಂದರವಾಗಿ ಮುದ್ರಿಸಿಕೊಟ್ಟ ಪರಿಮಳ ಪ್ರೆಸ್ಸಿನ ಮಾಲೀಕರಿಗೆ ಕೃತಜ್ಞನಾಗಿರುವುದಲ್ಲದೆ ಈ ಗ್ರಂಥದ ಪ್ರಕಾಶನಕ್ಕೆ ನೆರವಾದ ನನ್ನ ಮಿತ್ರವೃಂದಕ್ಕೆ ಚಿರಋಣಿಯಾಗಿರುತ್ತೇನೆ.

ತಾ. 21–5–60
ಮೈಸೂರು.

ಸಜ್ಜನವಿಧೇಯ
ಜಿ. ವಿಷ್ಣುಮೂರ್ತಿ ಭಟ್ಟ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

॥ ಶ್ರೀ ಗಣೇಶಾಯ ನಮಃ ॥

ಶ್ರೀಃ

ಕುಮಾರಸಂಭವಮ್

ಪ್ರಥಮಃ ಸರ್ಗಃ

ಅಸ್ತ್ಯುತ್ತರಸ್ಯಾಂ ದಿಶಿ ದೇವತಾತ್ಮಾ ಹಿಮಾಲಯೋ ನಾಮ ನಗಾಧಿರಾಜಃ ॥
ಪೂರ್ವಾಪರೌ ತೋಯನಿಧೀ ವಗಾಹ್ಯ ಸ್ಥಿತಃ ಪೃಥಿವ್ಯಾ ಇವ ಮಾನದಂಡಃ ॥ ೧ ॥

ಸುಲೋಚನಾ ಕನ್ನಡ ವ್ಯಾಖ್ಯಾನ

ಉತ್ತರಸ್ಯಾಂ ದಿಶಿ—ಉತ್ತರ ದಿಕ್ಕಿನಲ್ಲಿ, ದೇವತಾತ್ಮಾ—ದೇವತಾ ಸ್ವರೂಪಿಯಾದ, ಹಿಮಾಲಯೋ ನಾಮ—ಹಿಮಾಲಯ ಎಂಬ ಹೆಸರಿನಿಂದ ಪ್ರಸಿದ್ಧನಾದ, ನಗಾಧಿರಾಜಃ—ಪರ್ವತರಾಜನು ಅಸ್ತಿ—ಇರುತ್ತಾನೆ. ಪೂರ್ವಾಪರೌ—ಪೂರ್ವ ಪಶ್ಚಿಮದಲ್ಲಿರುವ, ತೋಯನಿಧೀ—ಸಮುದ್ರಗಳನ್ನು, ವಗಾಹ್ಯ—ಪ್ರವೇಶಿಸಿ, ಪೃಥಿವ್ಯಾಃ—ಭೂಮಿಯ, ಮಾನದಂಡ ಇವ—ಅಳತೆಯ ಕೋಲಿನಂತೆ, ಸ್ಥಿತಃ—ಇರುತ್ತಾನೆ ॥ ಉತ್ಪ್ರೇಕ್ಷಾಲಂಕಾರ. ವಸ್ತುನಿರ್ದೇಶರೂಪವಾದ ಮಂಗಲ ಹೇಳಿದೆ॥

ದೇವತಾ ಆತ್ಮಾ ಯಸ್ಯ ಸಃ ದೇವತಾತ್ಮಾ. ।(ಬ. ಸ.)। ನಗಚ್ಛಂತಿ ಇತಿನಗಾಃ. ಅಧಿಕಃ ರಾಜಾ ಅಧಿರಾಜಃ, ನಗಾನಾಂ ಅಧಿರಾಜಃ (ತ. ಸ.) ॥ ಪೂರ್ವಶ್ಚ ಅಪರಶ್ಚ ಪೂರ್ವಾಪರೌ ॥ ತೋಯಾನಿ ನಿಧೀಯಂತೆ ಅತ್ರ ತೋಯನಿಧಿಃ ॥ ಮಾನಸ್ಯ ದಂಡಃ ॥ ಅಸ–ಭುವಿ–ಲಟ್–ಪ್ರ. ಪು. ಏ. । ಅಸ್ತಿ-ಸ್ತಃ-ಸಂತಿ । ಅಸಿ–ಸ್ಥಃ–ಸ್ಥ । ಅಸ್ಮಿ–ಸ್ವಃ-ಸ್ಮಃ ॥

ಯಂ ಸರ್ವಶೈಲಾಃ ಪರಿಕಲ್ಪ್ಯ ವತ್ಸಂ ಮೇರೌ ಸ್ಥಿತೇ ದೋಗ್ಧರಿ ದೋಹದಕ್ಷೇ ॥
ಭಾಸ್ವಂತಿ ರತ್ನಾನಿ ಮಹೌಷಧೀಶ್ಚ ಪೃಥೂಪದಿಷ್ಟಾಂ ದುದುಹುರ್ಧರಿತ್ರೀಮ್ ॥ ೨ ॥

ಸರ್ವಶೈಲಾಃ—ಎಲ್ಲಾ ಪರ್ವತಗಳು, ಯಂ—ಯಾವ ಹಿಮಾಲಯವನ್ನು, ವತ್ಸಂ—ಕರುವನ್ನಾಗಿ, ಪರಿಕಲ್ಪ್ಯ—ಮಾಡಿಕೊಂಡು, ದೋಹದಕ್ಷೇ—ಕರೆಯುವುದರಲ್ಲಿ ಚತುರನಾದ, ಮೇರೌ—ಮೇರು ಪರ್ವತವು, ದೋಗ್ಧರಿ ಸ್ಥಿತೇ—ಹಾಲು ಕರೆಯುವವನು ಇರುತ್ತಿರಲು, ಪೃಥೂಪದಿಷ್ಟಾಂ—ವೈನ್ಯನಾದ ಪೃಥುರಾಜನಿಂದ ತೋರಿಸಲ್ಪಟ್ಟ, ಧರಿತ್ರೀಂ—ಭೂಮಿಯನ್ನು, ಭಾಸ್ವಂತಿ—ಪ್ರಕಾಶಮಾನಗಳಾದ,

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ರತ್ನಾನಿ—ರತ್ನ ಗಳನ್ನೂ, ಮಹೌಷಧೀಶ್ಚ—ಓಷಧಿ ವಿಶೇಷಗಳನ್ನೂ, ದುದುಹುಃ—ಕರೆದುವು. ತುಲ್ಯಯೋಗಿತಾಲಂಕಾರ ॥

ಸರ್ವೇ ಚ ತೇ ಶೈಲಾಶ್ಚ. ಸರ್ವಶೈಲಾಃ (ಕ.ಸ.) ॥ ದೋಹೇದಕ್ಷಃ ತಸ್ಮಿನ್॥ ಭಾಸ್ವಾಂತಿ ಚ ಭಾಸ್ವತ್ಯಶ್ಚ ಭಾಸ್ವಂತಿ (ದ್ವಂ. ಸ) ॥ ಮಹತ್ಯಶ್ಚತಾಃ ಓಷಧ್ಯಶ್ಚ ಮಹೌಷಧ್ಯಃ ತಾಃ । ಪೃಥುನಾ ಉಪದಿಷ್ಟಾ ತಾಂ ॥ ದುಹ–ಪ್ರಪೂರಣೇ ಲಿಟ್. ಪ್ರ. ಪು.ಬ. । ದುದೋಹ–ದುದುಹತುಃ–ದುದುಹುಃ ॥ ದುದೋಹಿಥ, ದುದೋಗ್ಧ–ದುದುಹಥುಃ–ದುದುಹ । ದುದೋಹ–ದುದುಹಿವ ದುದುಹಿಮ ॥ ೨ ॥

अनन्तरत्नप्रभवस्य यस्य हिमं न सौभाग्यविलोपि जातम् ॥
एको हि दोषो गुणसंनिपाते निमज्जतीन्दोः किरणेष्विवाङ्कः ॥ ३ ॥

ಅನಂತರತ್ನಪ್ರಭವಸ್ಯ–ಅಪರಿಮಿತವಾದ ಉತ್ತಮ ವಸ್ತುಗಳಿಗೆ ಉತ್ಪತ್ತಿ ಸ್ಥಾನನಾದ, ಯಸ್ಯ—ಯಾವ ಹಿಮುವಂತನಿಗೆ, ಹಿಮಂ—ಮಂಜು, ಸೌಭಾಗ್ಯ ವಿಲೋಪಿ—ಸೌಂದರ್ಯವನ್ನು ನಾಶಮಾಡುವುದು, ನಜಾತಂ—ಆಗಲಿಲ್ಲ. ಏಕಃ—ಒಂದಾದ, ದೋಷಃ—ದೋಷವು, ಗುಣಸಂನಿಪಾತೇ—ಗುಣಸಮುದಾಯದಲ್ಲಿ, ಇಂದೋಃ—ಚಂದ್ರನ, ಕಿರಣೇಷು—ಕಿರಣಗಳಲ್ಲಿ, ಅಂಕಇವ—ಮಚ್ಚೆಯಂತೆ (ಕಲಂಕದಂತೆ) ನಿಮಜ್ಜತಿ—ಮುಳುಗಿಹೋಗುತ್ತದೆ ॥ ಉಪಮಾದಿಂದ ಕೂಡಿದ ಅರ್ಥಾಂತರನ್ಯಾಸಾಲಂಕಾರ ॥

ಪ್ರಭವತಿ ಅಸ್ಮಾತ್ ಇತಿ ಪ್ರಭವಃ । ಅನಂತಾನಿ ಚ ತಾನಿ ರತ್ನಾನಿ ಚ, ಅನಂತರತ್ನಾನಿ. ತೇಷಾಂ ಪ್ರಭವಃ ಅನಂತರತ್ನಪ್ರಭವಃ. ತಸ್ಯ । ಸೌಭಾಗ್ಯಂ ವಿಲುಂಪತೀತಿ, ಸೌಭಾಗ್ಯವಿಲೋಪಿ । ಸುಭಗಸ್ಯಭಾವಃ ಸೌಭಾಗ್ಯಮ್ ॥ ಗುಣಾನಾಂ ಸಂನಿಪಾತಃ ತಸ್ಮಿನ್ । ನಿ—ಉಪಸರ್ಗ. ಟುಮಸ್ಜೋ—ಶುದ್ಧೌ. ಲಟ್ ಪ್ರ. ಪು. ಏ. ಮಜ್ಜತಿ–ಮಜ್ಜತಃ–ಮಜ್ಜಂತಿ । ಮಜ್ಜಸಿ–ಮಜ್ಜಥಃ ಮಜ್ಜಥ । ಮಜ್ಜಾಮಿ–ಮಜ್ಜಾವಃ–ಮಜ್ಜಾಮಃ ॥ ೩ ॥

यश्चाप्सरोविभ्रममण्डनानां संपादयित्रीं शिखरैर्बिभर्ति ॥
बलाहकच्छेदविभक्तरागामकालसंध्यामिव धातुमत्ताम् ॥ ४ ॥

ಚ—ಮತ್ತು, ಯಃ—ಯಾವ ಹಿಮಾಲಯನು, ಅಪ್ಸರೋ ವಿಭ್ರಮ ಮಂಡನಾನಾಂ—ಅಪ್ಸರಸ್ತ್ರೀಯರವಿಲಾಸದ ಅಲಂಕಾರಗಳನ್ನು, (ವಿಭ್ರಮ—ವ್ಯತ್ಯಸ್ತವಾದ) ಸಂಪಾದಯಿತ್ರೀಂ—ಸಂಪಾದಿಸಿಕೊಡುವ, ಬಲಾಹಕ, ಚ್ಛೇದ, ವಿಭಕ್ತ, ರಾಗಾಂ—ಮೋಡಗಳ, ತುಂಡುಗಳಲ್ಲಿ, ಉಂಟಾದ (ತಗಲಿದ) ಕೆಂಪುಬಣ್ಣವುಳ್ಳ,

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಧಾತುಮತ್ತಾಂ—ಗೈರಿಕಾದಿಧಾತು ಸಂಬಂಧವನ್ನು, ಅಕಾಲಸಂಧ್ಯಾಮಿವ—ಅನಿಯತ ಕಾಲದಲ್ಲಿ ಆದ ಸಾಯಂಕಾಲವನ್ನೆಂಬಂತೆ, ಶಿಖರೈಃ—ಶಿಖರಗಳಿಂದ, ಬಿಭರ್ತಿ—ಧರಿಸುತ್ತದೆ ॥ ಉತ್ಪ್ರೇಕ್ಷಾಲಂಕಾರ.

ವಿಭ್ರಮೇಣ ಮಂಡನಾನಿ. ವಿಭ್ರಮಮಂಡನಾನಿ. ಅಪ್ಸರಸಾಂ ವಿಭ್ರಮ ಮಂಡನಾನಿ. ಅಪ್ಸರೋ ವಿಭ್ರಮ ಮಂಡನಾನಿ. ತೇಷಾಂ ॥ 'ಕರ್ತೃಕರ್ಮಣೋಃ ಕೃತಿ' ಸೂತ್ರದಿಂದ ದ್ವಿತೀಯೆಗೆ ಷಷ್ಠೀ ಬಂದಿದೆ. ॥ ವಾರೀಣಾಂ ವಾಹಕಾಃ ಬಲಾಹಕಾಃ. ತೇಷಾಂಭೇದಾಃ. ಬಲಾ— ಭೇದೇಷು ವಿಭಕ್ತಃ । ಬಲಾ....ಭಕ್ತಃ. । ಬಲಾ....ಭಕ್ತಃ ರಾಗಃ, ಯಯಾ ಸಾ । ಬಲಾ...ರಾಗಾ. । ತಾಮ್ । ಅಕಾಲೀ ಸಂಧ್ಯಾ. ಅಕಾಲ ಸಂಧ್ಯಾ. ತಾಮ್ ॥ ಧಾತವಃ ಅಸ್ಯ ಸಂತೀತಿ ಧಾತುಮಾನ್. ತಸ್ಯಭಾವಃ ಧಾತುಮತ್ತಾ. ತಾಮ್ ॥ ೪ ॥

ಆಮೇಖಲಂ ಸಂಚರತಾಂ ಘನಾನಾಂ ಛಾಯಾಮಧಃಸಾನುಗತಾಂ ನಿಷೇವ್ಯ ॥
ಉದ್ವೇಜಿತಾ ವೃಷ್ಟಿಭಿರಾಶ್ರಯಂತೇ ಶೃಂಗಾಣಿ ಯಸ್ಯಾತಪವಂತಿ ಸಿದ್ಧಾಃ ॥ ೫ ॥

ಸಿದ್ಧಾಃ— ಸಿದ್ಧಪುರುಷರು, 'ಪಿಶಾಚೋಗುಹ್ಯಕಃ ಸಿದ್ಧೋ ಭೂತೋಽಮೀ ದೇವಯೋನಯಃ' ಅಮರ. ಆ ಮೇಖಲಂ—ಪರ್ವತದ ಮಧ್ಯಭಾಗದವರೆಗೆ, ಸಂಚರತಾಂ—ತಿರುಗುತ್ತಿರುವ, ಘನಾನಾಂ—ಮೋಡಗಳ, ಅಧಃಸಾನುಗತಾಂ—ಮೇಘ ಮಂಡಲದ ಕೆಳಗಿನ ತಪ್ಪಲು ಪ್ರದೇಶದಲ್ಲಿ ಬಿದ್ದಿರುವ, ಛಾಯಾಂ—ನೆರಳನ್ನು, ನಿಷೇವ್ಯ—ಹೊಂದಿ, ವೃಷ್ಟಿಭಿಃ—ಮಳೆಗಳಿಂದ, ಉದ್ವೇಜಿತಾಃ—ಪೀಡಿಸಲ್ಪಟ್ಟವರಾಗಿ, ಯಸ್ಯ—ಯಾವ ಹಿಮವಂತನ, ಆತಪವಂತಿ—ಬಿಸಿಲುಳ್ಳ, ಶೃಂಗಾಣಿ—ಶಿಖರಗಳನ್ನು, ಆಶ್ರಯಂತೇ—ಹೊಂದುತ್ತಾರೆ. 'ಛಾಯಾ ಸೂರ್ಯಪ್ರಿಯಾ ಕಾಂತಿಃ ಪ್ರತಿಬಿಂಬಮನಾತಪಮ್' ಅಮರ. ॥ ಶಿಖರಗಳು ಮೇಘಮಂಡಲವನ್ನು ಅತಿಕ್ರಮಿಸಿವೆ ಎಂದರ್ಥ. ।

ಆ ಮೇಖಲಾಭ್ಯಃ—ಆಮೇಖಲಮ್ ॥ ಅಧಃ ಸಾನೂನಿ ಗತಾ. ಅಧಃ ಸಾನುಗತಾ, ತಾಮ್ ॥ ಆತಪ : ಏಷಾಮಸ್ತಿ ಇತಿ. ಆತಪವಂತಿ ॥ ಆಙ್— ಉ ಪ ಸ ರ್ಗ. ಶ್ರಿಞ್—ಸೇವಾಯಾಮ್. ಶ್ರ ಯ ತೇ—ಶ್ರ ಯೇ ತೇ— ಶ್ರಯಂತೇ—ಇತ್ಯಾದಿ ॥

ಪದಂ ತುಷಾರಸ್ರುತಿಧೌತರಕ್ತಂ ಯಸ್ಮಿನ್ನದೃಷ್ಟಾಪಿ ಹತದ್ವಿಪಾನಾಮ್ ॥
ವಿದಂತಿ ಮಾರ್ಗಂ ನಖರಂಧ್ರಮುಕ್ತೈರ್ಮುಕ್ತಾಫಲೈಃ ಕೇಸರಿಣಾಂ ಕಿರಾತಾಃ ॥ ೬ ॥

ಯಸ್ಮಿನ್—ಯಾವ ಹಿಮವತ್ಪರ್ವತದಲ್ಲಿ, ಕಿರಾತಾಃ—ಬೇಡರು, ತುಷಾರಸ್ರುತಿಧೌತರಕ್ತಂ—ಹಿಮಧಾರೆಯಿಂದ ತೊಳೆದು ಹೋದ ರಕ್ತವುಳ್ಳ, ಹತದ್ವಿ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಪಾನಾಂ—ಕೊಲ್ಲಲ್ಪಟ್ಟ ಆನೆಗಳುಳ್ಳ, ಕೇಸರಿಣಾಂ—ಸಿಂಹಗಳ, ಪದಂ—ಹೆಜ್ಜೆಯನ್ನು, ಆದೃಷ್ಟ್ವಾಪಿ—ನೋಡದಿದ್ದರೂ, ನಖರಂಧ್ರಮುಕ್ತೈಃ:— ಉಗುರುಗಳ ಸಂದಿಗಳಿಂದ ಉದುರಿದ, ಮುಕ್ತಾಫಲೈಃ—ಮುತ್ತುಗಳಿಂದ, ಮಾರ್ಗಂ—ದಾರಿಯನ್ನು, ವಿದಂತಿ—ತಿಳಿಯುತ್ತಾರೆ. ॥ ಶ್ರೇಷ್ಠವಾದ ಆನೆಗಳ ಕುಂಭಸ್ಥಳಗಳಲ್ಲಿ ಮುತ್ತು ಇರುತ್ತವೆ. ಮುತ್ತು ಇರುವ ಸ್ಥಳ. 'ಕರೀಂದ್ರ, ಜೀಮೂತ, ವರಾಹ, ಶಂಖ, ಮತ್ಸ್ಯ, ಸಹಿ, ಶುಕ್ತ್ಯುದ್ಭವ, ವೇಣುಜಾನಿ ॥ ಮುಕ್ತಾಫಲಾನಿ ಪ್ರಥಿತಾನಿ ಲೋಕೇ ತೇಷಾಂ ತು ಶುಕ್ತ್ಯುದ್ಭವಮೇವ ಭೂರಿ ॥

ತುಷಾರಾಣಾಂ ಸ್ರುತಿಃ, ತುಷಾರಸ್ರುತಿಃ. ತು—ಸ್ರುತ್ಯಾಧೌತಂ ರಕ್ತಂ ಯಸ್ಮಿನ್ ತತ್. ತುಷಾ....ರಕ್ತಮ್ ॥ ದ್ವಾಭ್ಯಾಂ ಪಿಬತೀತಿ ದ್ವಿಪಃ; ಹತಾಃ ದ್ವಿಪಾಃ ಯೈಸ್ತೇ. ಹತದ್ವಿಪಾಃ—ತೇಷಾಮ್ ॥ ನಖಾನಾಂ ರಂಧ್ರಾಣಿ. ನಖರಂಧ್ರಾಣಿ. ತೈಃ ಮುಕ್ತಾನಿ. ನಖರಂಧ್ರ ಮುಕ್ತಾನಿ. ತೈಃ ॥ ಕೇಸರಾಃ ಏಷಾಂ ಸಂತೀತಿ ಕೇಸರಿಣಃ ತೇಷಾಮ್ ॥ ವಿದ—ಜ್ಞಾನೇ—ಲಟ್. ಪ್ರ. ಪು. ಬ. । ವೇತ್ತಿ–ವಿತ್ತಃ–ವಿದಂತಿ । ವೇತ್ಸಿ–ವಿತ್ಥ–ವಿತ್ಥ । ವೇದ್ಮಿ–ವಿದ್ವಃ–ವಿದ್ಮಃ ॥೬॥

ನ್ಯಸ್ತಾಕ್ಷರಾ ಧಾತುರಸೇನ ಯತ್ರ ಭೂರ್ಜತ್ವಚಃ ಕುಞ್ಜರಬಿನ್ದುಶೋಣಾಃ ॥
ವ್ರಜನ್ತಿ ವಿದ್ಯಾಧರಸುನ್ದರೀಣಾಮನಙ್ಗಲೇಖಕ್ರಿಯಯೋಪಯೋಗಮ್ ॥ ೭ ॥

ಯತ್ರ—ಯಾವ ಹಿಮಾಲಯದಲ್ಲಿ, ಧಾತುರಸೇನ—ಸಿಂಧೂರಾದಿರಸದಿಂದ, (ದ್ರವದಿಂದ) 'ಶೃಂಗಾರಾದೌ ವಿಷೇ ವೀರ್ಯೇ ಗುಣೇರಾಗೇ ದ್ರವೇ ರಸಃ' ಅಮರ. ನ್ಯಸ್ತಾಕ್ಷರಾಃ—ಬರೆಯಲ್ಪಟ್ಟ ವರ್ಣಗಳುಳ್ಳ, ಕುಂಜರಬಿಂದು ಶೋಣಾಃ—ವಯಸ್ಸಾದ ಆನೆಯ ದೇಹದಲ್ಲಿ ಆಗುವ ಮಚ್ಚೆಯಂತೆ ಕೆಂಪಾದ, "ಪದ್ಮಕಂ ಬಿಂದು ಜಾಲಕಮ್" ಅಮರ. (ಆ ಮಚ್ಚೆಗೆ ಪದ್ಮಕವೆನ್ನುತ್ತಾರೆ.) ಭೂರ್ಜತ್ವಚಃ—ಭೂರ್ಜ ಮರದ ತೊಗಟೆಗಳು, ವಿದ್ಯಾಧರ ಸುಂದರೀಣಾಂ—ವಿದ್ಯಾಧರ ದೇವತೆಗಳ ಪತ್ನಿಯರಿಗೆ, ಅನಂಗಲೇಖಕ್ರಿಯಯೋಪಯೋಗಂ—ಕಾಮವ್ಯಂಜಕ ಲೇಖನ ವ್ಯಾಪಾರದ ಉಪಯೋಗವನ್ನು, ವ್ರಜಂತಿ—ಹೊಂದುತ್ತವೆ. ದಿವ್ಯ ಸ್ತ್ರೀಯರಿಗೆ ವಿಹಾರಯೋಗ್ಯವಾದ ದೇಶವೆಂದರ್ಥ ।।

ನ್ಯಸ್ತಾನಿ ಅಕ್ಷರಾಣಿ ಯಾಸುತಾಃ. ನ್ಯಸ್ತಾಕ್ಷರಾಃ । ಧಾತೂನಾಂ ರಸಃ ತೇನ। ಭೂರ್ಜಾನಾಂ ತ್ವಚಃ । ಕುಂಜರಾಣಾಂ ಬಿಂದವಃ ಕುಂಜರಬಿಂದವಃ, ಕುಂಜರ ಬಿಂದವ ಇವ ಶೋಣಾಃ ॥ ವಿದ್ಯಾಧರಾಣಾಂ ಸುಂದರ್ಯಃ, ವಿದ್ಯಾಧರ ಸುಂದರ್ಯಃ ತಾಸಾಮ್ ॥ ಅನಂಗಸ್ಯ ಲೇಖಾಃ (ಲಿಖ್ಯಂತೆ ಏಷು ತೇ ಲೇಖಾಃ) ಅನಂಗಲೇಖಾಃ ಲೇಖಾನಾಂಕ್ರಿಯಾ. ಅನಂ....ಕ್ರಿಯಾ. ತಯಾ ಉಪಯೋಗಃ. ಅನಂಗಲೇಖಕ್ರಿಯಯೋಪಯೋಗಃ. ತಮ್ ॥ ವ್ರಜ—ಗತೌ. ಲಟ್. ಪ್ರ. ಬ. ವ್ರಜತಿ–ಇತ್ಯಾದಿ ॥

CC-0. Bhagavad Ramanuja National Research Institute, Melukote Collection.

Funding:.Tattva Heritage Foundation,Kolkata. Digitization: eGangotri.

यः पूरयन्कीचकरन्ध्रभागान्दरीमुखोत्थेन समीरणेन ॥
तद्वास्यतामिच्छति किंनराणां तानप्रदायित्वमिवोपगन्तुम् ॥ ८ ॥

ಯಃ—ಯಾವ ಪರ್ವತವೊಂದನ್ನು, ದರೀಮುಖೋತ್ಥೇನ—ಗುಹೆಯಂಬ ಮುಖದಿಂದ ಉಂಟಾದ, ಸಮೀರಣೇನ—ವಾಯುವಿನಿಂದ, ಕೀಚಕರಂಧ್ರಭಾಗಾನ್—ಬಿದಿರುಗಳ ರಂಧ್ರಭಾಗಗಳನ್ನು 'ವೇಣವಃ ಕೀಚಕಾಸ್ತೇ ಸ್ಯುರ್ಯೇ ಸ್ವನಂತ್ಯನಿಲೋದ್ಧವಾಃ' ಅಮರ. ಪೂರಯನ್—ತುಂಬಿಸುವವನಾಗಿ, ಉದ್ಗಾಸ್ಯತಾಂ—ಗಟ್ಟಿಯಾಗಿ ಗಾನವಾಡುತ್ತಿರುವ, ಕಿಂನರಾಣಾಂ—ದೇವಗಾಯಕರಿಗೆ, ತಾನಪ್ರದಾಯಿತ್ವಂ—ಕೊಳಲಿನ ಗಾನದ ಸಹಾಯವನ್ನು, ಉಪಗಂತುಂ—ಹೊಂದಲು, ಇಚ್ಛತಿವ—ಬಯಸುತ್ತಾನೋ ಎಂಬಂತೆ ಇದ್ದಾನೆ. ॥ (ಬಾಯಿಂದ ಹಾಡುತ್ತಿರುವಾಗ ಅದನ್ನು ಕೊಳಲಿನಿಂದ ನುಡಿಸುವಂತಿದೆ.) ಉತ್ಪ್ರೇಕ್ಷಾ ॥

ಪೂರಯತೀತಿ ಪೂರಯನ್ । ಕೀಚಕಾನಾಂ ರಂಧ್ರಾಣಿ. ತೇಷಾಂಭಾಗಾಃ । ತಾನ್ । ದರೀ ಏವ ಮುಖಂ, ದರೀಮುಖೇನ ಉತ್ಥಃ, ದರೀಮುಖೋತ್ಥಃ, ತೇನ ॥ ತಾನಂಪ್ರದದಾತಿ ಇತಿ ತಾನಪ್ರದಾಯೀ. ತಾನಪ್ರದಾಯಿನಃ ಭಾವಃ ತಾನಪ್ರದಾಯಿತ್ವಮ್ ॥ ಇಷು—ಇಚ್ಛಾಯಾಂ. ಲಟ್. ಪ್ರ.ಪು.ಏ. ಇಚ್ಛತಿ—ಇತ್ಯಾದಿ ॥ ೮ ॥

कपोलकण्डूः करिभिर्विनेतुं विघट्टितानां सरलद्रुमाणाम् ॥
यत्र स्रुतक्षीरतया प्रसूतः सानूनि गन्धः सुरभीकरोति ॥ ९ ॥

ಯತ್ರ—ಯಾವ ಪರ್ವತದಲ್ಲಿ, ಕರಿಭಿಃ—ಆನೆಗಳಿಂದ, ಕಪೋಲಕಂಡೂಃ—ಗಂಡಸ್ಥಲದ ನವೆಯನ್ನು, ವಿನೇತುಂ—ಹೋಗಲಾಡಿಸಲು, ವಿಘಟ್ಟಿತಾನಾಂ—ಉಜ್ಜಲ್ಪಟ್ಟ, ಸರಲದ್ರುಮಾಣಾಂ—ಸರ್ಜವೃಕ್ಷಗಳ, ಸ್ರುತಕ್ಷೀರತಯಾ—ಸುರಿದ ಹಾಲಿನಿಂದ, ಪ್ರಸೂತಃ—ಉಂಟಾದ, ಗಂಧಃ—ಪರಿಮಳವು, ಸಾನೂನಿ—ತಪ್ಪಲು ಪ್ರದೇಶಗಳನ್ನು, ಸುರಭೀಕರೋತಿ—ಪರಿಮಳೀಕರಿಸುತ್ತದೆ ॥ (ಹೇರಳವಾದ ಆನೆಗಳವೆಯೆಂದರ್ಥ).

ಕಪೋಲಾನಾಂ ಕಂಡ್ವಃ, ಕಪೋಲಕಂಡ್ವಃ, ತಾಃ ॥ ಕರಾಃ ಏಷಾಂ ಸಂತೀತಿ ಕರಿಣಃ ತೈಃ ॥ ಸರಲಾಶ್ಚತೇ ದ್ರುಮಾಶ್ಚ ಸರಲದ್ರುಮಾಃ ತೇಷಾಮ್ ॥ ಸ್ರುತಾನಿ ಚ ತಾನಿ ಕ್ಷೀರಾಣಿ ಸ್ರುತಕ್ಷೀರಾಣಿ ಸ್ರುತಕ್ಷೀರಾಣಾಂ ಭಾವಃ, ಸ್ರುತಕ್ಷೀರತಾತಯಾ ॥ ಸುರಭೀ—ಉಪಪದ ಡುಕೃಞ್—ಕರಣೇ ಲಟ್ (ಉಭಯಪದೀ) ಪ್ರ. ಪು. ಏ. ಕರೋತಿ—ಕುರುತಃ । ಕುರ್ವಂತಿ । ಕರೋಷಿ—ಕುರುಥಃ—ಕುರುಥ । ಕರೋಮಿ—ಕುರ್ವಃ—ಕುರ್ಮಃ ॥ ೯ ॥

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

वनेचराणां वनितासखानां दरीगृहोत्सङ्गनिषक्तभासः ॥
भवन्ति यत्रौषधयो रजन्यामतैलपूराः सुरतप्रदीपाः ॥ १० ॥

यत्र—ಯಾವ ಹಿಮವತ್ಪರ್ವತದಲ್ಲಿ, ರಜನ್ಯಾಂ—ರಾತ್ರಿಯಲ್ಲಿ, ದರೀ, ಗೃಹೋ, ತ್ಸಂಗ, ನಿಷಕ್ತ, ಭಾಸಃ—ಗುಹೆಯೆಂಬ ಮನೆಯ ಮಧ್ಯಭಾಗದಲ್ಲಿ ಪ್ರಸರಿಪದ ಪ್ರಕಾಶವುಳ್ಳ, ಓಷಧಯಃ ಓಷಧಿಲತೆಗಳು. ವನಿತಾಸಖಾನಾಂ—ಸ್ತ್ರೀಯರೇ ಮಿತ್ರರಾಗಿರುವ, ವನೇಚರಾಣಾಂ—ಕಿರಾತರಿಗೆ, ಅತೈಲಪೂರಾಃ—ಎಣ್ಣೆಯ ಆವಶ್ಯಕತೆ ಇಲ್ಲದಿರುವ, ಸುರತಪ್ರದೀಪಾಃ—ಸುರತಕ್ರೀಡಾ(ಸಂಭೋಗ) ಕಾಲದದೀಪಗಳು, ಭವಂತಿ—ಆಗುತ್ತವೆ.

ವನೇ ಚರಂತಿ ಇತಿ ವನೇಚರಾಃ ತೇಷಾಮ್ ॥ ವನಿತಾಃ ಸಖಾಯಃ ಯೇಷಾಂತೇ ವನಿತಾ ಸಖಾಃ ತೇಷಾಂ ॥ ದರ್ಯ ಏವ ಗೃಹಾಃ ದರೀಗೃಹಾಃ, ತೇಷಾಂ ಉತ್ಸಂಗಾಃ ದರೀಗೃಹೋತ್ಸಂಗಾಃ ದ—ಗೇಷು ನಿಷಕ್ತಾಃ ಭಾಸಃ ಯೇಷಾಂ ತೇ ದರೀ .... ಭಾಸಃ ॥ ತೈಲಾನಾಂ ಪೂರಾಃ ತೈಲಪೂರಾಃ, ತೈಲಪೂರಾ ನ ಭವಂತ್ಯತೀತಿ ಅತೈಲಪೂರಾಃ ॥ ಸುರತಾನಾಂ ಪ್ರದೀಪಾಃ ಸುರತಪ್ರದೀಪಾಃ । ಭೂ–ಸತ್ತಾಯಾಂ ಲಟ್ ಪ್ರ. ಪು. ಬ. ಭವತಿ ಇತ್ಯಾದಿ ॥ ೧೦ ॥

उद्वेजयत्यङ्गुलिपार्ष्णिभागान्मार्गे शिलीभूतहिमेऽपि यत्र ॥
न दुर्वहश्रोणिपयोधरार्ता मिन्दन्ति मंदां गतिमश्वमुख्यः ॥ ११ ॥

ಯತ್ರ—ಯಾವ ಹಿಮವತ್ಪರ್ವತದಲ್ಲಿ, ಶಿಲೀಭೂತಹಿಮೇ—ಕಲ್ಲಿನಂತಾದ ಹಿಮವುಳ್ಳ, ಅಂಗುಲಿಪಾರ್ಷ್ಣಿಭಾಗಾನ್—ಬೆರಳುಗಳ ಹಿಂಭಾಗಗಳನ್ನು, ಉದ್ವೇಜಯತ್ಯಪಿ—(ಅತಿಶೀತದಿಂದ) ವ್ಯಥೆಪಡಿಸುತ್ತಿದ್ದರೂ, ಮಾರ್ಗೇ—ದಾರಿಯಲ್ಲಿ, ದುರ್ವಹಶ್ರೋಣಿಪಯೋಧರಾರ್ತಾಃ—ಹೊರಲಾರದ (ಅತಿ ಉನ್ನತವಾದ) ನಿತಂಬ ಸ್ತನಗಳಿಂದ ಪೀಡಿತರಾದ, ಅಶ್ವಮುಖ್ಯಃ—ಕುದುರೆಯ ಮುಖವುಳ್ಳ ಕಿಂನರ ಸ್ತ್ರೀಯರು, ಮಂದಾಂ—ಮೆತ್ತಗಿನ (ನಿದಾನವಾದ) ಗತಿಂ—ಗಮನವನ್ನು, ನ ಭಿಂದಂತಿ—ಬಿಡುವುದಿಲ್ಲ. (ಕಾಲಿಗೆ ಶೀತದಿಂದ ತೊಂದರೆಯಾಗುತ್ತಿದ್ದರೂ ಸ್ತನಾದಿಭಾರದಿಂದ ಕಿನ್ನರಸ್ತ್ರೀಯರು ತಮ್ಮ ಮಂದಗಮನವನ್ನು ಬಿಡುವುದಿಲ್ಲ.)

ಉದ್ವೇಜಯತಿ ಇತಿ ಉದ್ವೇಜಯನ್ ತಸ್ಮಿನ್ । ಅಂಗುಲೀನಾಂ ಪಾರ್ಷ್ಣಿ ಭಾಗಾಃ ಅಂಗುಲಿಪಾರ್ಷ್ಣಿಭಾಗಾಃ ತಾನ್ । ಶಿಲೀಭೂತಾನಿ ಹಿಮಾನಿ ಯತ್ರ ಶಿಲಾಭೂತಹಿಮಃ. ತಸ್ಮಿನ್ ॥ ಶ್ರೋಣಯಶ್ಚ ಪಯೋಧರಾಶ್ಚ ಶ್ರೋಣಿಪ್ರಯೋಧರಂ. ದುಃಖೇನ ಓಢುಂ ಶಕ್ಯಂ. ದುರ್ವಹಂ। ದುರ್ವಹಂ ಚ ತತ್ ಶ್ರೋಣಿಪಯೋಧರಂ ಚ. ದುರ್ವಹಶ್ರೋಣಿಪಯೋಧರೇಣ ಆರ್ತಾಃ ॥ ಅಶ್ವಾನಾಂ ಮುಖಾನೀವ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಮುಖಾನಿ ಯಾಸಾಂ ತಾಃ ಅಶ್ವಮುಖ್ಯಃ ॥ ಭಿದಿರ್—ವಿದಾರಣೇ. ಲಟ್. ಪ್ರ.ಪು.ಬ. ಭಿನತ್ತಿ–ಭಿಂತಃ–ಭಿಂದಂತಿ । ಭಿನತ್ಸಿ–ಬಿನ್ಥಃ–ಭಿನ್ಥ । ಭಿನದ್ಮಿ–ಭಿಂದ್ವಃ–ಭಿಂದ್ಮಃ ॥ ೧೧ ॥

दिवाकरादक्षति यो गुहासु लीनं दिवाभीतमिवान्धकारम् ॥
क्षुद्रेऽपि नूनं शरणं प्रपन्ने ममत्वमुच्चैःशिरसां सतीव ॥ ೧೨ ॥

ಯಃ—ಯಾವ ಹಿಮಾಲಯನು, ದಿವಾಭೀತಂ ಇವ—ಹಗಲಿನಿಂದ ಹೆದರಿದಂತಿರುವ ಗುಹಾಸು—ಗುಹೆಗಳಲ್ಲಿ, ಲೀನಂ—ಅಡಗಿರುವ, ಅಂಧಕಾರಂ—ಕಗ್ಗತ್ತಲೆಯನ್ನು, ದಿವಾಕರಾತ್—ಸೂರ್ಯನಿಂದ, ರಕ್ಷತಿ—ಕಾಪಾಡುತ್ತಾನೆ. ಉಚ್ಚೈಃಶಿರಸಾಂ—ಮಹಾತ್ಮರಿಗೆ (ಉನ್ನತರಿಗೆ) ಶರಣಂ ಪ್ರಪನ್ನೇ—ಶರಣಾಗತನಾದ (ತಮ್ಮ ಮರೆಹೊಕ್ಕವರಲ್ಲಿ) ಕ್ಷುದ್ರೇಽಪಿ—ನೀಚನಲ್ಲಿಯೂ ಕೂಡಾ, ಸತಿ ಇವ—ಸಜ್ಜನರಲ್ಲಿ ಎಂಬಂತೆ, ನೂನಂ ಮಮತ್ವಂ—ನಿಶ್ಚಯವಾಗಿಯೂ ತನ್ನವನೆಂಬ ಅಭಿಮಾನವು ಇರುತ್ತದೆಯಷ್ಟೆ ॥

ದಿವಾಕರೋತೀತಿ ದಿವಾಕರಃ ತಸ್ಮಾತ್ । ದಿವಾ ಭೀತಃ ದಿವಾಭೀತಃ ತಮ್ । ರಕ್ಷ—ಪಾಲನೇ. ಲಟ್. ಪ್ರ. ಪು. ಏಕವಚನಮ್. ರಕ್ಷತಿ–ರಕ್ಷತಃ–ರಕ್ಷಂತಿ ಇತ್ಯಾದಿ ॥ ೧೨ ॥

लाङ्गूलविक्षेपविसर्पिशोभैरितस्ततश्चन्द्रमरीचिगौरैः ॥
यस्यार्थयुक्तं गिरिराजशब्दं कुर्वन्ति बालव्यजनैश्चमर्यः ॥ ೧೩ ॥

ಚಮರ್ಯಃ—ಚಮರೀಮೃಗಗಳು, ಇತಸ್ತತಃ—ಇತ್ತ ಅತ್ತ, ಲಾಂಗೂಲವಿಕ್ಷೇಪವಿಸರ್ಪಿಶೋಭೈಃ—ಬಾಲದ ಅಲ್ಲಾಡಿಸುವುದರಿಂದ ಉಂಟಾದ ಕಾಂತಿಯುಳ್ಳ, ಚಂದ್ರಮರೀಚಿಗೌರೈಃ—ಚಂದ್ರನ ಕಿರಣದಂತೆ ಶುಭ್ರವಾದ, ವಾಲವ್ಯಜನೈಃ—ಬಾಲವೆಂಬ ಚಾಮರಗಳಿಂದ, 'ಪುಚ್ಛೋಽಸ್ತ್ರೀ ಲೋಮಲಾಂಗೂಲೇ ವಾಲಹಸ್ತಶ್ಚ ವಾಲಧಿಃ' ಅಮರ. ಯಸ್ಯ—ಯಾವ ಹಿಮವಂತನ, ಗಿರಿರಾಜಶಬ್ದಂ—ಗಿರಿರಾಜನೆಂಬ ಹೆಸರನ್ನು, ಅರ್ಥಯುಕ್ತಂ—ಸಾರ್ಥಕವನ್ನಾಗಿ, ಕುರ್ವಂತಿ—ಮಾಡುತ್ತವೆ ॥

ಲಾಂಗೂಲಾನಾಂ ವಿಕ್ಷೇಪಃ ಲಾಂಗೂಲ ವಿಕ್ಷೇಪಃ ಲಾಂ....ಕ್ಷೇಪೈಃ ವಿಸರ್ಪಿಣ್ಯಃ ಶೋಭಾಃಯೇಷಾಂ ತೇ. ಲಾಂ....ಶೋಭಾಃ ತೈಃ ॥ ಚಂದ್ರಸ್ಯ ಮರೀಚಯ ಇವ ಗೌರಾಣಿ. ಚಂ....ಗೌರಾಣಿ ತೈಃ ॥ ಅರ್ಥೇನ ಯುಕ್ತಃ. ಅರ್ಥಯುಕ್ತಃ ತಮ್ ॥ ಗಿರೀಣಾಂ ರಾಜಾ ಗಿರಿರಾಜಃ, ಗಿರಿರಾಜ ಇತಿ ಶಬ್ದಃ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ತವ್ ॥ ವಾಲಾನ್ಯೇವ ವ್ಯಜನಾನಿ ತೈಃ ॥ ಡುಕೃಞ್–ಕರಣೇ. ಲಟ್ ಪ್ರ. ಪು. ಬ. (9ನೇ ಶ್ಲೋಕ ನೋಡಿ) ॥ ೧೩ ॥

यत्रांशुकाक्षेपविलज्जितानां यदृच्छया किंपुरुषाङ्गनानाम् ॥

दरीगृहद्वारविलम्बिबिम्बास्तिरस्करिण्यो जलदा भवन्ति ॥ १४ ॥

ಯತ್ರ—ಯಾವ ಹಿಮಾಲಯದಲ್ಲಿ, ಅಂಶುಕಾಕ್ಷೇಪವಿಲಜ್ಜಿತಾನಾಂ—ಬಟ್ಟೆಯನ್ನು ಸೆಳೆದುದರಿಂದ ನಾಚಿಕೆಗೊಂಡ, ಕಿಂಪುರುಷಾಂಗನಾನಾಂ–ಕಿಂನರಸ್ತ್ರೀಯರಿಗೆ ಯದೃಚ್ಛಯಾ—ಅಕಸ್ಮಾತ್ತಾಗಿ, ದರೀಗೃಹದ್ವಾರವಿಲಂಬಿಬಿಂಬಾಃ—ಗುಹೆಯೆಂಬ ಮನೆಯ ಬಾಗಿಲಿನಲ್ಲಿ ಜೋತಾಡುವ ಮಂಡಲವುಳ್ಳ, (ಶರೀರವುಳ್ಳ) ಜಲದಾಃ—ಮೇಘಗಳು, ತಿರಸ್ಕರಿಣ್ಯಃ—ಪರದೆಗಳು, ಭವಂತಿ—ಆಗುತ್ತವೆ ॥ 'ಪ್ರತಿಸೀರಾ ಜವನಿಕಾ ಸ್ಯಾತ್ತಿರಸ್ಕರಿಣೀ ಚಸಾ'–ಅಮಠ. ಪರಿಣಾಮಾಲಂಕಾರ ॥

ಅಂಶುಕಾನಾಂ ಆಕ್ಷೇಪಃ । ಅಂಶುಕಾಕ್ಷೇಪೇಣ ವಿಲಜ್ಜಿತಾಃ । ಅಂಶು.... ತಾಃ । ತಾಸಾಮ್ ॥ ಕಿಂಪುರುಷಾಣಾಂ ಅಂಗನಾಃ । ತಾಸಾಮ್ ॥ ದರ್ಯ ಏವ ಗೃಹಾಣಿ । ದರೀಗೃಹಾಣಾಂ ದ್ವಾರಾಣಿ, ದರೀ....ರಾಣಿ । ದರೀ—ರೇಷು ವಿಲಂಬೀನಿ । ದರೀ....ಲಂಬೀನಿ ॥ ದರೀ....ಬೀನಿ ಬಿಂಬಾನಿ ಯೇಷಾಂ ತೇ । ದರೀ.... ಬಿಂಬಾಃ ॥ ಜಲಂದದಂತಿ ಇತಿ ಜಲದಾಃ ॥ ಭೂ ಸತ್ತಾಯಾಂ. ಲಟ್ ॥

भागीरथीनिर्झरसीकराणां वोढा मुहुः कम्पितदेवदारुः ॥

यद्वायुरन्विष्टमृगैः किरातैरासेव्यते भिन्नशिखण्डिबर्हैः ॥ १५ ॥

ಭಾಗೀರಥೀನಿರ್ಝರಸೀಕರಾಣಾಂ—ಗಂಗಾನದಿಯ ಪ್ರವಾಹದ ತುಂತುರು ಹನಿಗಳನ್ನು, ವೋಢಾ—ಒಯ್ಯುವ (ಹೊತ್ತು ತರುವ) ಮುಹುಃ—ಪುನಃ ಪುನಃ, ಕಂಪಿತದೇವದಾರುಃ—ಅಲ್ಲಾಡಿಸಿದ ದೇವದಾರುಮರವುಳ್ಳ, ಭಿನ್ನಶಿಖಂಡಿಬರ್ಹಃ—ಬೇರ್ಪಡಿಸಿದ ನವಿಲುಗಳ ಗರಿಯುಳ್ಳ, ಯದ್ವಾಯುಃ—ಯಾವ ಹಿಮವತ್ಪರ್ವತದ ಗಾಳಿಯು, ಅನ್ವಿಷ್ಟಮೃಗೈಃ—ಹುಡುಕಿದ ಜಿಂಕೆಗಳುಳ್ಳ, ಕಿರಾತೈಃ—ಜೇಡರಿಂದ, ಆಸೇವ್ಯತೇ—ಸೇವಿಸಲ್ಪಡುತ್ತದೆ. 'ಅನ್ವಿಷ್ಟಂ ಮೃಗಿತಂ ಮೃಗಿತವ್'—ಅಮರ. ಗಾಳಿಯಲ್ಲಿರುವ, ಶೈತ್ಯ, ಸೌರಭ್ಯ, ಮಾಂದ್ಯಗಳೆಂಬ ಮೂರು ಗುಣಗಳು ಇಲ್ಲಿ ಹೇಳಿವೆ ॥

ಭಾಗೀರಥ್ಯಾಃ ನಿರ್ಝರಾಃ, ಭಾಗೀರಥೀನಿರ್ಝರಾಃ । ಭಾ....ರಾಣಾಂ ಸೀಕರಾಃ । ಭಾಗೀ....ಕರಾಃ । ತೇಷಾಮ್ ॥ ಕಂಪಿತಾಃ ದೇವದಾರವಃ ಯೇನ ಸಃ । ಕಂಪಿತದೇವದಾರುಃ ॥ ಯಸ್ಯವಾಯುಃ ಯದ್ವಾಯುಃ । ಅನ್ವಿಷ್ಟಾಃ ಮೃಗಾಃ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಯೈಸ್ತೈ, ಅನ್ವಿಷ್ಟಮೃಗಾಃ ತೈಃ ॥ ಶಿಖಂಡಿನಾಂ ಬರ್ಹಾಃ, ಶಿಖಂಡಿಬರ್ಹಾಃ । ಭಿನ್ನಾಃ ಶಿಖಂಡಿಬರ್ಹಾಃ ಯೇನ ಸಃ ಭಿನ್ನ ಶಿಖಂಡಿಬರ್ಹಃ ॥ ಆಙ್-ಉಪಸರ್ಗ ಷೇವೃ—ಸೇವನೇ. ಕರ್ಮಣಿ. ಲಟ್ ಪ್ರ. ಪು. ಏ. ಸೇವ್ಯತೇ—ಸೇವ್ಯೇತೇ—ಸೇವ್ಯಂತೇ—ಇತ್ಯಾದಿ. ॥ ೧೫ ॥

सप्तर्षिहस्तावचितावशेषाण्यधो विवस्वान् परिवर्तमानः ॥
पद्मानि यस्याग्रसरोरुहाणि प्रबोधयत्यूर्ध्वमुखैर्मयूखैः ॥ ೧೬ ॥

ಸಪ್ತರ್ಷಿಹಸ್ತಾವಚಿತಾವಶೇಷಾಣಿ—ಸಪ್ತ ಋಷಿಗಳ ಕೈಯಿಂದ ಆರಿಸಲ್ಪಟ್ಟು (ಕೊಯ್ಯಲ್ಪಟ್ಟು) ಉಳಿದಿರುವ, ಯಸ್ಯ—ಯಾವ ಹಿಮವಂತನ, ಅಗ್ರಸರೋರುಹಾಣಿ—ಮೇಲ್ಭಾಗದಲ್ಲಿರುವ ಸರೋವರದಲ್ಲಿ ಬೆಳದಿರುವ, ಪದ್ಮಾನಿ—ಕಮಲಪುಷ್ಪಗಳನ್ನು, ಅಧಃ—ಕೆಳಭಾಗದಲ್ಲಿ, ಪರಿವರ್ತಮಾನಃ—ತಿರುಗುತ್ತಿರುವ, ವಿವಸ್ವಾನ್—ಸೂರ್ಯನು, ಊರ್ಧ್ವಮುಖೈಃ—ಮೇಲ್ಮುಖವಾಗಿರುವ, ಮಯೂಖೈಃ—ಕಿರಣಗಳಿಂದ, ಪ್ರಬೋಧಯತಿ—ಅರಳಿಸುತ್ತಾನೆ. (ಸೂರ್ಯಮಂಡಲಕ್ಕಿಂತಲೂ ಈ ಪರ್ವತವು ಎತ್ತರವಾಗಿದೆಯೆಂದು ತಾತ್ಪರ್ಯ.)

ಸಪ್ತ ಚ ತೇ ಋಷಯಶ್ಚ. ಸಪ್ತರ್ಷಯಃ, ಸಪ್ತರ್ಷೀಣಾಂ ಹಸ್ತಾಃ ಸಪ್ತರ್ಷಿಹಸ್ತಾಃ, ತೈಃ ಅವಚಿತಾನಿ, ಸಪ್ತರ್ಷಿಹಸ್ತಾವಚಿತೇಭ್ಯಃ ಅವಶೇಷಾಣಿ, ಸಪ್ತ—ಣಿ ॥ ಅಗ್ರೇ ಸರಾಂಸಿ. ಅಗ್ರಸರಾಂಸಿ. ಅಗ್ರಸರಸ್ಸು ರುಹಾಣಿ, ಅಗ್ರಸರೋರುಹಾಣಿ ॥ ಊರ್ಧ್ವಂ ಮುಖಾನಿ ಯೇಷಾಂ ತೇ ಊರ್ಧ್ವಮುಖಾಃ ತೈಃ ॥ ಪ್ರ—ಉಪಸರ್ಗ. ಬುಧ—ಅವಗಮನೇ ಣಿಜಂತಾತ್ ಲಟ್. ಪ್ರ. ಪು. ಏ. ಬೋಧಯತಿ—ತಃ—ಯಂತಿ. ಇತ್ಯಾದಿ ॥ ೧೬ ॥

यज्ञाङ्गयोनित्वमवेक्ष्य यस्य सारं धरित्रीधरणक्षमं च ॥
प्रजापतिः कल्पित यज्ञभागं शैलाधिपत्यं स्वयमन्वतिष्ठत् ॥ ೧೭ ॥

ಯಸ್ಯ—ಯಾವ ಹಿಮವಂತನ. ಯಜ್ಞಾಂಗಯೋನಿತ್ವಂ—ಯಜ್ಞಗಳಿಗೆ ಸಾಧನಗಳಾದ ಸೋಮಲತಾದಿಗಳಿಗೆ ಉತ್ಪತ್ತಿಸ್ಥಾನವನ್ನು, ಧರಿತ್ರೀಧರಣಕ್ಷಮಂ—ಭೂ ಭಾರವನ್ನು ಧರಿಸಲುಯೋಗ್ಯವಾದ, ಸಾರಂಚ—ಬಲವನ್ನೂ, 'ಸಾರೋ ಬಲೇ ಸ್ಥಿರಾಂಶೇಚ'—ಅಮರ. ಅವೇಕ್ಷ್ಯ—ಚನ್ನಾಗಿತಿಳಿದು, ಪ್ರಜಾಪತಿಃ—ಬ್ರಹ್ಮನು, ಸ್ವಯಂ—ತಾನಾಗಿಯೇ, ಕಲ್ಪಿತಯಜ್ಞಭಾಗಂ—ಕೊಡಲ್ಪಟ್ಟಯಜ್ಞದ ಹವಿರಾದಿ ಭಾಗವುಳ್ಳವನನ್ನೂ, ಶೈಲಾಧಿಪತ್ಯಂ—ಪರ್ವತಗಳ ಸ್ವಾಮಿತ್ವವನ್ನೂ ಅನ್ವತಿಷ್ಠತ್—ಕಲ್ಪಿಸಿಕೊಟ್ಟನು ॥ ಇಲ್ಲಿಯವರೆಗೆ ಹಿಮವಂತನ ವರ್ಣನೆ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಯಜ್ಞಸ್ಯ ಅಂಗಾನಿ. ಯಜ್ಞಾಂಗಾನಿ. ಯಜ್ಞಾಂಗಾನಾಂ ಜೋನಿಃ, ಯಜ್ಞಾಂಗಯೋನೇಃ ಭಾವಃ. ಯಜ್ಞಾಂಗಯೋನಿತ್ವಮ್ ॥ ಧರಿತ್ರ್ಯಾಃ ಧರಣಂ. ಧರಿತ್ರೀಧರಣಂ ಧರಿತ್ರೀಧರನೇಕ್ಷಮಃ ತಮ್ ॥ ಯಜ್ಞಸ್ಯ ಭಾಗಃ, ಕಲ್ಪಿತಃ ಯಜ್ಞಭಾಗಃ ಯಸ್ಯಸಃ ಕಲ್ಪಿತಯಜ್ಞಭಾಗಃ ತಮ್ । ಆಧಿಪತೇಃ ಭಾವಃ ಆಧಿಪತ್ಯಂ—ಶೈಲಾನಾಂ ಆಧಿಪತ್ಯಮ್. ಶೈಲಾಧಿಪತ್ಯಮ್. ॥ ಅನು—ಉಪಸರ್ಗಃ ಷ್ಠಾ—ಗತಿನಿವತ್ತ್ಯಾ. ಲಙ್. ಪ್ರ. ಪು. ಏ. ಅತಿಷ್ಠತ್—ಅತಿಷ್ಠತಾಂ—ಅತಿಷ್ಠನ್ । ಅತಿಷ್ಠಃ—ಅತಿಷ್ಠತಂ—ಅತಿಷ್ಠತ । ಅತಿಷ್ಠಂ—ಅತಿಷ್ಠಾವ—ಅತಿಷ್ಠಾಮ ॥ ೧೭ ॥

स मानसी मेरुसखः पितॄणां कन्यां कुलस्य स्थितये स्थितिज्ञः ॥
मेनां मुनीनामपि माननीयामात्मानुरूपां विधिनोपयेमे ॥ १८ ॥

ಮೇರುಸಖಃ—ಮೇರುಪರ್ವತದ ಮಿತ್ರನಾದ, ಸ್ಥಿತಿಜ್ಞಃ—ಮರ್ಯಾದೆಯನ್ನು (ವ್ಯವಹಾರ)ತಿಳಿದಿರುವ, ಸಃ—ಆ ಹಿಮವಂತನು, ಪಿತೃಣಾಂ,—ಪಿತೃದೇವತೆಗಳ, ಮಾನಸೀಂ—ಮನಃಸಂಕಲ್ಪದಿಂದ ಹುಟ್ಟಿದ, ಮುನೀನಾಮಪಿ—ಋಷಿಗಳಿಗೂ ಕೂಡಾ, ಮಾನನೀಯಾಂ—ಪೂಜ್ಯಳಾದ, ಆತ್ಮಾನುರೂಪಾಂ—ತನ್ನ ಕುಲಶೀಲಾದಿಗಳಿಗೆ ಸಮಾನಳಾದ, ಮೇನಾಂ— ಮೇನಕಾಯೆಂಬ ಹೆಸರುಳ್ಳ, ಕನ್ಯಾಂ—ಹುಡುಗಿಯನ್ನು, ಕುಲಸ್ಯ—ತನ್ನ ವಂಶದ ಸ್ಥಿತಯೇ—ಪ್ರತಿಷ್ಠೆಗೋಸ್ಕರ (ಕೊನೆಗೊಳ್ಳದಿರಲು) ವಿಧಿನಾ—ಶಾಸ್ತ್ರೋಕ್ತರೀತಿಯಿಂದ, ಉಪಯೇಮೇ—ಮದುವೆಯಾದನು ॥

ಮನಸಃ ಇಯಂ ಮಾನಸೀಮ್ । ಮೇರೋಃ ಸಖಾ. ಮೇರುಸಖಃ. 'ರಾಜಾಹಃ ಸಖಿಭ್ಯಷ್ಟಚ್' ಸೂತ್ರದಿಂದ ಸಮಾಸಾಂತಟಚ್ ಪ್ರತ್ಯಯ ಬಂದಿದೆ. ॥ ಸ್ಥಿತಿಂ ಜಾನಾತೀತಿ ಸ್ಥಿತಿಜ್ಞಃ । ಮಾನಯಿತುಂ ಯೋಗ್ಯಾ, ಮಾನನೀಯಾತಾಮ್ । ಆತ್ಮನಃ ಅನುರೂಪಾ, ಆತ್ಮಾನುರೂಪಾ. ತಾಮ್ । ಉಪ—ಉಪಸರ್ಗ. ಯಮ—ಉಪಯಮೇ. ಲಿಟ್. (ಆತ್ಮನೇಪದೀ.) ಪ್ರ. ಪು. ಏ. । ಯೇಮೇ—ಯೇಮಾತೇ—ಯೇಮಿರೇ । ಯೇಮಿಷೆ—ಯೇಮಾಥೇ—ಯೇಮಿಧ್ವೇ । ಯೇಮೇ—ಯೇಮಿವಹೇ—ಯೇಮಿಮಹೇ. 'ಉಪಾದ್ಯಮಃ ಸ್ವಕರಣೇ' ಸೂತ್ರದಿಂದ ಆತ್ಮನೇಪದಿಯಾಗುತ್ತದೆ. ॥ ೧೮ ॥

कालक्रमेणाथ तयोः प्रवृत्ते स्वरूपयोग्ये सुरतप्रसङ्गे ॥
मनोरमं यौवनमुद्वहन्त्या गर्भोऽभवद्भूधरराजपत्न्याः ॥ १९ ॥

ಅಥ—ಆಮೇಲೆ, ಕಾಲಕ್ರಮೇಣ—ಕಾಲಕಳೆಯುತ್ತಿರಲು, ತಯೋಃ—ಮೇನಾ ಹಿಮವಂತರಿಗೆ, ಸ್ವರೂಪಯೋಗ್ಯೇ—ಸೌಂದರ್ಯಕ್ಕೆ ಅನುಗುಣವಾಗಿ, (ಶಾಸ್ತ್ರರೀತಿಯಿಂದ) ಸುರತಪ್ರಸಂಗೇ—ಸಂಭೋಗ ಸಮಯವು, ಪ್ರವೃತ್ತೇಸತಿ—ಉಂಟಾ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಗುತ್ತಿರಲು, ಮನೋರಮಂ—ಸುಂದರವಾದ, ಯೌವನಂ—ತಾರುಣ್ಯವನ್ನು, ಉದ್ವಹಂತ್ಯಾಃ—ಧರಿಸಿರುವ, ಭೂಧರರಾಜಪತ್ನ್ಯಃ—ಗಿರಿರಾಜನ ಹೆಂಡತಿಯಾದ ಮೇನಕೆಗೆ, ಗರ್ಭಃ ಅಭವತ್—ಗರ್ಭವಾಯಿತು ॥

ಸ್ವರೂಪಸ್ಯಯೋಗ್ಯಃ, ಸ್ವರೂಪಯೋಗ್ಯಃ ತಸ್ಮಿನ್ ॥ ಸುರತಸ್ಯ ಪ್ರಸಂಗಃ, ತಸ್ಮಿನ್ ॥ ಯೂನಃ ಭಾವಃ, ಯೌವನಮ್ ॥ ಭುವಃ ಧರಾಃ, ಭೂಧರಾಃ. ಭೂಧರಾಣಾಂ ರಾಜಾ. ಭೂಧರರಾಜಃ ಭೂಧರರಾಜಸ್ಯ ಪತ್ನೀ. ಭೂಧರರಾಜ ಪತ್ನೀ. ತಸ್ಯಾಃ ॥ ಭೂ—ಸತ್ತಾಯಾಂ. ಲಙ್. ಪ್ರ. ಪು. ಏ. । ಅಭವತ್—ಅಭವತಾಂ—ಅಭವನ್. ಇತ್ಯಾದಿ ॥ ೧೯ ॥

असूत सा नागवधूपभोग्यं मैनाकमम्भोनिधिबद्धसख्यम् ॥
क्रुद्धेऽपि पक्षिच्छिदि वृत्रशत्रावावेदनाज्ञं कुलिशक्षतानाम् ॥ २० ॥

ಸಾ—ಆ ಮೇನಕೆಯು, ನಾಗವಧೂಪಭೋಗ್ಯಂ—ನಾಗಕನ್ನಿಕೆಯರನ್ನು ವಿವಾಹವಾದ, ಅಂಭೋನಿಧಿಬದ್ಧಸಖ್ಯಂ—ಸಮುದ್ರನಿಂದ ಮಾಡಲ್ಪಟ್ಟ ಸ್ನೇಹವುಳ್ಳ, ಪಕ್ಷಚ್ಛಿದಿ—ರೆಕ್ಕೆಗಳನ್ನು ಕತ್ತರಿಸುವ, ವೃತ್ರಶತ್ರೌ—ಇಂದ್ರನು ಕ್ರುದ್ಧೇಽಪಿ—ಕೋಪಗೊಂಡರೂ, ಕುಲಿಶಕ್ಷತಾನಾಂ—ವಜ್ರದ ಹೊಡೆತಗಳ, ಆವೇದನಾಜ್ಞಂ—ಪೀಡೆಯನ್ನು ತಿಳಿಯದಿರುವ, ಮೈನಾಕಂ—ಮೈನಾಕನೆಂಬ ಮಗನನ್ನು. ಅಸೂತ—ಹಡೆದಳು. ॥ (ಇಂದ್ರನ ವಜ್ರಪಹಾರವನ್ನು ತಪ್ಪಿಸಿಕೊಂಡು ಸಮುದ್ರದ ರಕ್ಷಣೆ ಪಡೆದ ಮೈನಾಕನೆಂಬ ಮಗನನ್ನು ಪ್ರಸವಿಸಿದಳು.)

ನಾಗಾನಾಂ ವಧ್ವಃ, ನಾಗವಧೂನಾಂ ಉಪಭೋಗ್ಯಃ, ತಮ್ ॥ ಅಂಭೋನಿಧಿನಾ ಬದ್ಧಂ ಸಖ್ಯಂ ಯೇನ ಸಃ ಅಂಭೋನಿಧಿಬದ್ಧಸಖ್ಯಃ ತಂ ॥ ಪಕ್ಷಂಛಿನತ್ತಿ ಇತಿ, ಪಕ್ಷಚ್ಛಿತ್ ತಸ್ಮಿನ್ ॥ ವೃತ್ರಸ್ಯ ಶತ್ರುಃ, ವೃತ್ರಶತ್ರುಃ ತಸ್ಮಿನ್ ॥ ವೇದಸಾಂ ಜಾನಾತಿ ಇತಿ, ವೇದನಜ್ಞಃನಭವತೀತಿ, ಅವೇದನಜ್ಞಃ, ತಮ್ ಕುಲಿಶಸ್ಯಕ್ಷತಾನಿ. ಕುಲಿಶಕ್ಷತಾನಿ. ತೇಷಾಮ್ ॥ ಷೂಙ್—ಪ್ರಾಣಿಗರ್ಭವಿಮೋಚನೇ—ಲಙ್. ಪ್ರ. ಪು. ಏ. ಅಸೂತ—ಅಸುವಾತಾಂ—ಅಸುವತ ॥ ಅಸೂಥಾಃ—ಅಸುವಾಥಾಂ—ಅಸೂಧ್ವಮ್ ॥ ಅಸುವಿ ಅಸೂವಹಿ—ಅಸೂಮಹಿ ॥ ೨೦ ॥

अथावमानेन पितुः प्रयुक्ता दक्षस्य कन्या भवपूर्वपत्नी ॥
सती सती योगविसृष्टदेहा तां जन्मने शैलवधूं प्रपेदे ॥ २१ ॥

ಅಥ—ಮೈನಾಕನು ಹುಟ್ಟಿದಮೇಲೆ, ದಕ್ಷಸ್ಯ—ದಕ್ಷನೆಂಬ ಬ್ರಹ್ಮನ, ಕನ್ಯಾ—ಮಗಳಾದ, ಭವಪೂರ್ವಪತ್ನೀ—ಶಿವನ ಹಿಂದಿನ ಹೆಂಡತಿಯಾದ, ಸತೀ—ಪತಿವ್ರತೆಯಾದ, 'ಸತೀ ಸಾಧ್ವೀ ಪತಿವ್ರತಾ' ಅಮರ. ಸತೀ—ಸತೀ ಎಂಬ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಹೆಸರುಳ್ಳ ದೇವಿಯು, ಪಿತುಃ—ತಂದೆಯಾದ ದಕ್ಷನ, ಅವಮಾನೇನ—ತಿರಸ್ಕಾರ ದಿಂದ, ಪ್ರಯುಕ್ತಾ—ಪ್ರೇರೇಪಿಸಲ್ಪಟ್ಟವಳಾಗಿ, ಯೋಗವಿಸೃಷ್ಟದೇಹಾ—ಯೋಗ ಮಾರ್ಗದಿಂದ ಬಿಡಿಸಲ್ಪಟ್ಟ ಶರೀರವುಳ್ಳವಳಾಗಿ, ಜನ್ಮನೇ—ತಿರುಗಿ ಜನಿಸಲು, ತಾಂ ಶೈಲ ವಧೂಂ—ಆ ಹಿಮವಂತನ ಪತ್ನಿಯಾದ ಮೇನಕೆಯನ್ನು ಪ್ರಪೇದೇ—ಹೊಂದಿದಳು ॥

ಪೂರ್ವಾ ಚ ಸಾ ಪತ್ನೀಚ ಪೂರ್ವಪತ್ನೀ. ಭವಸ್ಯ-ಪೂರ್ವಪತ್ನೀ ॥ ಯೋಗೇನ ವಿಸೃಷ್ಟಂ ದೇಹಂ ಯಯಾ ಸಾ ಯೋಗವಿಸೃಷ್ಟದೇಹಾ ॥ ಶೈಲಸ್ಯ ವಧೂಃ ಶೈಲವಧೂಃ ತಾಮ್ ॥ ಪ್ರ—ಉಪಸರ್ಗಃ ಪದ—ಗತೌ—ಧಾತು. ಲಿಟ್. ಪ್ರ. ಪು. ಏ. ಪೇದೇ-ಪೇದಾತೇ-ಪೇದಿರೆ । ಪೇದಿಷೇ-ಪೇದಾಥೇ-ಪೇದಿಧ್ವೇ॥ ಪೇದೇ-ಪೇದಿವಹೇ-ಪೇದಿಮಹೇ ॥

सा भूधराणामधिपेन तस्यां समाधिमत्याममुद्वहादि भव्या ॥
सम्यक्प्रयोगादपरिक्षतायां नीताविवोत्साहगुणेन संपत् ॥ २२ ॥

ಭವ್ಯಾ—ಮಂಗಲಕರಳಾದ, ಸಾ—ಆ ಸತಿಯು, ಭೂಧರಾಣಾಂ—ಪರ್ವತಗಳ, ಅಧಿಪೇನ—ಸ್ವಾಮಿಯಾದ ಹಿಮವಂತನಿಂದ, ಸಮಾಧಿಮತ್ಯಾಂ—ನಿಯಮದಿಂದ ಪರಿಶುದ್ಧಳಾದ, ತಸ್ಯಾಂ—ಆ ಮೇನಕೆಯಲ್ಲಿ, ಸಮ್ಯಕ್‌ಪ್ರಯೋಗಾತ್—ಸರಿಯಾಗಿ ಆಚರಿಸಿರುವುದರಿಂದ ಅಪರಿಕ್ಷತಾಯಾಂ—ಕೆಟ್ಟುಹೋಗದಿರುವ, ನೀತೌ—ನೀತಿಯಲ್ಲಿ, ಉತ್ಸಾಹಗುಣೇನ—ಉತ್ಸಾಹಶಕ್ತಿಯಿಂದ, ಸಂಪತ್ ಇವ—ಐಶ್ವರ್ಯದಂತೆ, ಉದಪಾದಿ—ಹುಟ್ಟಿಸಲ್ಪಟ್ಟಳು.

ಸ್ವಕಾಲಪರಿಮಾಣೇನ—ತನ್ನ ಕಾಲ ಪರಿಮಾಣದಿಂದ, (ಚತುರ್ಯುಗ ಸಹಸ್ರಕ್ಕೆ ಬ್ರಹ್ಮನಿಗೆ ಒಂದು ದಿನ.) ವ್ಯಸ್ತರಾತ್ರಿಂದಿವಸ್ಯ—ವಿಭಾಗಿಸಲ್ಪಟ್ಟ ರಾತ್ರಿ ಹಗಲುಳ್ಳ, ತೇ—ನಿನ್ನ ಯೌತು—ಯಾವ, ಸ್ವಪ್ನಾವಬೋಧೌ—ನಿದ್ರಾ (ರಾತ್ರಿ)—ಜಾಗೃದವಸ್ಥೆ (ಹಗಲು) ಗಳಿವೆಯೋ, ತೌ—ಅವು. ಭೂತಾನಾಂ—ಪ್ರಾಣಿಗಳಿಗೆ (ಪಂಚಭೂತಾತ್ಮಕ ಪ್ರಪಂಚಕ್ಕೆ) ಪ್ರಲಯೋದಯೌ—ಸಂಹಾರ ಸೃಷ್ಟಿಯಾಗುತ್ತವೆ.

ಸ್ವಸ್ಯಕಾಲಃ, ಸ್ವಕಾಲಃ, ಸ್ವಕಾಲಸ್ಯ ಪರಿಮಾಣಃ, ಸ್ವಕಾಲಪರಿಮಾಣಃ, ತೇನ ॥ ರಾತ್ರಿಶ್ಚ ದಿವಾ ಚ ರಾತ್ರಿಂದಿವಂ. ವ್ಯಸ್ತಂ ರಾತ್ರಿಂದಿವಂ ಯಸ್ಯಸಃ, ತಸ್ಯ ॥ ಸ್ವಪ್ನಶ್ಚ ಅವಬೋಧಶ್ಚ, ಸ್ವಪ್ನಾವಬೋಧೌ ॥ ಹೀಗೆಯೇ ಪ್ರಲಯೋದಯೌ ॥

जगद्योनिरयोनिस्त्वं जगदन्तो निरन्तकः ॥
जगदादिरनादिस्त्वं जगदीशो निरीश्वरः ॥ ೯ ॥

ತ್ವಂ—ನೀನು, ಜಗದ್ಯೋನಿಃ—ಜಗತ್ತಿಗೆ ಕಾರಣನು, ಅಯೋನಿಃ—ತಾನು ಕಾರಣರಹಿತನು. ಜಗದಂತಃ—ಜಗತ್ತನ್ನು ಸಂಹಾರಮಾಡುವವನು, ನಿರಂತಕಃ—ತಾನು ನಾಶರಹಿತನು. ತ್ವಂ—ನೀನು, ಜಗದಾದಿಃ—ಪ್ರಪಂಚಕ್ಕೆ ಮೊದಲಿಲ್ಲದವನು. ಅನಾದಿಃ—ಆದಿರಹಿತನು. ಜಗದೀಶಃ—ಪ್ರಪಂಚಕ್ಕೆ ಒಡೆಯನು. ನಿರೀಶ್ವರಃ—ತಾನು ನಿಯಾಮಕನಿಲ್ಲದವನು.

ಜಗತಾಂಯೋನಿಃ, ಜಗದ್ಯೋನಿಃ॥ ನವಿದ್ಯತೇ ಯೋನಿಃ ಯಸ್ಯಸಃ, ಅಯೋನಿಃ॥ ಜಗತಾಂ ಅಂತಃ, ಜಗದಂತಃ, ಅಂತಯತೀತ್ಯಂತಃ ॥ ನ ವಿದ್ಯತೇ ಅಂತಕಃ ಯಸ್ಯಸಃ, ನಿರಂತಕಃ ॥ ಜಗತಾಂ ಆದಿಃ, ಜಗದಾದಿಃ । ನ ವಿದ್ಯತೇ ಆದಿಃ ಯಸ್ಯಸಃ ಅನಾದಿಃ॥ ಜಗತಾಂ ಈಶಃ ಜಗದೀಶಃ॥ ನ ವಿದ್ಯತೇ ಈಶ್ವರಃ ಯಸ್ಯಸಃ, ನಿರೀಶ್ವರಃ ॥

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

आत्मानमात्मना वेत्सि सृजस्यात्मानमात्मना ॥
आत्मना कृतिना च त्वमात्मन्येव प्रलीयसे ॥ १० ॥

त्वं—ನೀನು, आत्मानं— (ಲೋಕಾನುಗ್ರಹಕ್ಕೋಸ್ಕರ ಉತ್ಪಾದಕನಾದ ಬ್ರಹ್ಮರೂಪವಾದ) ತನ್ನ ರೂಪವನ್ನು, आत्मना—ನಿನ್ನಿಂದಲೇ, वेत्सि—ತಿಳಿಯುವಿ. आत्मानं—ಸ್ವಸ್ವರೂಪವನ್ನು, आत्मना—ನಿನ್ನಿಂದಲೇ, सृजसि—ಸೃಷ್ಟಿಸುವಿ. कृतिना—ಸಮರ್ಥನಾದ, आत्मना—ನಿನ್ನಿಂದಲೇ, आत्मन्येव—ನಿನ್ನಲ್ಲಿಯೇ, प्रलीयसे—ಲಯವನ್ನು ಹೊಂದುವಿ ॥ वेत्ति—वित्तः—विदंति । वेत्सि—वित्थः—वित्थ । वेद्मि—विद्वः—विद्मः ॥ विद—ಜ್ಞಾನೇ. ಲಟ್. ಮ. ಪು. ಏ. ॥ प्र—ಉಪಸರ್ಗಃ लीङ्—ಶ್ಲೇಷಣೇ. ಲಟ್. ಮ. ಏ. लीयते—लीयेते—लीयंते—ಇತ್ಯಾದಿ ॥ ೧೦ ॥

द्रवः सांघतकठिनः स्थूलः सूक्ष्मो लघुर्गुरुः ॥
व्यक्तो व्यक्तेतरश्चासि प्राकाम्यं ते विभूतिषु ॥ ११ ॥

त्वं—ನೀನು, द्रवः—ನದೀ ಸಮುದ್ರಗಳಂತೆ ರಸಾತ್ಮಕನಾಗಿರುವಿ. संघातकठिनः—ಪರ್ವತಾದಿಗಳಂತೆ ನಿಬಿಡಸಂಯೋಗದಿಂದ ಗಟ್ಟಿಯಾಗಿರುವಿ. स्थूलः—ಘಟಾದಿಗಳಂತೆ ಇಂದ್ರಿಯಕ್ಕೆ ಗೋಚರನಾಗುವಿ. सूक्ष्मः—ಪರಮಾಣುಗಳಂತೆ ಇಂದ್ರಿಯಕ್ಕೆ ಗೋಚರನಲ್ಲ. लघुः—ಹತ್ತಿಯಂತೆ ಲಘುವಾಗಿರುವಿ. गुरुः—ಹಿಮವತ್ಪರ್ವತದಂತೆ ಅಲ್ಲಾಡಿಸಲು ಅಸಾಧ್ಯನು. व्यक्तः—ಕಾರ್ಯರೂಪನಾಗಿರುವಿ. व्यक्तेतरश्च असि— ಕಾರಣರೂಪನೂ ಆಗಿರುವಿ. (ಹೀಗೆ) विभूतिषु—ಅಣಿಮಾದಿ ಐಶ್ವರ್ಯಗಳಲ್ಲಿ, ते—ನಿನಗೆ. प्राकाम्यं—ಸ್ವಾತಂತ್ರ್ಯವಿದೆ. (ಇಚ್ಛಾನುಸಾರಿಯಾಗುವಿ.)

संघातेन कठिनः ॥ व्यक्तात् इतरः ॥ प्राकाम्यस्य भावः प्राकाम्यम् ॥ अस—ಭುವಿ. ಲಟ್. ಮ. ಪು. ಏ. असि—ಇತ್ಯಾದಿ. ೧ನೇ ಸರ್ಗ ೧ । ಶ್ಲೋ. ನೋಡಿ ।

उद्धातः प्रणवो यासां न्यायैस्त्रिभिरुदीरणम् ॥
कर्म यज्ञः फलं स्वर्गस्तासां त्वं प्रभवो गिराम् ॥ १२ ॥

पूज्यने, यासाम्—ಯಾವ, गिराम्— (ವೇದದ) ಮಾತುಗಳಿಗೆ, उद्धातः—ಆರಂಭವಾದ, प्रणवः—ಓಂಕಾರವೋ, 'ओंकारप्रणवौ समौ.'

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

'स्यादभ्यादानमुद्घात आरंभः' ಅಮರ. (ಯಾವ ಮಾತುಗಳಿಗೆ) ನ್ಯಾಯೈಃ—ಅರ್ಥ ವಿಶೇಷವನ್ನು ವ್ಯಕ್ತಗೊಳಿಸುವ, ತ್ರಿಭಿಃ—ಉದಾತ್ತ, ಅನುದಾತ್ತಸ್ವರಿತರೂಪವಾಗಿ ಮೂರು ಸ್ವರಗಳಿಂದ, ಉದೀರಣಂ—ಉಚ್ಚಾರಣೆ ಇರುತ್ತದೆಯೋ, (ಯಾವ ಮಾತುಗಳಿಗೆ) ಕರ್ಮ—ಪ್ರತಿಪಾದ್ಯವಾದ ಕಾರ್ಯವು, ಯಜ್ಞಃ—ಯಾಗವೋ, (ಯಾವ ಮಾತುಗಳಿಗೆ) ಸ್ವರ್ಗಃ— ಸ್ವರ್ಗ ಸುಖವೇ, ಫಲಂ—ಫಲವಾಗಿದೆಯೋ, ತಾಸಾಂಗಿರಾಂ— ಆ ಮಾತುಗಳಿಗೆ. ತ್ವಂ—ನೀನು, ಪ್ರಭವಃ—ಕಾರಣನು. ವೇದಗಳಿಗೆ ನೀನೇ ಮೂಲಕಾರಣನು ಎಂದರ್ಥ ॥

त्वामामनन्ति प्रकृतिं पुरुषार्थप्रवर्तिनीम् ॥
तद्दर्शिनमुदासीनं त्वामेव पुरुषं विदुः ॥ १३ ॥

ಪೂಜ್ಯನೇ, ತ್ವಾಂ— ನಿನ್ನನ್ನು. ಪುರುಷಾರ್ಥ ಪ್ರವರ್ತಿನೀಂ—ಪುರುಷನ ಭೋಗಾಪವರ್ಗ (ಮೋಕ್ಷ) ಗಳಿಗೋಸ್ಕರ ಉದ್ಯೋಗಿಸುವ (ಕಾರ್ಯಮಾಡುವ) ಪ್ರಕೃತಿಂ—ತ್ರಿಗುಣಾತ್ಮಕವಾದ ಮೂಲಕಾರಣವನ್ನು. ಆಮನಂತಿ—ಹೇಳುತ್ತಾರೆ. ತ್ವಾಮೇವ—ನಿನ್ನನ್ನೇ, ತದ್ದರ್ಶಿನಂ— ಆ ಪ್ರಕೃತಿಯನ್ನು ಸಾಕ್ಷಿರೂಪದಿಂದ ನೋಡತಕ್ಕ, ಉದಾಸೀನಂ—ಯಾವ ಸಂಬಂಧವೂ ಇಲ್ಲದಿರುವ, ಪುರುಷಂ—ಪುರುಷನನ್ನಾಗಿ, ವಿದುಃ—ತಿಳಿಯುತ್ತಾರೆ.

पुरुषस्य अर्थः, पुरुषार्थः, पुरुषार्थाय प्रवर्तत इति. पुरुषार्थप्रवर्तिनीं. तामं ॥ तां पश्यति इति तद्दर्शिनं. तमं ॥ आङ्—उपसर्गः—मन्—अभ्यासे— लट्. प्र. पु. ब. ಮನತಿ ಮನತಃ—ಮನಂತಿ—ಇತ್ಯಾದಿ ॥ ವೇದ—ವಿದತುಃ—ವಿದುಃ । ವೇತ್ಥ—ವಿದಥುಃ—ವಿದ । ವೇದ—ವಿದ್ವ—ವಿದ್ಮ । विद—ज्ञाने. लट्. प्र. पु. ब ॥

त्वं पितॄणामपि पिता देवानामपि देवता ॥
परतोऽपि परश्चासि विधाता वेधसामपि ॥ १४ ॥

ತ್ವಂ—ನೀನು, ಪಿತೃಣಾಂ ಅಪಿ— ಅಗ್ನಿಷ್ವಾತ್ತಾದಿ ಪಿತೃಗಳಿಗೂ, ಪಿತಾ—ಪಿತೃವಾಗಿರುವಿ. ದೇವಾನಾಮಪಿ—ಇಂದ್ರಾದಿ ದೇವತೆಗಳಿಗೂ, ದೇವತಾ— ದೇವತೆಯಾಗಿರುವಿ (ಪೂಜ್ಯ) ಪರತೋಽಪಿ—ಸೂಕ್ಷ್ಮವಾದ ಪದಾರ್ಥಕ್ಕಿಂತಲೂ, ಪರಶ್ಚ, ಅಸಿ—ಸೂಕ್ಷ್ಮನಾಗಿರುವಿ. ಸರ್ವೋತ್ತಮನೆಂದು ತಾತ್ಪರ್ಯ. ವೇಧಸಾಮಪಿ—ದಕ್ಷಾದಿ ಬ್ರಹ್ಮರಿಗೂ, ವಿಧಾತಾಸಿ — ಬ್ರಹ್ಮನಾಗಿರುವಿ. (ಅವರಿಗೂ ಸೃಷ್ಟಿಕರ್ತನಾಗಿರುವಿ.) ಅಸ— ಭುವಿ. ಲಟ್. ಮ. ಪು. ಏ. ಸರ್ಗ ೧. ಶ್ಲೋಕ ೧ ನೋಡಿ.

CC-0. Bhagavad Ramanuja National Research Institute, Melukote Collection.

.Funding: Tattva Heritage Foundation,Kolkata. Digitization: eGangotri.

त्वमेव हव्यं होता च भोज्यं भोक्ता च शाश्वतः ॥
वेद्यं च वेदिता चासि ध्याता ध्येयं च यत्परम् ॥ १५ ॥

ಶಾಶ್ವತಃ—ನಿತ್ಯನಾದ, ತ್ವಮೇವ–ನೀನೇ, ಹವ್ಯಂ–ಹೋಮಿಸಲು ಯೋಗ್ಯವಾದ ಆಜ್ಯಾದಿಗಳೂ, ಹೋತಾಚ—ಹೋಮಿಸುವವನೂ, ಅಸಿ—ಆಗಿರುವಿ. ಭೋಜ್ಯಂ–ತಿನ್ನಲು ಯೋಗ್ಯವಾದ ಅನ್ನವೂ, ಭೋಕ್ತಾಚ–ತಿನ್ನುವವನೂ (ನೀನೇ ಆಗಿರುವಿ.) ವೇದ್ಯಂಚ—ತಿಳಿಯಲ್ಪಡುವ ವಸ್ತುವೂ. ವೇದಿತಾಚ–ತಿಳಿಯುವವನೂ, ಅಸಿ–ನೀನೇ ಆಗಿರುವಿ. ಪರಂ–ಉತ್ಕೃಷ್ಟವಾದ ಧ್ಯೇಯಂ—ಧ್ಯಾನಿಸಲು ಯೋಗ್ಯವಾದ ವಸ್ತುವೂ, ಧ್ಯಾತಾ ಅಸಿ–ಧ್ಯಾನಿಸುವವನೂ ನೀನೇ ಆಗಿರುವಿ. ಹೂಯತೇ ಇತಿಹವ್ಯಮ್ । ಭೋಕ್ತುಂ ಯೋಗ್ಯಂ ಭೋಜ್ಯಮ್ । ಶಶ್ವತ್ಸಿದ್ಧಃ ಶಾಶ್ವತಃ ॥ ವೇತ್ತುಂ ಯೋಗ್ಯಂ ವೇದ್ಯಮ್ । ಧ್ಯಾತುಂ ಯೋಗ್ಯಂ ಧ್ಯೇಯಮ್ ॥ ೧೫ ॥

इति तेभ्यः स्तुतीः श्रुत्वा यथार्था हृदयंगमाः ॥
प्रसादाभिमुखो वेधाः प्रत्युवाच दिवौकसः ॥ १६ ॥

ವೇಧಾಃ–ಬ್ರಹ್ಮನು, ಇತಿ—ಈ ರೀತಿಯಾದ, ತೇಭ್ಯಃ– ಆ ದೇವತೆಗಳ ದೆಸೆಯಿಂದ, ಯಥಾರ್ಥಾಃ-ಸತ್ಯವಾದ, ಹೃದಯಂಗಮಾಃ–ಮನೋಹರವಾದ, ಸ್ತುತೀಃ–ಸ್ತೋತ್ರಗಳನ್ನು, ಶ್ರುತ್ವಾ—ಕೇಳಿ, ಪ್ರಸಾದಾಭಿಮುಖಃ-ಅನುಗ್ರಹಮಾಡುವವನಾಗಿ, ದಿವೌಕಸಃ–ದೇವತೆಗಳನ್ನು ಕುರಿತು, ಪ್ರತ್ಯುವಾಚ—ಉತ್ತರ ಹೇಳಿದನು.

ಯಥಾ ಅರ್ಥಃ ಯಾಸಾಂತಾಃ ಯಥಾರ್ಥಾಃ, ತಾಃ । ಹೃದಯಂ ಗಚ್ಛತೀತಿ ಹೃದಯುಂಗಮಾಃತಾಃ ॥ ಪ್ರಸಾದೇ ಅಭಿಮುಖಃ ॥ ದಿವಃ ಓಕಃ ಯೇಷಾಂತೇ ದಿವೌಕಸಃ, ತಾನ್ ॥ ಪ್ರತಿಉಪಸರ್ಗಃ–ಬ್ರೂ ಙ್–ವ್ಯಕ್ತಾಯಾಂ ವಾಚಿ. ಲಿಟ್. ಪ್ರ. ಪು. ಏ. ಉವಾಚ–ಊಚತುಃ–ಊಚುಃ । ಉವಚಿಥ, ಉವಕ್ಥ–ಊಚಥುಃ–ಊಚ । ಉವಾಚ, ಉವಚ—ಊಚಿವ—ಊಚಿಮ ॥

पुराणस्य कवेस्तस्य चतुर्मुखसमीरिता ॥
प्रवृत्तिरासीच्छन्दानां चरितार्था चतुष्टयी ॥ १७ ॥

ಚತುಷ್ಟಯೀ—ದ್ರವ್ಯ, ಗುಣ, ಕ್ರಿಯಾ, ಜಾತಿಭೇದದಿಂದ ನಾಲ್ಕು ಅವಯವಗಳುಳ್ಳ, ಶಬ್ದಾನಾಂ—ಶಬ್ದಗಳ, ಪ್ರವೃತ್ತಿಃ—ವೈಖರೀ, ಮಧ್ಯಮಾ, ಪಶ್ಯಂತೀ, ಪರಾ, ರೂಪವಾದ ವಾಗ್ವ್ಯಾಪಾರವು ಪುರಾಣಸ್ಯ–ಪುರಾತನನಾದ, ಕವೇಃ—ಕವಿ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಯಾದ ಬ್ರಹ್ಮನ, ಚತುರ್ಮುಖ ಸಮೀರಿತಾ— ನಾಲ್ಕು ಮುಖಗಳಿಂದ ಹೇಳಲ್ಪಟ್ಟ ದ್ದಾಗಿ, ಚರಿತಾರ್ಥಾ—ಅನ್ವರ್ಥವುಳ್ಳದ್ದು (ಸಫಲ) ಆಸೀತ್—ಆಯಿತು ॥

ಚತ್ವಾರಿ ಚ ತಾನಿ ಮುಖಾನಿಚ ಚತುರ್ಮುಖಾನಿ. ಚತುರ್ಮುಖೇಭ್ಯಃ ಸಮೀರಿತಾ, ಚತುರ್ಮುಖಸಮೀರಿತಾ ॥ ಚರಿತಃ ಅರ್ಥಃ ಯಸ್ಯಾಃ ಸಾ ಚರಿತಾರ್ಥಾ ॥ ಚತ್ವಾರಃ ಅವಯವಾಃ ಯಸ್ಯಾಃ ಸಾ. ಚತುಷ್ಪಯೀ ॥ ಅಸ–ಭುವಿ. ಅಜ್. ಪ್ರ. ಪು. ಏ. ಆಸೀತ್ — ಆಸ್ತಾಂ–ಆಸನ್ । ಆಸೀಃ— ಆಸ್ತಂ. ಆಸ್ತ । ಆಸಂ–ಆಸ್ವ–ಆಸ್ಮ ॥

स्वागतं स्वानधीकारान्प्रभावैरवलम्ब्य वः ॥
युगपद्युगबाहुभ्यः प्राप्तेभ्यः प्राज्यविक्रमाः ॥ १८ ॥

ಪ್ರಾಜ್ಯವಿಕ್ರಮಾಃ—ಅಧಿಕಪರಾಕ್ರಮಶಾಲಿಗಳಾದ ದೇವತೆಗಳಿರಾ, ಸ್ವಾನ್—ತಮ್ಮ ತಮ್ಮ, ಅಧೀಕಾರಾನ್—ನಿಯೋಗವನ್ನು (ಪದವೀ) ಪ್ರಭಾವೈಃ—ಸ್ವಸಾಮರ್ಥ್ಯಗಳಿಂದಲೇ, ಅವಲಂಬ್ಯ—ಹೊಂದಿ (ಆಶ್ರಯಿಸಿದ್ದು) ಯುಗಪತ್—ಏಕಕಾಲದಲ್ಲಿ, ಪ್ರಾಪ್ತೇಭ್ಯಃ — ಬಂದಿರುವ, ಯುಗಬಾಹುಭ್ಯಃ — ದೀರ್ಘವಾದ ತೋಳುಗಳುಳ್ಳ (ಆಜಾನುಬಾಹುಗಳಾದ) ವಃ — ನಿಮಗೆ, ಸ್ವಾಗತಮ್—ಸುಖಾಗಮನವಷ್ಟೆ ॥

ಯುಗಾಇವ ಬಾಹವಃ ಯೇಷಾಂತೇ ಯುಗಬಾಹವಃ, ತೇಭ್ಯಃ ॥ ಪ್ರಾಜ್ಯಃ ವಿಕ್ರಮಃ ಯೇಷಾಂತೇ ಪ್ರಾಜ್ಯವಿಕ್ರಮಾಃ ॥ ೧೮ ॥

किमिदं श्रुतिमात्मीयां न बिभ्रति यथा पुरा ॥
हिमक्लिष्टप्रकाशानि ज्योतींषीव मुखानि वः ॥ १९ ॥

(ಹೇ ವತ್ಸಾಃ—ಎಲೇ ಪುತ್ರರಿರಾ) ಹಿಮಕ್ಲಿಷ್ಟ ಪ್ರಕಾಶಾನಿ— ಮಂಜಿನಿಂದ ಮಂದಕಾಂತಿಯುಳ್ಳ, ಜ್ಯೋತೀಂಷಿ ಇವ–ನಕ್ಷತ್ರಗಳಂತೆ, ವಃ–ನಿಮ್ಮ, ಮುಖಾನಿ–ಮುಖಗಳು, ಪುರಾ ಯಥಾ — ಹಿಂದಿನಂತೆ, ಆತ್ಮೀಯಾಂ — ಸ್ವಕೀಯವಾದ, ದ್ಯುತಿಂ—ಕಾಂತಿಯನ್ನು, ನ ಬಿಭ್ರತಿ–ಧರಿಸುವುದಿಲ್ಲ. ಇದಂ ಕಿಮ್ ?—ಇದೇನು ? (ಕಾರಣವೇನು ?) ಆತ್ಮನಃ ಇಯಂ–ಆತ್ಮೀಯಾ, ತಾಮ್ । ಹಿಮೈಃ ಕ್ಲಿಷ್ಟಾಃ ಹಿಮಕ್ಲಿಷ್ಟಾಃ, ಹಿಮಕ್ಲಿಷ್ಟಾಃ ಪ್ರಕಾಶಾಃ ಯೇಷಾಂತಾನಿ ॥ ಡುಭೃಞ್—ಭರಣೇ. ಲಟ್. ಪ್ರ. ಪು. ಬ. ಬಿಭರ್ತಿ–ಬಿಭೃತಃ–ಬಿಭ್ರತಿ । ಬಿಭರ್ಷಿ–ಬಿಭೃಥಃ–ಬಿಭೃಥ । ಬಿಭರ್ಮಿ–ಬಿಭೃವಃ—ಬಿಭೃಮಃ ॥

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

प्रशमादर्चिषामेतदनुद्गीर्णसुरायुधम् ॥
वृत्रस्य हन्तुः कुलिशं कुण्ठितास्रीव लक्ष्यते ॥ २० ॥

ಅರ್ಚಿಷಾಂ—ತೇಜಸ್ಸುಗಳ, ಪ್ರಶಮಾತ್—ನಾಶದಿಂದ, ಅನುದ್ಗೀರ್ಣಸುರಾಯುಧಮ್—ಪ್ರಕಟಪಡಿಸದಿಹುವ ನಾನಾ ಬಣ್ಣಗಳುಳ್ಳ, ಏತತ್—ಈ, ವೃತ್ರಸ್ಯ—ವೃತ್ರಾಸುರನನ್ನು, ಹಂತುಃ—ಕೊಂದಿರುವ ಇಂದ್ರನ, ಕುಲಿಶಂ—ವಜ್ರಾಯುಧವು, ಕುಂಠಿತಾಸ್ರಿ ಇವ—ಮೊಂಡಾದ ತುದಿಯುಳ್ಳದ್ದೋ ಎಂಬಂತೆ, ಲಕ್ಷ್ಯತೇ—ತೋರುತ್ತದೆ.

ಅನುದ್ಗೀರ್ಣಂ ಸುರಾಯುಧಂ ಯೇನ ತತ್ ॥ ಲಕ್ಷ—ದರ್ಶನಾಂಕನಯೋಃ-ಕರ್ಮಣಿ ಲಟ್. ಪ್ರ. ಪು. ಏ. । ಲಕ್ಷ್ಯತೇ—ಲಕ್ಷ್ಯೇತೇ—ಲಕ್ಷ್ಯಂತೇ—ಇತ್ಯಾದಿ ॥

किं चायमरिदुर्वारः पाणौ पाशः प्रचेतसः ॥
मन्त्रेण हृतवीर्यस्य फणिनो दैन्यमाश्रितः ॥ २१ ॥

ಕಿಂಚ—ಮತ್ತು, ಅಯಂ—ಈ, ಅರಿದುರ್ವಾರಃ—ಶತ್ರುಗಳಿಂದ ತಡೆಯಲು ಅಸಾಧ್ಯವಾದ, ಪ್ರಚೇತಸಃ—ವರುಣನ, 'ಪ್ರಚೇತಾ ವರುಣಃ ಪಾಶೀ' ಅಮರ. ಪಾಣೌ—ಕೈಯ್ಯಲ್ಲಿರುವ, ಪಾಶಃ—ಪಾಶಾಯುಧವು (ಹಗ್ಗದರೂಪವಾದ ಆಯುಧ) ಮಂತ್ರೇಣ—ಗಾರುಡಮಂತ್ರದಿಂದ, ಹತವೀರ್ಯಸ್ಯ—ಕಳೆದ ಶಕ್ತಿಯುಳ್ಳ, ಫಣಿನಃ—ಸರ್ಪದ, ದೈನ್ಯಂ—ದೀನಭಾವವನ್ನು, ಆಶ್ರಿತಃ—ಹೊಂದಿರುತ್ತದೆ.

ಅರೀಣಾಂ ದುರ್ವಾರಃ, ಅರಿದುರ್ವಾರಃ. ದುಃಖೇನವಾರಯಿತುಂಶಕ್ಯಃ ದುರ್ವಾರಃ ॥ ಹತಂ ವೀರ್ಯಂ ಯಸ್ಯಸಃ, ಹತವೀರ್ಯಃ, ತಸ್ಯ । ಫಣಾ ಅಸ್ಯ ಅಸ್ತಿ ಇತಿ ಫಣೀ. ತಸ್ಯ । ದೀನಸ್ಯಭಾವಃ ದೈನ್ಯಮ್ ॥ ೨೧ ॥

कुबेरस्य मनःशल्यं शंसतीव पराभवम् ॥
अपविद्धगदो बाहुर्भग्नशाख इव द्रुमः ॥ २२ ॥

ಅಪವಿದ್ಧಗದಃ—ಬಿಡಲ್ಪಟ್ಟ ಗದೆಯೆಂಬ ಆಯುಧವುಳ್ಳ, ಭಗ್ನಶಾಖಃ—ಮುರಿದ ಕೊಂಬೆಯುಳ್ಳ, ದ್ರುಮಇವ—ಮರದಂತೆ ಇರುವ, ಕುಬೇರಸ್ಯ—ಕುಬೇರನ, ಬಾಹುಃ—ತೋಳು, ಮನಃಶಲ್ಯಂ—ಮನಸ್ಸಿಗೆ ದುಃಖವನ್ನುಂಟುಮಾಡುವ, ಪರಾಭವಂ—ಪರಾಜಯವನ್ನು, ಶಂಸತೀವ—ಹೇಳುವುದೋ ಎಂಬಂತೆ ಇದೆ.

ಮನಸಃ ಶಲ್ಯಂ—ಮನಃಶಲ್ಯಮ್ ॥ ಅಪವಿದ್ಧಾಗದಾ ಯೇನ ಸಃ ಅಪವಿದ್ಧಗದಃ । ಭಗ್ನಾ ಶಾಖಾಯಸ್ಯಸಃ ಭಗ್ನಶಾಖಃ ॥ ಶಂಸು—ಸ್ತುತೌ. ಲಟ್. ಪ್ರ. ಪು. ಏ. ಶಂಸತಿ—ಶಂಸತಃ—ಇತ್ಯಾದಿ ॥ ೨೨ ॥

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

यमोऽपि विलिखन्भूमिं दण्डेनास्तमितत्विषा ॥
कुरुतेऽस्मिन्नमोघेऽपि निर्वाणालातलाघवम् ॥ २३ ॥

ಅಸ್ತಮಿತತ್ವಿಷಾ—ನಾಶಹೊಂದಿದ ಕಾಂತಿಯುಳ್ಳ, ದಂಡೇನ—ದಂಡವೆಂಬ ಆಯುಧದಿಂದ, ಭೂಮಿಂ—ನೆಲವನ್ನು, ವಿಲಿಖನ್—ಗೀರುತ್ತಾ, ಅಮೋಘೇಪಿ—ಶಕ್ತಿಯುಕ್ತವಾಗಿದ್ದರೂ, ಅಸ್ಮಿನ್— ಈ ದಂಡಾಯುಧದಲ್ಲಿ, ನಿರ್ವಾಣಾಲಾತ ಲಾಘವಮ್—ಆರಿದ ಬೆಂಕಿಯುಳ್ಳ ಸೌದೆಯ ಲಘುತ್ವವನ್ನು, (ಅಲ್ಪಭಾವವನ್ನು) ಕುರುತೆ—ಮಾಡುತ್ತಾನೆ. (ನಿಷ್ಪ್ರಯೋಜನವೆಂದು ತೋರಿಸುತ್ತಾನೆ.) ॥ ಅಸ್ತಮಿತಾತ್ವಿಟ್ ಯಸ್ಯಸಃ, ಅಸ್ತಮಿತತ್ವಿಟ್. ತೇನ ॥ ನಿರ್ವಾಣಶ್ಚಾಸೌ ಅಲಾತಶ್ಚ.ನಿರ್ವಾಣಾಲಾತಃ, ತಸ್ಯ ಲಾಘವಮ್ ॥ ಡುಕೃಞ್-ಕರಣೇ. ಲಟ್. ಪ್ರ. ಪು. ಏ. ಕುರುತೇ–ಕುರ್ವಾತೇ–ಕುರ್ವತೇ। ಕುರುಷೇ–ಕುರ್ವಾಥೇ–ಕುರು ಧ್ವೇ। ಕುರ್ವೇ–ಕುರ್ವಹೇ–ಕುರ್ಮಹೇ ॥ ೨೩ ॥

अमी च कथमादित्याः प्रतापक्षतिशीतलाः ॥
चित्रन्यस्ता इव गताः प्रकामालोकनीयताम् ॥ २४ ॥

ಪ್ರತಾಪಕ್ಷತಿಶೀತಲಾಃ— ತೇಜಸ್ಸಿನ ನಾಶದಿಂದ ತಣ್ಣಗಾದ, ಅಮೀ ಆದಿತ್ಯಾಃ–ಈ ಹನ್ನೆರಡು ಜನ ಸೂರ್ಯರು, ಕಥಂ–ಯಾವ ಕಾರಣದಿಂದ, ಚಿತ್ರನ್ಯಸ್ತಾ ಇವ—ಚಿತ್ರದಲ್ಲಿ ಬರೆದವರಂತೆ, ಪ್ರಕಾಮಾಲೋಕನೀಯತಾಮ್—ಚನ್ನಾಗಿ ಕಣ್ಣಿನಿಂದ ನೋಡಲು ಸಾಧ್ಯರಾದವರ ಅವಸ್ಥೆಯನ್ನು, ಗತಾಃ—ಹೊಂದಿರುತ್ತಾರೆ. (ಚನ್ನಾಗಿ ನೋಡುವಂತೆ ಆಗಿದ್ದಾರೆ.)

ಪ್ರತಾಪಸ್ಯಕ್ಷತಿಃ, ಪ್ರತಾಪಕ್ಷತಿಃ, ಪ್ರತಾಪಕ್ಷತ್ಯಾ ಶೀತಲಾಃ ॥ ಚಿತ್ರೇನ್ಯಸ್ತಾಃ ಚಿತ್ರನ್ಯಸ್ತಾಃ ॥ ಪ್ರಕಾಮಂ ಆಲೋಕಯಿತುಂಯೋಗ್ಯಃ ಪ್ರಕಾಮಾಲೋಕನೀಯಃ, ತಸ್ಯ ಭಾವಃ ಪ್ರಕಾಮಾಲೋಕನೀಯತಾ ತಾಮ್ ॥ ೨೪ ॥

पर्याकुलत्वान्मरुतां वेगभङ्गोऽनुमीयते ॥
अम्भसामोघसंरोधः प्रतीपगमनादिव ॥ २५ ॥

ಮರುತಾಂ—ವಾಯುಗಳ, ಪರ್ಯಾಕುಲತ್ವಾತ್— ತಡೆದು ಬೀಸುವುದರಿಂದ, ವೇಗಭಂಗಃ— ವೇಗದ ತಡೆಯು, ಅಂಭಸಾಂ—ನೀರಿನ, ಪ್ರತೀಪಗಮನಾತ್—ಹಿಂದಿರುಗಿ ಹರಿಯುವುದರಿಂದ, ಓಘಸಂರೋಧ। ಇವ–ಪ್ರವಾಹದ ತಡೆಯಂತೆ, ಅನುಮೀಯತೇ—ಊಹಿಸಲ್ಪಡುತ್ತದೆ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಪರ್ಯಾಕುಲಸ್ಯಭಾವಃ ಪರ್ಯಾಕುಲತ್ವಮ್. ತಸ್ಮಾತ್ । ವೇಗಸ್ಯಭಂಗಃ ವೇಗ ಭಂಗಃ । ಓಘಾನಾಂ ಸಂಘೋಧಃ, ಓಘಸಂಘೋಧಃ । ಪ್ರತೀಪಂ ಗಮನಂ, ಪ್ರತೀಪ ಗಮನಂ, ತಸ್ಮಾತ್ । ಅನು—ಉಪಸರ್ಗ. ಮಾಙ್-ಮಾನೇ. ಕರ್ಮಣಿ. ಲಟ್. ಪ್ರ. ಪು. ಏ. । ಮೀಯತೇ—ಮೀಯೇತೇ—ಇತ್ಯಾದಿ ॥ ೨೫ ॥

आवर्जितजटामौलिविलम्बिशशिकोटयः ॥
रुद्राणामपि मूर्धानः क्षतहुंकारशंसिनः ॥ २६ ॥

ಆವರ್ಜಿತಜಟಾಮೌಲಿವಿಲಂಬಿ ಶಶಿಕೋಟಯಃ—ದುಃಖದಿಂದ ಬಗ್ಗಿದ ಜಡೆಗಳ ತುದಿಗಳಲ್ಲಿ ಜೋತಾಡುವ ಚಂದ್ರಲೇಖೆಯುಳ್ಳ, ರುದ್ರಾಣಾಮಪಿ—ಹನ್ನೊಂದು ಜನ ರುದ್ರರ, ಮೂರ್ಧಾನಃ—ತಲೆಗಳು, ಕ್ಷತಹುಂಕಾರಶಂಸಿನಃ—ನಾಶವಾದ ಹುಂಕಾರದ ಶಕ್ತಿಯನ್ನು ಹೇಳುತ್ತಲಿವೆ.

ಜಟಾನಾಂ ಮೌಲಯಃ, ಜಟಾಮೌಲಯಃ, ಆವರ್ಜಿತಾಶ್ಚತೇ ಜಟಾಮೌಲ ಯಶ್ಚ. ಆವರ್ಜಿತಜಟಾಮೌಲಯಃ, ಆವ—ಲಿಷು. ವಿಲಂಬಿನಃ, ಆವ—ಲಂಬಿನಃ. ಶಶಿನಃ ಕೋಟಯಃ, ಶಶಿಕೋಟಯಃ, ಆವ—ಲಂಬಿನಃ ಶಶಿಕೋಟಯಃ ಯೇಷುತೇ. ಆವ—ಕೋಟಯಃ ॥ ಕ್ಷತಶ್ಚಾಸೌ ಹುಂಕಾರಶ್ಚ, ಕ್ಷತಹುಂಕಾರಃ, ಕ್ಷತಹುಂಕಾರಂ ಶಂಸಂತಿ ಇತಿ ಕ್ಷತಹುಂಕಾರ ಶಂಸಿನಃ ॥ ೨೬ ॥

लब्धप्रतिष्ठाः प्रथमं यूयं किं बलवत्तरैः ॥
अपवादैरिवोत्सर्गाः कृतव्यावृत्तयः परैः ॥ २७ ॥

ಪ್ರಥಮಂ—ಮೊದಲು, ಲಬ್ಧಪ್ರತಿಷ್ಠಾಃ—ಹೊಂದಿದ ಉತ್ತಮ ಸ್ಥಿತಿಯುಳ್ಳ, ಯೂಯಂ—ನೀವು, ಬಲವತ್ತರೈಃ—ಬಲಶಾಲಿಗಳಾದ, ಪರೈಃ—ಶತ್ರುಗಳಿಂದ, ಉತ್ಸರ್ಗಾಃ—ಸಾಮಾನ್ಯ ಶಾಸ್ತ್ರಗಳು, ಅಪವಾದೈಃ—ವಿಶೇಷ ಶಾಸ್ತ್ರಗಳಿಂದ ಎಂಬಂತೆ ಕೃತವ್ಯಾವೃತ್ತಯಃ—ಮಾಡಲ್ಪಟ್ಟ ಸ್ಥಾನ ಭಂಗವುಳ್ಳವರಾಗಿರುವಿರಿ.

ವ್ಯಾಕರಣಾದಿ ಶಾಸ್ತ್ರಗಳಲ್ಲಿ ಸಾಮಾನ್ಯ ಶಾಸ್ತ್ರಕ್ಕೆ ವಿಶೇಷಶಾಸ್ತ್ರ ಬಾಧಕವಾಗುತ್ತದೆ. ವಿಶೇಷ ಶಾಸ್ತ್ರಕ್ಕೆ ಸ್ಥಾನ ಬಿಟ್ಟುಕೊಟ್ಟು ಉಳಿದೆಡೆಗಳಲ್ಲಿ ಸಾಮಾನ್ಯ ಶಾಸ್ತ್ರವು ಚರಿತಾರ್ಥವಾಗುತ್ತದೆ. ಅದರಂತೆ ದೇವತೆಗಳು ಶತ್ರುಗಳಿಗೆ ತಮ್ಮ ಸ್ಥಾನ ಗಳನ್ನು ಕೊಟ್ಟು ಸಂಕೋಚದಿಂದ ವ್ಯಥೆ ಪಡುತ್ತಿದ್ದಾರೆ ಎಂದು ತಾತ್ಪರ್ಯ. ॥

ಲಬ್ಧಾಃ ಪ್ರತಿಷ್ಠಾಃ ಯೈಸ್ತೇ ಲಬ್ಧಪತಿಷ್ಠಾಃ ॥ ಕೃತಾ ವ್ಯಾವೃತ್ತಿಃ ಯೇಷಾಂ ತೇ. ಕೃತವ್ಯಾವೃತ್ತಯಃ ॥

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

तद्भूत वत्साः किमितः प्रार्थयध्वं समागताः
मयि सृष्टिर्हि लोकानां रक्षा युष्मास्ववस्थिता ॥ २८ ॥

ತತ್–ಆಕಾರಣದಿಂದ, ವತ್ಸಾಃ–ಮಕ್ಕಳೇ, ಸಮಾಗತಾಃ–ಒಟ್ಟಿಗೆ ಬಂದಿರುವ, ನೀವು ಇತಃ–ಈ ನನ್ನಿಂದ, ಕಿಂ ಪ್ರಾರ್ಥಯಧ್ವಂ–ಏನನ್ನು ಬಯಸುತ್ತೀರಿ? ಬ್ರೂತ–ಹೇಳಿರಿ. ಮಯಿ–ನನ್ನಲ್ಲಿ, ಲೋಕಾನಾಂ–ಪ್ರಪಂಚದ, ಸೃಷ್ಟಿರ್ಹಿ–ಸೃಷ್ಟಿ ಕಾರ್ಯಮಾತ್ರವಷ್ಟೆ. ರಕ್ಷಾ–ಲೋಕರಕ್ಷಣೆಯು, ಯುಷ್ಮಾಸು–ನಿಮ್ಮಲ್ಲಿ, ಅವಸ್ಥಿತಾ–ಇದೆಯಷ್ಟೆ ॥

ಬ್ರವೀತು, ಬ್ರೂತಾತ್—ಬ್ರೂತಾಂ—ಬ್ರುವಂತು। ಬ್ರೂಹಿ, ಬ್ರೂತಾತ್ ಬ್ರೂತಂ–ಬ್ರೂತ, । ಬ್ರವಾಣಿ–ಬ್ರವಾವ–ಬ್ರವಾಮ ॥ ಬ್ರೂಞ್–ವ್ಯಕ್ತಾಯಾಂ ವಾಚಿ–ಲೋಟ್, ಮ. ಪು. ಬ. ॥ ಪ್ರ–ಉಪಸರ್ಗ. ಅರ್ಥ–ಯಾಚ್ಞಾಯಾಮ್–ಮ. ಪು. ಬ.॥ ಅರ್ಥಯತಾಂ–ಅರ್ಥಯೇತಾಂ–ಅರ್ಥಯಂತಾಮ್। ಅರ್ಥಯಸ್ವ–ಅರ್ಥಯೇಥಾಂ—ಅರ್ಥಯಧ್ವಮ್ । ಅರ್ಥಯೈ—ಅರ್ಥಯಾವಹೈ—ಅರ್ಥಯಾಮಹೈ ॥

ततो मन्दानिलोद्धूतकमलाकरशोभिना ॥
गुरुं नेत्रसहस्रेण नोदयामास वासवः ॥ २९ ॥

ತತಃ–ಆಮೇಲೆ, ವಾಸವಃ–ಇಂದ್ರನು, ಗುರುಂ–ಬೃಹಸ್ಪತಿಯನ್ನು, ಮಂದಾನಿಲೋದ್ಧೂತ ಕಮಲಾಕರಶೋಭಿನಾ—ಅಲ್ಪವಾದ ಗಾಳಿಯಿಂದ ಅಲ್ಲಾಡಿಸಲ್ಪಟ್ಟ ತಾವರೆಯ ಸಮೂಹದಾಯದಂತೆ ಶೋಭಿಸುವ, ನೇತ್ರಸಹಸ್ರೇಣ—ಸಾವಿರ ಕಣ್ಣುಗಳಿಂದ, ನೋದಯಾಮಾಸ—ಪ್ರೇರೇಪಿಸಿದನು॥

ಮಂದಶ್ಚಾಸೌ ಅನಿಲಶ್ಚ. ಮಂದಾನಿಲೇನ ಉದ್ಧೂತಃ, ಮಂದಾನಿಲೋದ್ಧೂತಶ್ಚಾಸೌ ಕಮಲಾಕರಶ್ಚ, ಮಂದಾನಿ ..... ಕರವತ್ ಶೋಭತೇ ಇತಿ, ಮಂದಾ.....ಶೋಭಿ. ತೇನ ॥ ನೇತ್ರಾಣಾಂ ಸಹಸ್ರಂ. ತೇನ॥ ಣುದ—ಪ್ರೇರಣೇ. ಣಿಜಂತಾತ್ ಲಿಟ್. ಪ್ರ. ಪು. ಏ.। ನೋದಯಾಮಾಸ–ನೋದಯಾಮಾಸತುಃ–ನೋದಯಾಮಾಸುಃ—ಇತ್ಯಾದಿ ॥

स द्विनेत्रं हरेश्चक्षुः सहस्रनयनाधिकम् ॥
वाचस्पतिरुवाचेदं प्राञ्जलिर्जलजासनम् ॥ ३० ॥

ಹರೇಃ — ಇಂದ್ರನ, ಸಹಸ್ರನಯನಾಧಿಕಂ — ಸಾವಿರಕಣ್ಣುಗಳಿಗಿಂತಲೂ ಅಧಿಕವಾದ (ಉತ್ತಮವಾದ) ದ್ವಿನೇತ್ರಂ—ಎರಡು ಕಣ್ಣುಳ್ಳ, ಚಕ್ಷುಃ— ಕಣ್ಣಿನಂ

CC-0.Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ತಿರುವ, ಸ ವಾಚಸ್ಪತಿಃ—ಆ ಗುರುವು, ಪ್ರಾಂಜಲಿಃ—ಅಂಜಲಿಬದ್ಧನಾಗಿ, ಜಲ ಜಾಸನಂ—ಬಹ್ಮನನ್ನು ಕುರಿತು, ಇದಂ—ಈ ಮಾತನ್ನು, ಉಪಾಚ—ಹೇಳಿದನು ॥

ದ್ವೇ ನೇತ್ರೇ ಯಸ್ಯ ಸಃ—ದ್ವಿನೇತ್ರಃ ॥ ಸಹಸ್ರನಯನೇಭ್ಯಃ ಅಧಿಕಂ—ಸಹಸ್ರನಯನಾಧಿಕವಃ । ಜಲಜಂ ಆಸನಂ ಯಸ್ಯ ಸಃ — ಜಲಜಾಸನಃ. ತಮ್. ಜಲೇ ಜಾತಂ ಜಲಜಮ್ ॥ ಬ್ರೂಙ್—ವ್ಯಕ್ತಾಯಾಂ ವಾಚಿ, ಲಿಟ್, ಪ್ರ. ಪು. ಏ. ಉವಾಚ—ಊಚತುಃ—ಊಚುಃ ॥ (೧೬ ನೋಡಿ),

ಏವಂ ಯದಾತ್ಥ ಭಗವನ್ನಾಮೃಷ್ಟಂ ನಃ ಪರೈಃ ಪದಮ್ ॥
ಪ್ರತ್ಯೇಕಂ ವಿನಿಯುಕ್ತಾತ್ಮಾ ಕಥಂ ನ ಜ್ಞಾಸ್ಯಸಿ ಪ್ರಭೋ ॥ ೩೧ ॥

ಹೇ ಭಗವನ್—ಪೂಜ್ಯರೇ, (ಷಡ್ಗುಣೈಶ್ವರ್ಯಗಳಿಂದ ಕೂಡಿದವರು) ಯದ್ ಆತ್ಥ—ತಾವು ಏನು ಹೇಳಿದರೋ ತತ್ ಏವಂ—ಅದು ಸತ್ಯವಾಗಿದೆ. ನಃ—ನಮ್ಮಗಳ, ಪದಂ—ಸ್ಥಾನವು (ಅಧಿಕಾರ) ಪರೈಃ—ಶತ್ರುಗಳಿಂದ, ಆಮೃಷ್ಟಂ—ಬಲಾತ್ಕಾರದಿಂದ ವಶಮಾಡಿಕೊಳ್ಳಲ್ಪಟ್ಟಿದೆ. ಹೇ ಪ್ರಭೋ — ಸ್ವಾಮಿಯೇ, ಪ್ರತ್ಯೇಕಂ—ಪ್ರತಿಯೊಂದು ವ್ಯಕ್ತಿಯಲ್ಲಿಯೂ, ವಿನಿಯುಕ್ತಾತ್ಮಾ—ಪ್ರವೇಶಿಸಿದ ಸ್ವರೂಪವುಳ್ಳವನಾಗಿ (ಸರ್ವಾಂತರ್ಯಾಮಿಯಾಗಿ) ಕಥಂ—ಹೇಗೆ, ನಜ್ಞಾಸ್ಯಸಿ—ತಿಳಿಯುವುದಿಲ್ಲ ? ॥ ಎಲ್ಲವನ್ನೂ ತಿಳಿದಿರುವಿ ಎಂದರ್ಥ.

ಭಗಃ ಅಸ್ಯಾಸ್ತೀತಿ ಭಗವಾನ್ ॥ ವಿನಿಯುಕ್ತಃ ಆತ್ಮಾ ಯೇನ ಸಃ—ವಿನಿಯುಕ್ತಾತ್ಮಾ ॥ ಆಹ — ಆಹತುಃ—ಆಹುಃ । ಆತ್ಥ—ಆಹಥುಃ — ಬ್ರೂಥ । ಬ್ರವೀಮಿ—ಬ್ರೂವಃ—ಬ್ರೂಮಃ ॥ ಬ್ರೂಙ್—ವ್ಯಕ್ತಾಯಾಂ ವಾಚಿ, ಲಟ್. ಮ. ಪು. ಏ. ॥ ಜ್ಞಾ—ಅವಬೋಧನೇ—ಲಟ್. ಮ. ಪು: ಏ. ಜ್ಞಾಸ್ಯತಿ—ಇತ್ಯಾದಿ ೩೧.

ಭವಲ್ಲಬ್ಧವರೋದೀರ್ಣಸ್ತಾರಕಾಖ್ಯೋ ಮಹಾಸುರಃ ॥
ಉಪಪ್ಲವಾಯ ಲೋಕಾನಾಂ ಧೂಮಕೇತುರಿವೋತ್ಥಿತಃ ॥ ೩೨ ॥

ಭವಲಬ್ಧವರೋದೀರ್ಣಃ—ತಮ್ಮಿಂದ ಪಡೆದ ವರದಿಂದ ಕೊಬ್ಬಿದ, ತಾರಕಾಖ್ಯಃ—ತಾರಕನೆಂಬ, ಮಹಾಸುರಃ—ಭಯಂಕರ ರಾಕ್ಷಸನು, ಧೂಮಕೇತುರಿವ—ಧೂಮಕೇತುವಿನಂತೆ (ಉತ್ಪಾತವಿಶೇಷ) ಲೋಕಾನಾಂ—ಪ್ರಪಂಚಕ್ಕೆ, ಉಪಪ್ಲವಾಯ—ಅಧಿಕ ಪೀಡೆಯನ್ನುಂಟುಮಾಡಲು, ಉತ್ಥಿತಃ—ಹುಟ್ಟಿರುತ್ತಾನೆ. ॥

ಭವತಃ ಲಬ್ಧಃ, ಬವಲ್ಲಬ್ಧಃ, ಭವಲ್ಲಬ್ಧಶ್ಚಾಸೌ ವರಶ್ಚ. ಭವಲ್ಲಬ್ಧವರೇಣ ಉದೀರ್ಣಃ, ಭವಲ್ಲಬ್ಧವರೋದೀರ್ಣಃ ॥ ತಾರಕಃ ಇತಿ ಆಖ್ಯಾ ಯಸ್ಯ ಸಃ ತಾರಕಾಖ್ಯಃ । ಮಹಾಂಶ್ಚಾಸೌ ಅಸುರಶ್ಚ. ಮಹಾಸುರಃ ॥ ೩೨ ॥

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

पुरे तावन्तमेवास्य तनोति रविरातपम् ॥
दीर्घिकाकमलोन्मेषो यावन्मात्रेण साध्यते ॥ ३३ ॥

ಅಸ್ಯ—ಈ ತಾರಕಾಸುರನ, ಪುರೇ—ಪಟ್ಟಣದಲ್ಲಿ, ರವಿಃ—ಸೂರ್ಯನು, ತಾವಂತಮೇವ—ಅಷ್ಟನ್ನುಮಾತ್ರ, ಆತಪಂ—ಬಿಸಿಲನ್ನು, ತನೋತಿ—ಪ್ರಸರಿಸುತ್ತಾನೆ. ಯಾವನ್ಮಾತ್ರೇಣ—ಎಷ್ಟರಿಂದವುಮಾತ್ರ, 'ಅಲ್ಪೇಚ ಪರಿಮಾಣೇ ಚ ಸಾಮಾತ್ರಂ ಕಾತ್ನ್ಯೇರ್ವಧಾರಣೇ' ಅಮಠ. ದೀರ್ಘಿಕಾ ಕಮಲೋನ್ಮೇಷಃ—ಕ್ರೀಡೆಯ ಕೊಳಗಳಲ್ಲಿ ಕಮಲಗಳ ಅರಳುವಿಕೆಯು, ಸಾಧ್ಯತೇ— ನಿರ್ವಹಿಸಲ್ಪಡುವುದೋ॥ ಕಠೋರಕಿರಣನಾದರೂ ಅವನ ಭಯದಿಂದ ಮಂದಕಿರಣನಾಗುತ್ತಾನೆ ಎಂದು ತಾತ್ಪರ್ಯ॥

ದೀರ್ಘಿಕಾಸು ಕಮಲಾನಿ, ದೀರ್ಘಿಕಾಕಮಲಾನಿ, ದೀ.....ಲಾನಾಂ ಉನ್ಮೇಷಃ॥ ಯಾವತೀ ಮಾತ್ರಾ ಯಸ್ಯ ತತ್ ಯಾವನ್ಮಾತ್ರಮ್, ತೇನ॥ ತನೋತಿ–ತನುತಃ–ತನ್ವಂತಿ। ತನೋಷಿ–ತನುಥಃ–ತನುಥ। ತನೋಮಿ–ತನ್ವಃ, ತನುವಃ–ತನ್ಮಃ, ತನುಮಃ। ತನು–ವಿಸ್ತಾರೇ–ಲಟ್, ಪ್ರ. ವು. ಏ. ॥ ಸಾಧ–ಸಂಸಿದ್ಧೌ–ಕರ್ಮಣಿ–ಲಟ್, ಪ್ರ. ಪು. ಏ. ಸಾಧ್ಯತೇ–ಸಾಧ್ಯೇತೇ–ಸಾಧ್ಯಂತೇ—ಇತ್ಯಾದಿ ॥೩೩॥

सर्वाभिः सर्वदा चन्द्रस्तं कलाभिर्निषेवते ॥
नादत्ते केवलां लेखां हरचूडामणीकृताम् ॥ ३४ ॥

ಚಂದ್ರಃ–ಚಂದ್ರನು, ತಂ–ಆ ತಾರಕನನ್ನು, ಸರ್ವದಾ–ಯಾವಾಗಲೂ, ಸರ್ವಾಭಿಃ–ಎಲ್ಲಾ, ಕಲಾಭಿಃ–ಕಲೆಗಳಿಂದ, ನಿಷೇವತೇ–ಸೇವಿಸುತ್ತಾನೆ. 'ಕಲಾತು ಷೋಡಶೋಭಾಗಃ' ಅಮರಃ. ಕೇವಲಾಂ ಹರಚೂಡಾಮಣೀಕೃತಾಂ–ಶಿವನ ತಲೆಯ ಆಭರಣವಾಗಿ ಮಾಡಲ್ಪಟ್ಟ, ಲೇಖಾಂ–ಒಂದು ಕಲೆಯನ್ನು, ನಾದತ್ತೇ–ತೆಗೆದುಕೊಳ್ಳುವುದಿಲ್ಲ.

ಅಚೂಡಾಮಣಿ–ಚೂಡಾಮಣಿತ್ವೇನ ಸಂಪದ್ಯಮಾನಾ ಕೃತಾ–ಚೂಡಾಮಣೀಕೃತಾ॥ ಹರಸ್ಯ ಚೂಡಾಮಣೀಕೃತಾ–ತಾಮ್ ॥ ನಿ–ಉಪಸರ್ಗ. ಷೇವೃ– ಸೇವಾಯಾಮ್, ಲಟ್–ಪ್ರ. ಪು. ಏ. ಸೇವತೇ–ಇತ್ಯಾದಿ ॥ ಆಙ್–ಉಪಸರ್ಗ- ಡುದಾಞ್–ದಾನೇ ಲಟ್–ಪ್ರ- ಪು. ಏ. ದತ್ತೇ–ದದಾತೇ–ದದತೇ। ದತ್ಸೇ–ದದಾಥೇ–ದದ್ಧ್ವೇ। ದದೇ–ದದ್ವಹೇ–ದದ್ಮಹೇ ॥ ೩೪ ॥

व्यावृत्तगतिरुद्याने कुसुमस्तेयसाध्वसात् ॥
न वाति वायुस्तत्पार्श्वे तालवृन्तानिलाधिकम् ॥ ३५ ॥

ವಾಯುಃ–ಗಾಳಿಯು, ಕುಸುಮಸ್ತೇಯಸಾಧ್ವಸಾತ್–ಹೂವುಗಳ ಚೌರ್ಯದ ಭಯದಿಂದ, ಉದ್ಯಾನೇ—ಹೂತೋಟದಲ್ಲಿ, ವ್ಯಾವೃತ್ತಗತಿಃ—ನಿವೃತ್ತ ಸಂಚಾರ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ವುಳ್ಳವನಾಗಿ, ತತ್ಪಾರ್ಶ್ವೇ—ಆತಾರಕಾಸುರನ ಸಮೀಪದಲ್ಲಿ, ತಾಲವೃಂತಾನಿಲಾಧಿಕಂ—ಬೀಸಣಿಗೆಯ ಗಾಳಿಗಿಂತ ಹೆಚ್ಚಾಗಿ, ನ ವಾತಿ—ಬೀಸುವುದಿಲ್ಲ ॥

ತಾನು ಹೆಚ್ಚಾಗಿ ಬೀಸಿದರೆ ಉದ್ಯಾನಗಳ ಹೂವುಗಳು ಉದುರಿ ಹಾರಿಹೋದರೆ ತಾರಕಾಸುರನಿಗೆ ಕೋಪವುಂಟಾಗುವುದೆಂದು ಭಯದಿಂದ ಬೀಸಣಿಗೆಯ ಗಾಳಿಯಂತೆ ಮೆಲ್ಲನೆ ಬೀಸುತ್ತಾನೆ.

ವ್ಯಾವೃತ್ತಾ ಗತಿಃ ಯಸ್ಯ ಸಃ । ಸ್ತೇನಸ್ಯ ಭಾವಃ ಸ್ತೇಯಂ, ಕುಸುಮಾನಾಂ ಸ್ತೇಯಂ—ಕುಸುಮಸ್ತೇಯಂ. ಕುಸು....ಯಸ್ಯ ಸಾಧ್ವಸಮ್. ತಸ್ಮಾತ್ ॥ ತಸ್ಯ ಪಾರ್ಶ್ವಂ ತತ್ಪಾರ್ಶ್ವಂ, ತಸ್ಮಿನ್ ॥ ತಾಲವೃಂತಸ್ಯ ಅನಿಲಃ, ತಾಲವೃಂತಾನಿಲಃ, ತಾಲವೃಂತಾನಿಲಾತ್ ಅಧಿಕಂ ಯಥಾ ತಥಾ (ಯಸ್ಮಿನ್ ಕರ್ಮಣಿ ತದ್ಯಥಾ ಭವತಿ ತಥಾ) ॥ ವಾ–ಗತಿಗಂಧನಯೋಃ : ಲಟ್. ಪ್ರ. ಪು. ಏ. ॥ ವಾತಿ–ನಾತಃ–ವಾಂತಿ ಇತ್ಯಾದಿ ॥ ೩೫ ॥

पर्यायसेवामुत्सृज्य पुष्पसंभारतत्पराः
तद्यानपालसामान्यमृतवस्तमुपासते ॥ ३६ ॥

ಋತವಃ—ವಸಂತಾದಿ ಆರು ಋತುಗಳು, ಪರ್ಯಾಯಸೇವಾಂ—ಕ್ರಮದಿಂದ ಮಾಡುವ ಸೇವೆಯನ್ನು, ಉತ್ಸೃಜ್ಯ—ಬಿಟ್ಟು, ಪುಷ್ಪಸಂಭಾರತತ್ಪರಾಃ—ಹೂಗಳ ಸಂಗ್ರಹದಲ್ಲಿ ಆಸಕ್ತಗಳಾಗಿ, 'ತತ್ಪರೇ ಪ್ರಸಿತಾಸಕ್ತಾ' ಅಮರ. ಉದ್ಯಾನಪಾಲ ಸಾಮಾನ್ಯಂ—ಉದ್ಯಾನರಕ್ಷಕರಂತೆ, ತಂ—ತಾರಕಾಸುರನನ್ನು, ಉಪಾಸತೇ—ಸೇವಿಸುತ್ತವೆ.

ಪರ್ಯಾಯೇಣ ಸೇವಾ. ತಾಮ್ ॥ ಪುಷ್ಪಾಣಾಂ ಸಂಭಾರಃ, ಪುಷ್ಪಸಂಭಾರೇ ತತ್ಪರಾಃ । ಉದ್ಯಾನಸ್ಯ ಪಾಲಾಃ, ಉದ್ಯಾನಪಾಲೈಃ ಸಾಮಾನ್ಯಂ ಯಥಾ ಭವತಿ ತಥಾ, ಉದ್ಯಾನಪಾಲಸಾಮಾನ್ಯಮ್ ॥ ಉಪ–ಉಪಸರ್ಗ. ಆಸು–ಉಪವೇಶನೇ. ಲಟ್. ಪ್ರ. ಪು. ಬ. ಉಪಾಸ್ತೇ–ಉಪಾಸಾತೇ–ಉಪಾಸತೇ । ಉಪಾಸ್ಸೇ–ಉಪಾಸಾಥೇ–ಉಪಾಧ್ವೇ । ಉಪಾಸೇ–ಉಪಾಸ್ವಹೇ–ಉಪಾಸ್ಮಹೇ ॥ ೩೬ ॥

तस्योपायनयोग्यानि रत्नानि सरितां पतिः ॥
कथमप्यम्भसामन्तरा निष्पत्तेः प्रतीक्षते ॥ ३७ ॥

ಸರಿತಾಂ ಪತಿಃ—ಸಮುದ್ರನು. ತಸ್ಯ—ತಾರಕಾಸುರನಿಗೆ, ಉಪಾಯನಯೋಗ್ಯಾನಿ—ಕಾಣಿಕೆಗೆ ಯೋಗ್ಯಗಳಾದ, "ಪ್ರಾಭೃತಂ ತು ಪ್ರದೇಶನಂ । ಉಪಾಯನಂ' ಅಮರ. ರತ್ನಾನಿ—ರತ್ನಗಳನ್ನು, ಅಂಭಸಾಂ–ನೀರಿನ, ಅಂತಃ—ಮಧ್ಯ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ದಲ್ಲಿ, ಆ ನಿಷ್ಪತ್ತೇಃ—ಸಂಪೂರ್ಣ ಬೆಳೆಯುವವರೆಗೆ ಮಾತ್ರ, ಕಥಮಪಿ—ಮಹಾ ಪ್ರಯತ್ನದಿಂದ, ಪ್ರತೀಕ್ಷತೇ—ನಿರೀಕ್ಷಿಸುತ್ತಾ ಇರುತ್ತಾನೆ.

ಉಪಾಯನಾನಾಂ ಯೋಗ್ಯಾನಿ. ಉಪಾಯನಯೋಗ್ಯಾನಿ. ॥ ಪ್ರತಿ–ಉಪ ಸರ್ಗ. ಈಕ್ಷ–ದರ್ಶನಾಂಕನಯೋಃ ಲಟ್. ಪ್ರ. ಪು. ಏ ॥ ೩೭ ॥

ज्वलन्मणिशिखाश्चैनं वासुकिप्रमुखा निशि ॥
स्थिरप्रदीपतामेत्य भुजंगाः पर्युपासते ॥ ३८ ॥

ಚ—ಮತ್ತು, ಜ್ವಲನ್ಮಣಿಶಿಖಾಃ—ಪ್ರಕಾಶಿಸುವ ಶಿರೋರತ್ನಗಳ ಕಾಂತಿಯುಳ್ಳ, ವಾಸುಕಿ ಪ್ರಮುಖಾಃ—ವಾಸುಕಿಯೇ ಮೊದಲಾದ, ಭುಜಂಗಾಃ—ಸರ್ಪಗಳು, ನಿಶಿ–ರಾತ್ರಿಯಲ್ಲಿ, ಸ್ಥಿರಪ್ರದೀಪತಾಂ—ಆರದಿರುವ ದೀಪದ ಸ್ವರೂಪವನ್ನು, ಏತ್ಯ—ಹೊಂದಿ, ಏನಂ—ಈ ತಾರಕನನ್ನು, ಪರ್ಯುಪಾಸತೇ–ಸೇವಿಸುತ್ತವೆ.

ಮಣೀನಾಂ ಶಿಖಾಃ ಮಣಿಶಿಖಾಃ, ಜ್ವಲಂತ್ಯಃ ಮಣಿಶಿಖಾಃ ಯೇಷಾಂತೇ, ಜ್ವಲನ್ಮಣಿಶಿಖಾಃ, ॥ ವಾಸುಕಿಃ ಪ್ರಮುಖಃ ಯೇಷಾಂತೇ ॥ ಸ್ಥಿರಶ್ಚಾಸೌ ಪ್ರದೀಪಶ್ಚ ಸ್ಥಿರಪ್ರದೀಪಃ, ತಸ್ಯ ಭಾವಃ ಸ್ಥಿರಪ್ರದೀಪತಾ. ತಾಮ್ ॥ ಹರಿ+ಉಪ. ಉಪಸರ್ಗಗಳು. 36ನೇ ಶ್ಲೋ. ನೋಡಿ ॥ ೩೮ ॥

तत्कृतानुग्रहापेक्षी तं मुहुर्दूतहारितैः ॥
अनुकूलयतीन्द्रोऽपि कल्पद्रुमविभूषणैः ॥ ३९ ॥

ಇಂದ್ರೋಪಿ–ಇಂದ್ರನೂಕೂಡಾ, ತತ್ಕೃತಾನುಗ್ರಹಾಪೇಕ್ಷೀ–ಆ ತಾರಕಾಸುರನಿಂದ ಮಾಡಲ್ಪಟ್ಟ ಪ್ರಸಾದವನ್ನು ಅಪೇಕ್ಷಿಸುವವನಾಗಿ, ಮುಹುಃ—ಪುನಃ ಪುನಃ ದೂತಹಾರಿತೈಃ–ದೂತರಿಂದ ಕಳುಹಿಸಲ್ಪಟ್ಟ, ಕಲ್ಪದ್ರುಮವಿಭೂಷಣೈಃ—ಕಲ್ಪವೃಕ್ಷಗಳ ಉತ್ತಮವಾದ ಪುಷ್ಪಾಭರಣಗಳಿಂದ, ತಂ—ತಾರಕಾಸುರನನ್ನು, ಅನುಕೂಲಯತಿ—ಉಪಚರಿಸುತ್ತಾನೆ.

ತೇನ ಕೃತಃ ತತ್ಕೃತಃ, ತತ್ಕೃತಶ್ಚಾಸೌ ಅನುಗ್ರಹಶ್ಚ. ತತ್ಕೃತಾನುಗ್ರಹಃ, ತತ್ಕೃತಾನುಗ್ರಹಂ ಅಪೇಕ್ಷತ ಇತಿ ತ....ಕ್ಷೀ ॥ ದೂತೈಃ ಹಾರಿತಾನಿ. ತೈಃ ॥ ಕಲ್ಪದ್ರುಮಾಣಾಂ ವಿಭೂಷಣಾನಿ. ಕಲ್ಪದ್ರುಮವಿಭೂಷಣಾನಿ. ತೈಃ ॥ ಅನು–ಉಪಸರ್ಗ- ಕೂಲ ಆವರಣೇ. ಣಿಜಂತಾತ್ ಲಟ್. ಪ್ರ. ಪು. ಏ ॥ ೩೯ ॥

इत्थमाराध्यमानोऽपि क्लिश्नाति भुवनत्रयम् ॥
शाम्येत्प्रत्यपकारेण नोपकारेण दुर्जनः ॥ ४० ॥

ಇತ್ಥಂ—ಈರೀತಿಯಾಗಿ; ಆರ್ಯಾಧ್ಯಮಾನಃ ಅಪಿ—ಸೂರ್ಯಾದಿಗಳಿಂದ ಸೇವಿಸಲ್ಪಡುತ್ತಿದ್ದರೂ, ಭುವನತ್ರಯಂ—ಮೂರು ಲೋಕಗಳನ್ನು, ಕ್ಲೇಶ್ನಾತಿ—ಪೀಡಿ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಸುತ್ತಾನೆ. ದುರ್ಜನಃ—ದುಷ್ಟನು, ಪ್ರತ್ಯಪಕಾರೇಣ—ಪ್ರತೀಕಾರ ಮಾಡುವುದರಿಂದಲೇ, ಶಾಮ್ಯೇತ್—ಶಾಂತನಾಗುವನು. ಉಪಕಾರೇಣ—ಉಪಕಾರ ಮಾಡುವುದರಿಂದ ನ—ಶಾಂತನಾಗುವುದಿಲ್ಲ. ॥

ಭುವನಾನಾಂ ತ್ರಯಮ್ ॥ ದುಷ್ಟಃ ಜನಃ ದುರ್ಜನಃ॥ ಕ್ಲಿಶೂ–ವಿಬಾಧನೇ–ಲಟ್. ಪ್ರ. ಪು. ಏ. । ಕ್ಲಿಶ್ನಾತಿ–ಕ್ಲಿಶ್ನೀತಃ–ಕ್ಲಿಶ್ನಂತಿ । ಕ್ಲಿಶ್ನಾಸಿ–ಕ್ಲಿಶ್ನೀಥಃ–ಕ್ಲಿಶ್ನೀಥ । ಕ್ಲಿಶ್ನಾಮಿ–ಕ್ಲಿಶ್ನೀವಃ–ಕ್ಲಿಶ್ನೀಮಃ ॥ ಶಮು–ಉಪಶಮೇ. ವಿ. ಲಿಙ್. ಪ್ರ. ಪು. ಏ. । ಶಾಮ್ಯೇತ್ ಶ್ಯಾಮ್ಯೇತಾಂ–ಶಾಮ್ಯೇಯುಃ । ಶಾಮ್ಯೇಃ–ಶಾಮ್ಯೇತಮ್–ಶಾಮ್ಯೇತ । ಶಾಮ್ಯೇಯಂ–ಶಾಮ್ಯೇವ–ಶಾಮ್ಯೇಮ ॥

तेनामरवधूहस्तैः सदयालूनपल्लवाः ॥
अभिज्ञाश्छेदपातानां क्रियन्ते नन्दनद्रुमाः ॥ ४१ ॥

ತೇನ—ತಾರಕಾಸುರನಿಂದ, ಅಮರವಧೂಹಸ್ತೈಃ—ದೇವತಾಸ್ತ್ರೀಯರ ಮೃದುವಾದ ಕೈಗಳಿಂದ, ಸದಯಾಲೂನಪಲ್ಲವಾಃ—ಕಾರಣ್ಯದಿಂದ ಕೀಳಲ್ಪಡದಿರುವ ಚಿಗುರೆಲೆಗಳುಳ್ಳ, ನಂದನದ್ರುಮಾಃ—ನಂದನವನದ ಮರಗಳು, ಛೇದಪಾತಾನಾಂ—ಕತ್ತರಿಸಲ್ಪಡುವುದು, ಬೀಳುವುದು ಇವುಗಳ, ಅಭಿಜ್ಞಾಃ—ಅನುಭವವುಳ್ಳವುಗಳು, ಕ್ರಿಯಂತೇ—ಮಾಡಲ್ಪಡುತ್ತವೆ ॥

ಅಮರಾಣಾಂ ವಧ್ವಃ, ಅಮರವಧ್ವಃ, ಅಮರವಧೂನಾಂ ಹಸ್ತಾಃ, ತೈಃ ॥ ದಯಯಾ ಸಹಿತಂ ಯಥಾ ಭವತಿ ತಥಾ, ಸದಯಂ ॥ ನಲೂನಾಃ ಅಲೂನಾಃ ॥ ಸದಯಂ ಅಲೂನಾಃ ॥ ಸದಯಾಲುನಾಃ ಪಲ್ಲವಾಃ ಯೇಷಾಂತೇ ॥ ಅಭಿಜಾನಂತಿ ಇತಿ ಅಭಿಜ್ಞಾಃ । ಛೇದಾಶ್ಚ ಪಾತಾಶ್ಚ ಛೇದಪಾತಾಃ, ತೇಷಾಮ್ । ನಂದನಸ್ಯ ದ್ರುಮಾಃ ॥ ಡುಕೃಞ್–ಕರಣೇ ಕರ್ಮಣಿ ಲಟ್. ಪ್ರ. ಪು. ಬ. ॥ ೪೧ ॥

वीज्यते स हि संसुप्तः श्वाससाधारणानिलैः ॥
चामरैः सुरबन्दीनां बाष्पसीकरवर्षिभिः ॥ ४२ ॥

ಹಿ—ಯಾವ ಕಾರಣದಿಂದ, ಸಃ—ಆ ತಾರಕಾಸುರನು, ಸಂಸುಪ್ತಃ ಸನ್—ಮಲಗಿದವನಾಗಿ, ಶ್ವಾಸಸಾಧಾರಣಾನಿಲೈಃ—ನಿಶ್ವಾಸಕ್ಕೆ (ಉಸಿರು) ಸಮಾನವಾದ ಗಾಳಿಯುಳ್ಳ, ಬಾಷ್ಪಶೀಕರವರ್ಷಿಭಿಃ—ಕಣ್ಣೀರಿನ ತುಂತುರು ಹನಿಯನ್ನು ಸುರಿಸುವ, ಸುರಬಂದೀನಾಂ—ಬಂದೀಕೃತರಾದ ದೇವತಾಸ್ತ್ರೀಯರ, ಚಾಮರೈಃ—ಚಾಮರಗಳಿಂದ, ವೀಜ್ಯತೇ—ಬೀಸಲ್ಪಡುತ್ತಾನೆ.

ಶ್ವಾಸಾನಾಂ ಸಾಧಾರಣಃ, ಶ್ವಾಸಸಾಧಾರಣಃ, ಶ್ವಾಸಸಾಧಾರಣಃ ಅನಿಲಃ ಯೇಷಾಂತೇ, ತೈಃ ॥ ಸುರಾಣಾಂ ಬಂದ್ಯಃ ಸುರಬಂದ್ಯಃ ತಾಸಾಮ್॥ ಬಾಷ್ಪಾಣಾಂ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಸೀಕರಾಃ ಬಾಷ್ಪಸೀಕರಾಃ, ಬಾಷ್ಪಸೀಕರಾನ್ ವರ್ಷಂತಿ ಇತಿ ಬಾಷ್ಪಸೀಕರ ವರ್ಷಿಣಃ–ತೈಃ ॥ ವಾ–ಗತಿಗಂಧನಯೋಃ ಣಿಜಂತಾತ್ ಕರ್ಮಣಿ ಲಟ್. ಪ್ರ. ಪು. ಏ. ॥ ೪೨ ॥

उत्पाट्य मेरुशृङ्गाणि क्षुण्णानि हरितां खुरैः ॥
आक्रीडपर्वतास्तेन कल्पिताः स्वेषु वेश्मसु ॥ ೪೩ ॥

ತೇನ—ತಾರಕಾಸುರನಿಂದ, ಹರಿತಾಂ—ಸೂರ್ಯನ, ಕುದುರೆಗಳ, ಖುರೈಃ—ಗೊರಸುಗಳಿಂದ, ಕ್ಷುಣ್ಣಾನಿ—ಪುಡಿಯಾದ, ಮೇರುಶೃಂಗಾಣಿ—ಮೇರುಪರ್ವತದ ಶಿಖರಗಳನ್ನು, ಉತ್ಪಾಟ್ಯ—ಕಿತ್ತು, ಸ್ವೇಷು ವೇಶ್ಮಸು—ತನ್ನ ಮನೆಗಳಲ್ಲಿ, ಆಕ್ರೀಡಪರ್ವತಾಃ—ಕ್ರೀಡೆಗೋಸ್ಕರ ನಿರ್ಮಿತವಾದ ಪರ್ವತಗಳಾಗಿ, ಕಲ್ಪಿತಾಃ—ಮಾಡಲ್ಪಟ್ಟಿವೆ.

ಮೇರೋಃ ಶೃಂಗಾಣಿ ಮೇರುಶೃಂಗಾಣಿ ॥ ಆಕ್ರೀಡಂತೇ ಇತಿ ಆಕ್ರೀಡಾಃ ಆಕ್ರೀಡಾಶ್ಚತೇ ಪರ್ವತಾಶ್ಚ. ಆಕ್ರೀಡಪರ್ವತಾಃ ॥ ೪೩ ॥

मन्दाकिन्याः पयः शेषं दिग्वारणमदाविलम् ॥
हेमाम्भोरुहसस्यानां तद्वाप्यो धाम सांप्रतम् ॥ ೪೪ ॥

ಸಾಂಪ್ರತಂ—ಈಗ, ಮಂದಾಕಿನ್ಯಾಃ—ಗಂಗಾನದಿಯ, ದಿಗ್ವಾರಣಮದಾವಿಲಂ—ದಿಗ್ಗಜಗಳ ಮದದಿಂದ ಕಲುಷಿತವಾದ, ಪಯಃ—ನೀರುಮಾತ್ರ, ಶೇಷಂ—ಉಳಿದಿರುತ್ತದೆ. ಹೇಮಾಂಭೋರುಹಸಸ್ಯಾನಾಂ—ಚಿನ್ನದ ತಾವರೆಗ ಳೆಂಬ ಸಸ್ಯಗಳಿಗೆ, ತದ್ವಾಪ್ಯಃ—ಅವನ ಕೊಳಗಳೇ, ಧಾಮ—ಸ್ಥಾನವಾಗಿದೆ ॥ ಸುರಗಂಗೆಯಿಂದ ಕಮಲಗಳನ್ನು ಕಿತ್ತು ತನ್ನ ಸರೋವರಗಳಲ್ಲಿ ನಟ್ಟಿರುತ್ತಾನೆ ಎಂದರ್ಥ ॥

ಮುಂದಂ ಆಕತಿ ಇತಿ ಮಂದಾಕಿನೀ ತಸ್ಯಾಃ ॥ ದಿಶಾಂವಾರಣಾಃ, ದಿಗ್ವಾರಣಾಃ ದಿಗ್ವಾರಣಾನಾಂ ಮದಃ ತೇನ ಆವಿಲಂ, ದಿಗ್ವಾ–ಲಮ್ ॥ ಹೇಮ್ನಃ ಅಂಭೋರುಹಾಣಿ ಹೇಮಾಂಭೋರುಹಾಣಿ ಹೇ....ರಾಣ್ಯೇವ ಸಸ್ಯಾನಿ ತೇಷಾಮ್ ॥ ತಸ್ಯ ವಾಪ್ಯಃ ತದ್ವಾಪ್ಯಃ ॥ ೪೪ ॥

भुवनालोकनप्रीतिः स्वर्गिभिर्नानुभूयते ॥
खिलीभूते विमानानां तदापातभयात्पथि ॥ ೪೫ ॥

ತದಾಪಾತಭಯಾತ್—ಆ ತಾರಕಾಸುರನ ಮೇಲೆ ಬೀಳುವುದರ ಭಯದಿಂದ, ವಿಮಾನಾನಾಂ—ವಿಮಾನಗಳ, ಪಥಿ—ಮಾರ್ಗವು, ಖಿಲೀಭೂತೇ—ಖಾಲಿಯಾಗು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ತ್ತಿರಲು, ಸ್ವರ್ಗಿಭಿಃ—ದೇವತೆಗಳಿಂದ, ಭುವನಾಲೋಕನಪ್ರೀತಿಃ—ಅನೇಕ ಲೋಕಗಳನ್ನು ನೋಡುವ ಅಭಿರುಚಿಯು, ನಾನುಭೂಯತೇ—ಅನುಭವಿಸಲ್ಪಡುವುದಿಲ್ಲ.

ಭುವನಾನಾಂ ಆಲೋಕನಂ. ಭು....ನಂ. ಭುವನಾಲೋಕನೇ ಪ್ರೀತಿಃ ॥ ಸ್ವರ್ಗಃ ಏಷಾಮಸ್ತೀತಿ ಸ್ವರ್ಗಿಣಃ ತೈಃ ॥ ತಸ್ಯ ಆಪಾತಃ ತದಾಪಾತಃ, ತದಾಪಾತಾತ್ ಭಯಂ ತಸ್ಮಾತ್ ॥ ಅನು—ಉಪಸರ್ಗ ಭೂ–ಸತ್ತಾಯಾಂ ಕರ್ಮಣಿ. ಲಟ್. ಪ್ರ. ಪು. ಏ. ॥ ೪೫ ॥

ಯಜ್ವಭಿಃ ಸಂಭೃತಂ ಹವ್ಯಂ ವಿತತೇಷ್ವಧ್ವರೇಷು ಸಃ ॥
ಜಾತವೇದೋಮುಖಾನ್ಮಾಯೀ ಮಿಷತಾಮಾಚ್ಛಿನತ್ತಿ ನಃ ॥ ೪೬ ॥

ಯಜ್ವಭಿಃ—ವಿಧಿವತ್ತಾಗಿ ಯಾಗಮಾಡುವವರಿಂದ, 'ಯಜ್ವಾತು ವಿಧಿನೇಷ್ಟವಾನ್' ಅಮರ. ವಿತತೇಷು—ವಿಸ್ತೃತವಾದ, ಅಧ್ವರೇಷು—ಯಾಗಗಳಲ್ಲಿ, ಸಂಭೃತಂ—ಕೊಡಲ್ಪಟ್ಟ, ಹವ್ಯಂ—ಹವಿಸ್ಸನ್ನು, ಮಾಯೀ—ಮಾಯಾವಿಯಾದ, ಸಃ—ಆ ತಾರಕಾಸುರನು, ನಃ—ನಾವು, ಮಿಷತಾಂ—ನೋಡುತ್ತಿರುವಾಗಲೇ, 'ಷಷ್ಠ್ಯೀ ಚಾನಾದರೇ' ಸೂತ್ರದಿಂದ ಅನಾದರ ತೋರುವಾಗ ಷಷ್ಠ್ಯೀ ಬಂದಿದೆ. ಜಾತವೇ ದೋಮುಖಾತ್—ಅಗ್ನಿಮುಖದಿಂದ, ಆಚ್ಛಿನತ್ತಿ—ಅಪಹರಿಸುತ್ತಾನೆ.

ಜಾತವೇದಾಃ ಏವ ಮುಖಂ, ಜಾತವೇದೋಮುಖಮ್ ತಸ್ಮಾತ್ ॥ ಮಾಯಾ ಅಸ್ಯಾಸ್ತೀತಿಮಾಯೀ । ಆಚ್–ಉಪಸರ್ಗ। ಛಿನತ್ತಿ–ಛಿಂತ್ತಃ–ಛಿನ್ದಂತಿ। ಛಿನತ್ಸಿ–ಛಿನ್ಥಃ–ಛಿನ್ಥ । ಛಿನದ್ಮಿ–ಛಿನ್ದ್ವಃ–ಛಿನ್ದ್ಮಃ ॥ ಛಿದಿರ್–ದ್ವೈಧೀಕರಣೇ. ಲಟ್. ಪ್ರ. ಪು. ಏ ॥

ತಚ್ಚೈರುಚ್ಚೈಃಶ್ರವಾಸ್ತೇನ ಹಯರತ್ನಮಹಾರಿ ಚ ॥
ದೇಹಬದ್ಧಮಿವೇನ್ದ್ರಸ್ಯ ಚಿರಕಾಲಾರ್ಜಿತಂ ಯಶಃ ॥ ೪೭ ॥

ಚ—ಮತ್ತು, ತೇನ—ಆ ತಾರಕಾಸುರನಿಂದ, ಉಚ್ಚೈಃ—ಉನ್ನತವಾದ, ಉಚ್ಚೈಃಶ್ರವಾಃ—ಉಚ್ಚೈಃಶ್ರವಸ್ಸೆಂಬ, ಹಯರತ್ನಂ—ಶ್ರೇಷ್ಠವಾದ ಕುದುರೆಯು, ದೇಹಬದ್ಧಂ—ದೇಹವನ್ನು ಧರಿಸಿರುವ, ಚಿರಕಾಲಾರ್ಜಿತಂ—ಬಹುಕಾಲದಿಂದ ಗಳಿಸಿದ, ಯಶಃ ಇವಃ—ಯಶಸ್ಸು ಎಂಬಂತೆ ಅಹಾರಿ—ಅಪಹರಿಸಲ್ಪಟ್ಟಿತು ॥

ಹಯಃ ರತ್ನಮಿವ ಹಯರತ್ನಮ್ ॥ ಬದ್ಧಂದೇಹಂ ಯೇನ ತತ್ ದೇಹಬದ್ಧಮ್ । ಚಿರಕಾಲೇನ ಆರ್ಜಿತಂ, ಚಿರಕಾಲಾರ್ಜಿತಮ್ ॥ ಹೃಞ್–ಹರಣೇ. ಕರ್ಮಣಿ ಲುಙ್. ಪ್ರ. ಪು. ಏ. । ಅಹಾರಿ–ಅಹಾರಿಷಾತಾಮ್–ಅಹಾರಿಷತ । ಅಹಾರಿಷ್ಟಾಃ—ಅಹಾರಿಷಾಥಾಂ–ಅಹಾರಿಢ್ವಮ್ । ಅಹಾರಿಷಿ–ಅಹಾರಿಷ್ವಹಿ–ಅಹಾರಿಷ್ಮಹಿ ॥

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

तस्मिन्नुपायाः सर्वे नः क्रूरे प्रतिहतक्रियाः ॥
वीर्यवन्त्यौषधानीव विकारे सांनिपातिके ॥ ४८ ॥

ಕ್ರೂರೇ—ಘಾತುಕನಾದ, 'नृशंसो घातुकः क्रूरः' ಅಮರ. ತಸ್ಮಿನ್—ಆತಾರಕಾಸುರನಲ್ಲಿ, ನಃ—ನಮ್ಮ, ಸರ್ವೇ—ಎಲ್ಲಾ, ಉಪಾಯಾಃ—ಉಪಾಯಗಳು, ಸಾಂನಿಪಾತಿಕೇ—ವಾತ, ಪಿತ್ತ, ಕಫರೂಪದೋಷತ್ರಯದಿಂದ ಉಂಟಾದ, ವಿಕಾರೇ—ಸಂನಿಪಾತಜ್ವರದಲ್ಲಿ, ವೀರ್ಯವಂತಿ—ಸಾರವತ್ತಾದ, ಔಷಧಾನೀವ—ಔಷಧಗಳಂತೆ, ಪ್ರತಿಹತಕ್ರಿಯಾಃ—ವಿಫಲವಾದ ಪ್ರಯೋಗವುಳ್ಳವುಗಳಾಗಿವೆ.

ಪ್ರತಿಹತಾ ಕ್ರಿಯಾ ಯೇಷಾಂತೇ ॥ ವೀರ್ಯಂ ಏಷಾಮಸ್ತೀತಿ ವೀರ್ಯವಂತಿ ॥ ೪೮ ॥

जयाशा यत्र चास्माकं प्रतिघातोत्थितार्चिषा ॥
हरिचक्रेण तेनास्य कण्ठे निष्कमिवार्पिताम् ॥ ४९ ॥

ಚ—ಮತ್ತು, ಯತ್ರ—ಯಾವ ವಿಷ್ಣುವಿನ ಚಕ್ರದಲ್ಲಿ, ಅಸ್ಮಾಕಂ—ನಮಗೆ, ಜಯಾಶಾ—ವಿಜಯದ ಆಸೆಯು, (ಇದ್ದಿತ್ತೋ) ಪ್ರತಿಘಾತೋತ್ಥಿತಾರ್ಚಿಷಾ—ಹೊಡೆತದಿಂದ ಉಂಟಾದ ತೇಜಸ್ಸುಳ್ಳ, ತೇನ ಹರಿಚಕ್ರೇಣ—ಆ ವಿಷ್ಣುವಿನ ಸುದರ್ಶನ ಚಕ್ರದಿಂದ, ಅಸ್ಯ—ತಾರಕಾಸುರನ, ಕಂಠೇ—ಕುತ್ತಿಗೆಯಲ್ಲಿ, ನಿಷ್ಕಂ—ಕಂಠಾಲಂಕಾರವು, ಅರ್ಪಿತಮಿವ—ತಾನಾಗಿ ಸಮರ್ಪಿಸಲ್ಪಟ್ಟಿದೆಯೋ ಎಂಬಂತಿದೆ.

ಜಯಸ್ಯ ಆಶಾ ॥ ಪ್ರತಿಘಾತೇನ ಉತ್ಥಿತಂ । ಪ್ರತಿಘಾತೋತ್ಥಿತಂ ಅರ್ಚಿಃ ಯಸ್ಯತತ್ ಪ್ರತಿ....ರ್ಚಿಃ, ತೇನ ॥ ಹರೇಃ ಚಕ್ರಂ ಹರಿಚಕ್ರಂ ತೇನ ॥ ೪೯ ॥

तदीयास्तोयदेष्वद्य पुष्करावर्तकादिषु ॥
अभ्यस्यन्ति तटाघातं निर्जितैरावता गजाः ॥ ५० ॥

ಅದ್ಯ—ಈಗ, ನಿರ್ಜಿತೈರಾವತಾಃ—ಗೆಲ್ಲಲ್ಪಟ್ಟ ಐರಾವತವೆಂಬ ಆನೆಯುಳ್ಳ, ತದೀಯಾಃ—ತಾರಕಾಸುರನ ಸಂಬಂಧವಾದ, ಗಜಾಃ—ಆನೆಗಳು, ಪುಷ್ಕರಾವರ್ತಕಾದಿಷು—ಪುಷ್ಕರ, ಆವರ್ತಕವೆಂಬ ಹೆಸರುಳ್ಳ, ತೋಯದೇಷು—ಮೇಘಗಳಲ್ಲಿ, ತಟಾಘಾತಂ—ವಪ್ರಕ್ರೀಡೆಯನ್ನು (ದಂತದಿಂದ ಕರೆಯುವುದು) ಅಭ್ಯಸ್ಯಂತಿ—ಅಭ್ಯಾಸಮಾಡುತ್ತವೆ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ತಸ್ಯ ಇಮೇ-ತದೀಯಾಃ, ॥ ತೋಯಂ ದದತಿ ಇತಿ ತೋಯದಾಃ ತೇಷು ॥ ಪುಷ್ಕರಃ ಆವರ್ತಕಃ ಆದಿಃ ಯೇಷಾಂತೇ, ಪುಷ್ಕರಾವರ್ತಕಾದಯಃ ತೇಷು ॥ ತಟಸ್ಯ ಆಘಾತಃ ತಟಾಘಾತಃ ತಮ್ ॥ ನಿರ್ಜಿತಾಃ ಐರಾವತಾಃ ಯೈಸ್ತೇ ॥ ಆಭಿ ಉಪಸರ್ಗ ಅಸು ಕ್ಷೇಪಣೇ-ಲಟ್. ಪ್ರ. ಪು. ಬ. ಅಸ್ಯತಿ-ಅಸ್ಯತಃ-ಅಸ್ಯಂತಿ-ಇತ್ಯಾದಿ ॥

तदिच्छामो विभो स्रष्टुं सेनान्यं तस्य शान्तये ॥
कर्मबन्धच्छिदं धर्मं भवस्येव मुमुक्षवः ॥ ೫೧ ॥

ತತ್—ಆ ಕಾರಣದಿಂದ, ಹೇ ವಿಭೋ—ಸ್ವಾಮಿಯೇ, ಮುಮುಕ್ಷವಃ—ಮೋಕ್ಷವನ್ನು ಬಯಸುವ ವಿರಕ್ತರು, ಭವಸ್ಯ—ಸಂಸಾರದ, ಶಾಂತಯೇ—ನಿವೃತ್ತಿಗೋಸ್ಕರ, ಕರ್ಮಬಂಧಚ್ಛಿದಂ—ಕರ್ಮವೆಂಬ ಕಟ್ಟನ್ನು ತುಂಡುಮಾಡುವ, ಧರ್ಮಂ ಇವ—ಆತ್ಮಜ್ಞಾನೋಪಾಯವನ್ನು ಎಂಬಂತೆ, ತಸ್ಯ—ಆ ತಾರಕಾಸುರನ, ಶಾಂತಯೇ—ನಾಶಕ್ಕೋಸ್ಕರ, ಸೇನಾನ್ಯಂ—ಸೇನಾಪತಿಯನ್ನು, ಸ್ರಷ್ಟುಂ—ಸೃಷ್ಟಿಮಾಡಲು, ಇಚ್ಛಾಮಃ—ಬಯಸುತ್ತೇವೆ.

ಸೇನಾಂ ನಯತಿ ಇತಿ ಸೇನಾನೀಃ ತಮ್ ॥ ಕರ್ಮಏವ ಬಂಧಃ, ಕರ್ಮಬಂಧಃ, ಕರ್ಮಬಂಧಂ ಛಿನತ್ತಿ ಇತಿ ಕರ್ಮಬಂಧಚ್ಛಿತ್ ತಮ್ ॥ ಮೋಕ್ತುಂ ಇಚ್ಛವಃ ಮುಮುಕ್ಷವಃ ॥ ಇಷು ಇಚ್ಛಾಯಾಂ ಲಟ್. ಉ. ಪು. ಬ. ಇಚ್ಛಂತಿ-ಇತ್ಯಾದಿ ॥

गोप्तारं सुरसैन्यानां यं पुरस्कृत्य गोत्रभित् ॥
प्रत्यानेष्यति शत्रुभ्यो बन्दीमिव जयश्रियम् ॥ ೫೨ ॥

ಸುರಸೈನ್ಯಾನಾಂ—ದೇವತಾಸೇನೆಗಳನ್ನು, ಗೋಪ್ತಾರಂ—ರಕ್ಷಿಸುವ, ಯಂ—ಯಾವ ಸೇನಾಪತಿಯನ್ನು, ಪುರಸ್ಕೃತ್ಯ—ಮುಂದೆ ಮಾಡಿಕೊಂಡು, ಗೋತ್ರಭಿತ್—ಇಂದ್ರನು, ಜಯಶ್ರಿಯಂ—ಜಯಲಕ್ಷ್ಮಿಯನ್ನು, ಬಂದೀಮಿವ—ಸೆರೆಹಿಡಿಯಲ್ಪಟ್ಟವಳನ್ನೋ ಎಂಬಂತೆ, ಶತ್ರುಭ್ಯಃ—ಶತ್ರುಗಳ ದೆಸೆಯಿಂದ, ಪ್ರತ್ಯಾನೇಷ್ಯತಿ—ವಾಪಸು ತರುತ್ತಾನೋ ॥ ಸುರಾಣಾಂ ಸೈನ್ಯಾನಿ ತೇಷಾಮ್॥ ಗಾಂ ತ್ರಾಯಂತೆ ಇತಿ ಗೋತ್ತ್ರಾಃ, ಗೋತ್ತ್ರಾನ್ ಭಿನತ್ತಿ ಇತಿ ಗೋತ್ರಭಿತ್ । ಜಯಸ್ಯ ಶ್ರೀಃ ಜಯಶ್ರೀಃ, ತಾಮ್ । ಪ್ರತಿ+ಆಙ್-ಉಪಸರ್ಗಗಳು. ಣೀಞ್-ಪ್ರಾಪಣೇ-ಲೃಟ್. ಪ್ರ. ಪು. ಏ. ಏಷ್ಯತಿ-ಏಷ್ಯತಃ-ಇತ್ಯಾದಿ ॥

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

वचस्यवसिते तस्मिन्ससर्ज गिरमात्मभूः ॥
गर्जितानन्तरं वृष्टिं सौभाग्येन जिगाय सा ॥ ५३ ॥

ತಸ್ಮಿನ್—ಆ ಬೃಹಸ್ಪತಿಯ, ವಚಸಿ—ಮಾತು, ಅವಸಿತೇ ಸತಿ—ಮುಗಿಯುತ್ತಿರಲು, ಆತ್ಮಭೂಃ—ಬ್ರಹ್ಮನು, ಗಿರಂ—ಮಾತನ್ನು, ಸಸರ್ಜ—ಹೇಳಿದನು. ಸಾ—ಆಮಾತು ಸೌಭಾಗ್ಯೇನ—ಸೌಂದರ್ಯದಿಂದ, ಗರ್ಜಿತಾನಂತರಾಂ—ಮೇಘ ಘರ್ಜನೆಯಾದ ಮೇಲಿನ, ವೃಷ್ಟಿಂ—ಮಳೆಯನ್ನು, ಜಿಗಾಯ—ಗೆದ್ದಿತು. ಮೇಘ ಶಬ್ದವಾದೊಡನೆ ಮಳೆಬರುವಂತೆ ಬೃಹಸ್ಪತಿಯು ವಿಜ್ಞಾಪಿಸಿದೊಡನೆಯೇ ಸಮಾಧಾನದ ಮಾತನ್ನು ಹೇಳಿದನು.

ಆತ್ಮನಿ ಭವತೀತಿ ಆತ್ಮಭೂಃ ॥ ಗರ್ಜಿತಾತ್ ಅನಂತರಾ ಗರ್ಜಿತಾನಂತರಾ ತಾಮ್ । ಸುಭಗಸ್ಯ ಭಾವಃ ಸೌಭಾಗ್ಯಮ್ ॥

ಸೃಜ—ವಿಸರ್ಗೇ. ಲಿಟ್. ಪ್ರ. ವು. ಏ. । ಸಸರ್ಜ–ಸಸೃಜತುಃ–ಸಸೃಜುಃ । ಸಸರ್ಜಿಥ–ಸಸೃಜಥುಃ–ಸಸೃಜ । ಸಸರ್ಜ–ಸಸೃಜಿವ–ಸಸೃಜಿಮ ॥ ಜಿ–ಜಯೇ ಲಿಟ್ । ಜಿಗಾಯ ಜಿಗ್ಯತುಃ ಜಿಗ್ಯುಃ । ಜಿಗಯಿಥ–ಜಿಗೇಥ–ಜಿಗ್ಯಥುಃ–ಜಿಗ್ಯ । ಜಿಗಾಯ, ಜಿಗಯ–ಜಿಗ್ಯಿವ–ಜಿಗ್ಯಿಮ ॥

संपत्स्यते वः कामोऽयं कालः कश्चित्प्रतीक्ष्यताम् ॥
न त्वस्य सिद्धौ यास्यामि सर्वव्यापारमात्मना ॥ ५४ ॥

ಅಯಂ—ಈ, ವಃ—ನಿಮ್ಮಗಳ, ಕಾಮಃ—ಇಷ್ಟಾರ್ಥವು, ಸಂಪತ್ಸ್ಯತೇ—ಸಿದ್ಧಿಸುವುದು. ಕಶ್ಚಿತ್ ಕಾಲಃ—ಸ್ವಲ್ಪಕಾಲವು, ಪ್ರತೀಕ್ಷ್ಯತಾಂ—ನಿರೀಕ್ಷಿಸಲ್ಪಡಲಿ. ತು—ಆದರೆ, ಅಸ್ಯ—ಈ ಸೇನಾಪತಿಯ, ಸಿದ್ಧೌ—ಸೃಜಿಸುವ ವಿಷಯದಲ್ಲಿ, ಆತ್ಮನಾ—ತಾನಾಗಿಯೇ. ಸರ್ವವ್ಯಾಪಾರಂ—ಏಲ್ಲ ಕಾರ್ಯಗಳನ್ನು, ನ ಯಾಸ್ಯಾಮಿ—ಹೊಂದಲಾರೆನು. ತಾನಾಗಿಯೇ ಮುಂದೊತ್ತಿ ಈ ಕಾರ್ಯ ಮಾಡಲಾರೆನು ಎಂದರ್ಥ.

ಸರ್ವಶ್ಚಾಸೌ ವ್ಯಾಪಾರಶ್ಚ ತಮ್ ॥ ಸಮ್. ಉಪಸರ್ಗ. ಪದ—ಗತೌ. ಲೃಟ್. । ಪತ್ಸ್ಯತೇ–ಪತ್ಸ್ಯೇತೇ–ಪತ್ಸ್ಯಂತೇ–ಇತ್ಯಾದಿ ॥ ಯಾ—ಪ್ರಾಪಣೇ–ಲೃಟ್. ಉ. ಪು. ಏ. । ಯಾಸ್ಯತಿ–ಇತ್ಯಾತಿ ॥ ೫೪ ॥

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

इतः स दैत्यः प्राप्तश्रीर्नेत एवार्हति क्षयम् ।।
विषवृक्षोऽपि संवर्ध्य स्वयं छेत्तुमसांप्रतम् ।। ५५ ।।

ಇತಃ—ಈ ನನ್ನಿಂದಲೇ, ಪ್ರಾಪ್ತಶ್ರೀಃ— ಅಭಿವೃದ್ಧಿಹೊಂದಿದ, ಸ ದೈತ್ಯಃ— ಆ ತಾರಕಾಸುರನು, ಇತ ಏವ—ನನ್ನಿಂದಲೇ ಕ್ಷಯಂ ನಾಶವನ್ನು, ನಾರ್ಹತಿ— ಹೊಂದಲು ಯೋಗ್ಯನಾಗುವುದಲ್ಲ. ವಿಷವೃಕ್ಷೋಽಪಿ—ವಿಷದ ಮರವಾದರೂ, ಸಂವರ್ಧ್ಯ— ಬೆಳಸಿ, ಸ್ವಯಂ ತಾನಾಗಿ ಛೇತ್ತುಂ—ಕತ್ತರಿಸಲು, ಅಸಾಂಪ್ರತಂ— ಯುಕ್ತವಲ್ಲ.

ಪ್ರಾಪ್ತಾಶ್ರೀಃ ಯೇನ ಸಃ ಪ್ರಾಪ್ತಶ್ರೀಃ॥ ವಿಷಸ್ಯ ವೃಕ್ಷಃ॥ ಅರ್ಹ— ಪೂಜಾಯಾಂ. ಲಟ್. ಅರ್ಹತಿ.॥

कृतं तेनेदमेव प्राङ्मया चास्मै प्रतिश्रुतम् ।।
वरेण शमितं लोकानलं दग्धुं हि तत्तपः ।। ५६ ।।

ಪ್ರಾಕ್—ಹಿಂದೆ, ತೇನ–ಆ ತಾರಕಾಸುರನಿಂದ, ಇದಮೇವ—ದೇವತೆಗಳಿಂದ ಮರಣವಿಲ್ಲದಿರುವುದೇ, ವೃತಂ— ಪ್ರಾರ್ಥಿಸಲ್ಪಟ್ಟಿತ್ತು. ಮಯಾ ಚ— ನನ್ನಿಂದಲೂ, ಅಸ್ಮೈ—ಈ ತಾರಕನಿಗೆ, ಪ್ರತಿಶ್ರುತಂ—ಆಗಲೆಂದು ಪ್ರತಿಜ್ಞೆ ಮಾಡಲ್ಪಟ್ಟಿತು. ಲೋಕಾನ್— ಪ್ರಪಂಚಗಳನ್ನು, ದಗ್ಧುಂ—ಸುಡಲು, ಅಲಂ—ಸಮರ್ಥವಾದ, ತತ್ತಪಃ—ಅವನ ತಪಸ್ಸು, ವರೇಣ—ವರದಾನದಿಂದ, ಶಮಿತಂ—ಶಾಂತಗೊಳಿಸಲ್ಪಟ್ಟಿತು.॥

ತಸ್ಯ ತಪಃ—ತತ್ತಪಃ॥ ೫೬॥

संयुगे सांयुगीनं तमुद्यतं प्रसहेत कः ॥
अंशादृते निषिक्तस्य नीललोहितरेतसः ।। ५७ ।।

ಸಂಯುಗೇ—ಯುದ್ಧದಲ್ಲಿ, ಉದ್ಯತಂ—ಉದ್ಯುಕ್ತನಾದ, ಸಾಂಯುಗೀನಂ— ಯುದ್ಧದಲ್ಲಿ ಚತುರನಾದ, ತಂ—ಆ ತಾರಕಾಸುರನನ್ನು, ನಿಷಿಕ್ತಸ್ಯ—ಒಂದು ಕ್ಷೇತ್ರದಲ್ಲಿ ಇಟ್ಟಿರುವ, ನೀಲಲೋಹಿತರೇತಸಃ — ಪರಮೇಶ್ವರನ ವೀರ್ಯದ, ಅಂಶಾತ್ ಋತೇ—ಅಂಶದಿಂದ ಅಲ್ಲದೆ, ಕಃ—ಯಾರು, ಪ್ರಸಹೇತ—ತಿರಸ್ಕರಿಸಿ ಯಾರು? (ಪರಮೇಶ್ವರನ ಪುತ್ರನಲ್ಲದೆ ಇನ್ನಾರೂ ಗೆಲ್ಲಲು ಸಮರ್ಥರಲ್ಲ)

ಸಂಯುಗೇ ಸಾಧುಃ ಸಾಂಯುಗೀನಃ ತಮ್॥ ನೀಲಲೋಹಿತಸ್ಯರೇತಃ, ತಸ್ಯ॥ ಪ್ರ–ಉಪಸರ್ಗ. ಷಹ–ಮರ್ಷಣೇ. ವಿಧಿಲಿಙ್. ಪ್ರ. ಪು. ಏ. । ಸಹೇತ–ಸಹೇ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಯಾತಾಂ–ಸಹೇರನ್ । ಸಹೇಥಾಃ–ಸಹೇಯಾಥಾಂ–ಸಹೇಧ್ವಮ್ । ಸಹೇಯ–ಸಹೇವಹಿ–ಸಹೇಮಹಿ ॥ ೫೭ ॥

ಸ ಹಿ ದೇವಃ ಪರಂ ಜ್ಯೋತಿಸ್ತಮಃಪಾರೇ ವ್ಯವಸ್ಥಿತಮ್ ॥
ಪರಿಚ್ಛಿನ್ನಪ್ರಭಾವರ್ದ್ಧಿರ್ನ ಮಯಾ ನ ಚ ವಿಷ್ಣುನಾ ॥ ೫೮ ॥

ಸಹಿ ದೇವಃ— ಆ ಶಿವನಾದರೋ, ತಮಃ ಪಾರೇ—ತಮೋಗುಣದ ಕೊನೆಯಲ್ಲಿ (ಅದನ್ನು ಅತಿಕ್ರಮಿಸಿ) ವ್ಯವಸ್ಥಿತಂ—ಇರುವ, ಪರಂಜ್ಯೋತಿಃ—ಉತ್ಕೃಷ್ಟವಾದ ತೇಜಃಸು (ಪರಮಾತ್ಮನು) ಮಯಾ—ನನ್ನಿಂದ, ಪರಿಚ್ಛಿನ್ನಪ್ರಭಾವರ್ದ್ಧಿಃ—(ತಿಳಿಯಲ್ಪಡುವ) ಪರಿಮಿತವಾದ ಪ್ರಭಾಪಾತಿಶಯವುಳ್ಳವನು, ನ—ಆಗುವುದಿಲ್ಲ. ನ ಚ ವಿಷ್ಣುನಾ—ವಿಷ್ಣುವಿನಿಂದಲೂ ಸಾಧ್ಯವಿಲ್ಲ. (ನಾನಾಗಲೀ ವಿಷ್ಣುವಾಗಲೀ ಅವನ ಮಹಿಮೆಯನ್ನು ತಿಳಿಯಲು ಸಮರ್ಥರಲ್ಲ) ಆದ್ದರಿಂದ ಅವನಿಗೆ ಅಸಾಧ್ಯವಾದದ್ದು ಯಾವುದೂ ಇಲ್ಲ)

ಪರಿಚ್ಛಿನ್ನಾ ಪ್ರಭಾವರ್ದ್ಧಿಃ ಯೇನ ಸಃ ॥ ಪ್ರಭಾವಾಣಾಂ ಋದ್ಧಿಃ ಪ್ರಭಾವರ್ದ್ಧಿಃ ॥ ೫೮ ॥

ತಮಾರೂಪೇಣ ತೇ ಯೂಯಂ ಸಂಯಮಸ್ತಿಮಿತಂ ಮನಃ ॥
ಶಂಭೋರ್ಯತಧ್ವಮಾಕೃಷ್ಟುಮಯಸ್ಕಾನ್ತೇನ ಲೋಹವತ್ ॥ ೫೯ ॥

ತೇ—ಕಾರ್ಯಸಿದ್ಧಿಯನ್ನು ಬಯಸುವ, ಯೂಯಂ—ನೀವು, ಸಂಯಮಸ್ತಿಮಿತಂ—ಸಮಾಧಿಯಿಂದ ನಿಶ್ಚಲವಾದ, ಶಂಭೋಃ—ಈಶ್ವರನ ಮನಃ—ಮನಸ್ಸನ್ನು, ಉಮಾರೂಪೇಣ—ಪಾರ್ವತಿಯ ಸೌಂದರ್ಯದಿಂದ, ಅಯಸ್ಕಾಂತೇನ—ಸೂಜಿಕಲ್ಲಿನಿಂದ, ಲೋಹವತ್—ಕಬ್ಬಿಣವನ್ನು ಎಂಬಂತೆ, ಆಕೃಷ್ಟುಂ ಸೆಳೆಯಲು, ಯತಧ್ವಂ—ಪ್ರಯತ್ನಿಸಿರಿ ॥

ಉಮಾಯಾಃ ರೂಪಂ, ತೇನ ॥ ಸಂಯಮೇನ ಸ್ತಿಮಿತಂ ॥ ಯತೀ–ಪ್ರಯತ್ನೇ. ಲೋಟ್. ಮ. ಪು. ಬ. । ಯತತಾಂ–ಯತೇತಾಂ–ಯತಂತಾಮ್ । ಯತಸ್ವ–ಯತೇಥಾಂ–ಯತಧ್ವಮ್ । ಯತೈ–ಯತಾವಹೈ–ಯತಾಮಹೈ ॥ ೫೯ ॥

ಉಭೇ ಏವಂ ಕ್ಷಮೇ ವೋಢುಮುಭಯೋರ್ಬೀಜಮಾಹಿತಮ್ ॥
ಸಾ ವಾ ಶಂಭೋಸ್ತದೀಯಾ ವಾ ಮೂರ್ತಿರ್ಜಲಮಯೀ ಮಮ ॥ ೬೦ ॥

ಉಭಯೋಃ— ಈಶ್ವರನ ಮತ್ತು ನನ್ನ, ಆಹಿತಂ—ಇಡಲ್ಪಟ್ಟ, ಬೀಜಂ—ವೀರ್ಯವನ್ನು (ತೇಜಸ್ಸು) ವೋಢುಂ—ಧರಿಸಲು, ಸಾ—ಆ ಪಾರ್ವತಿಯು,

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ವಾ—ವುತ್ತು, ಶಂಭೋಃ—ಶಿವನ ತದೀಯಾ—ಶಿವ ಸಂಬಂಧಿಯಾದ, ಮನು—ನನ್ನ ಜಲಮಯೀ ಮೂರ್ತಿಃ—ಜಲಮಯ ಶರೀರವು ಉಭೇ ಏವ—ಈ ಎರಡೇ, ಕ್ಷಮೇ—ಸಮರ್ಥವಾದವುಗಳು.

ತಸ್ಯ ಇಯಂ—ತದೀಯಾ ॥ ಜಲವಿಕಾರಃ ಜಲಮಯೀ ॥ ೬೦ ॥

तस्यात्मा शितिकण्ठस्य सैनापत्यमुपेत्य वः ॥
मोक्ष्यते सुरचन्दीनां वेणीर्वीर्यविभूतिभिः ॥ ೬೧ ॥

ತಸ್ಯ ಶಿತಿಕಂಠಸ್ಯ—ಆ ಪರಮೇಶ್ವರನ, ಆತ್ಮಾ—ಮಗನು, ವಃ—ನಿಮ್ಮ, ಸೈನಾಪತ್ಯಂ—ಸೇನಾಪತಿಯ ಅಧಿಕಾರವನ್ನು, ಉಪೇತ್ಯ—ಹೊಂದಿ, ವೀರ್ಯ ವಿಭೂತಿಭಿಃ—ಶೌರ್ಯಸಂಪತ್ತಿನಿಂದ, ಸುರಬಂದೀನಾಂ—ಸೆರೆಹಿಡಿಯಲ್ಪಟ್ಟ ದೇವತಾಸ್ತ್ರೀಯರ, ವೇಣೀಃ—ಜಡೆಗಳನ್ನು (ಹೆರಳು) ಮೋಕ್ಷ್ಯತೇ—ಬಿಡಿಸುತ್ತಾನೆ ॥ ಆ ರಾಕ್ಷಸನನ್ನು ಕೊಲ್ಲುತ್ತಾನೆ ಎಂದರ್ಥ.॥ ಸೇನಾಪತೇಃ ಭಾವಃ ಸೈನಾಪತ್ಯಮ್ ॥ ವಿರ್ಯಾಣಾಂ ವಿಭೂತಯಃ ವೀರ್ಯವಿಭೂತಯಃ, ತಾಭಿಃ ॥ ಮುಚಲೃ—ಮೋಕ್ಷಣೇ (ಉಭಯಪದೀ) ಲೃಟ್. ಪ್ರ. ಪು. ಏ. । ಮೋಕ್ಷ್ಯತೇ ಮೋಕ್ಷ್ಯೇತೇ—ಮೋಕ್ಷ್ಯಂತೇ—ಇತ್ಯಾದಿ ॥ ೬೧ ॥

इति व्याहृत्य विबुधान्विश्वयोनिस्तिरोदधे ॥
मनस्याहितकर्तव्यास्तेऽपि देवा दिवं ययुः ॥ ೬೨ ॥

ವಿಶ್ವಯೋನಿಃ—ಪ್ರಪಂಚಕ್ಕೆ ಕಾರಣನಾದ ಬ್ರಹ್ಮನು, ವಿಬುಧಾನ್—ದೇವತೆಗಳಿಗೆ, ಇತಿ—ಹೀಗೆ, ವ್ಯಾಹೃತ್ಯ—ಹೇಳಿ, ತಿರೋದಧೇ—ಅಂತರ್ಧಾನ ಹೊಂದಿದನು. ತೇ ದೇವಾಃ ಅಪಿ—ಆ ದೇವತೆಗಳೂ ಕೂಡಾ ಮನಸಿ—ಮನಸ್ಸಿನಲ್ಲಿಯೇ ಆಹಿತಕರ್ತವ್ಯಾಃ—ನಿಶ್ಚಿತವಾದ ಮುಂದಿನ ಕಾರ್ಯವುಳ್ಳವರಾಗಿ, ದಿವಂ—ಸ್ವರ್ಗಕ್ಕೆ, ಯಯುಃ—ಹೋದರು ॥ ೬೨ ॥

ವಿಶ್ವಸ್ಯ ಯೋನಿಃ ॥ ಆಹಿತಂ ಕರ್ತವ್ಯಂ ಯೈಸ್ತೇ, ಆಹಿತಕರ್ತವ್ಯಾಃ ॥ ತಿರಸ್—ಉಪಪದ. ಡುಧಾಞ್—ಧಾರಣಪೋಷಣಯೋಃ. ಲಿಟ್. ಪ್ರ. ಪು. ಏ. । ದಧೇ—ದಧಾತೇ—ದಧಿರೇ । ದಧಿಷೇ—ದಧಾಥೇ—ದಧಿಧ್ವೇ । ದಧೇ—ದಧಿವಹೇ—ದಧಿಮಹೇ ॥ ಯಾ—ಪ್ರಾಪಣೇ—ಲಿಟ್ । ಯಯೌ—ಯಯತುಃ—ಯಯುಃ । ಯಯಿಥ, ಯಯಾಥ—ಯಯಥುಃ—ಯಯ । ಯಯೌ—ಯಯಿವ—ಯಯಿಮ ॥

CC-0. Bhagavad Ramanuja National Research Institute, Melukote Collection.